ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 16 । ಸಂಚಿಕೆ 3 । ಜನವರಿ 10-16, 2022 । ಪುಟ 16 । ರೂ. 10/-

http://janashakthi.wordpress.com e-mail : js_weekly@yahoo.com





ಕಾಂ. ಅನಸೂಯ

ಕಾಂ. ಮಂಜಯ್ಯ ಭಂಡಾರಿ ಹರೇಕಳ

ಲಾಲ್ ಸಲಾಂ




ಭ್ರಷ್ಟಾಚಾರ ಮತ್ತು ಕಾರ್ಪೊರೇಟ್ ಲೂಟಿಯಿಂದ ಮುಕ್ತವಾದ ಜನತೆಯ ಸಮೃದ್ಧ, ಸೌಹಾರ್ದ ನವ ಕರ್ನಾಟಕ ಕಟ್ಟೋಣ



'ದ್ವೇಷ ಭಾಷಣ'ಗಳಷ್ಟೇ ಅಲ್ಲ ಫ್ಯಾಸಿಸ್ಟ್ ತೆರನ ಹಿಂಸಾಚಾರಕ್ಕೆ ಕರೆ?



ರೈತಾಪಿ ಕೃಷಿಯ ಸಂರಕ್ಷಣೆ ಮತ್ತು ಕೃಷಿಯ ಕಾರ್ಪೋರೇಟೀಕರಣದ ವಿರುದ್ಧ ಸಮರಶೀಲ ಹೋರಾಟ



ಜನವರಿ 2ರಿಂದ 4 ರವರೆಗೆ ನಡೆದ ಸಿಪಿಐ(ಎಂ)ನ 23ನೇ ಕರ್ನಾಟಕ ರಾಜ್ಯ ಸಮ್ಮೇಳನ 29 ನಿರ್ಣಯಗಳನ್ನು ಅಂಗೀಕರಿಸಿತು. ಉದ್ಘಾಟನಾ ಅಧಿವೇಶನ ಮೂರು ಪ್ರಮುಖ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು. ಇವನ್ನು ಈ ಪುಟದಲ್ಲಿ ಕೊಡಲಾಗಿದೆ. ಇವುಗಳಲ್ಲಿ ಮೊದಲನೆಯದು ಕೃಷಿರಂಗವನ್ನು ಕುರಿತಾದ್ದು. ಕೃಷಿಯ ಕಾರ್ಪೋರೇಟೀಕರಣಕ್ಕಾಗಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ರೈತ, ದಲಿತ, ಜನವಿರೋದಿಯಾಧ ಮೂರು ಕೃಷಿ ಕಾಯ್ದೆಗಳ ತಿದ್ದುಪಡಿಗಳನ್ನು ರದ್ದು ಮಾಡಬೇಕೆಂದು ಆಗ್ರಹಿಸುತ್ತ ರೈತಾಪಿ ಕೃಷಿಯನ್ನು ಬಲಪಡಿಸಲು ಪ್ರಬಲ ಹೋರಾಟಗಳಿಗೆ ಈ ನಿರ್ಣಯ ಕರೆ ನೀಡಿತು. ಕಾಂ. ಜಿ.ಸಿ.ಬಯ್ಯಾರೆಡ್ಡಿ ಈ ನಿರ್ಣಯವನ್ನು ಮಡಿಸಿದರು,ಕಾಂ.ಸುನಂದ ಇದನ್ನು ಅನುಮೋದಿಸಿದರು. ಈ ನಿರ್ಣಯದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ.

ಕೃಷಿಯ ಕಾರ್ಪೋರೇಟೀಕರಣಕ್ಕಾಗಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ ಹಾಗು ಜಾನುವಾರು ಹತ್ಯೆ ನಷೇದ ಕಾಯ್ದೆಗಳ ರೈತ, ದಲಿತ, ಜನವಿರೋಧಿ ತಿದ್ದುಪಡಿಗಳನ್ನು ಕೂಡಲೇ ರದ್ದು ಮಾಡಬೇಕೆಂದು ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಯುತ್ತಿರುವ ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನ ಆಗ್ರಹಿಸುತ್ತದೆ. ಈ ಶತಮಾನದ ಚಾರಿತ್ರಿಕ ದೆಹಲಿಯ ರೈತ ಹೋರಾಟದ ಪರಿಣಾಮವಾಗಿ ಬಿಜೆಪಿ ಕೇಂದ್ರ ಸರ್ಕಾರ, ಈಗಾಗಲೇ ತನ್ನ ತಪ್ಪು ಒಪ್ಪಿಕೊಂಡು ಕರಾಳ ಮೂರು ಕೃಷಿ ಕಾಯ್ದೆಗಳನ್ನು ರದ್ದು ಪಡಿಸಿರುವ ಹಿನ್ನೆಲೆಯಲ್ಲಿ ಇದೇ ಮೂರು ಕೃಷಿ ಕಾಯ್ದೆಗಳ ಭಾಗವಾಗಿ ರಾಜ್ಯದಲ್ಲಿ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳ ತಿದ್ದುಪಡಿಗಳನ್ನು ರಾಜ್ಯ ಸರ್ಕಾರ ತಕ್ಷಣ ರದ್ದುಪಡಿಸಿ, "ರೈತಾಪಿ ಕೃಷಿ"ಯನ್ನು ಬಲಪಡಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಬೇಕೆಂದು, ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಪ್ರಬಲ ಹೋರಾಟಗಳನ್ನು ಸಂಘಟಿಸಲು ರೈತರು, ದಲಿತರು, ಕೃಷಿ ಕೂಲಿಕಾರರ ಇತ್ಯಾದಿ ದುಡಿಯುವ ಜನ ಮುಂದಾಗಬೇಕೆಂದು ಸಿಪಿಐ(ಎಂ) ಸಮ್ಮೇಳನ ಕರೆ ನೀಡುತ್ತದೆ.

ಕೃಷಿ ಭೂಮಿ, ಕೃಷಿ ಉತ್ಪಾದನೆ, ಕೃಷಿ ಮಾರುಕಟ್ಟೆಯನ್ನು ಜಗತ್ತಿನ ಮತ್ತು ದೇಶದ ಕಾರ್ಪೋರೇಟ್ ಕಂಪನಿಗಳಿಗೆ ಧಾರೆ ಎರೆದು, ಸದ್ಯದ "ರೈತಾಪಿ ಕೃಷಿ" ಯನ್ನು ಕಾರ್ಪೋರೇಟ್ ಕರಣ ಮಾಡವ ಉದ್ದೇಶದಿಂದ ಬಿಜೆಪಿ ಕೇಂದ್ರ ಸರ್ಕಾರ, ಕರೋನಾ ಲಾಕ್‌ಡೌನ್‌ಗಳಿಂದ ರೈರು ಜನ ಮನೆಗಳಿಂದ ಹೊರ ಬರಲಾರದಂತಹ ಪರಿಸ್ಥಿತಿಯಲ್ಲಿ ಆರಂಭದಲ್ಲಿ ಸುಗ್ರೀವಾಜ್ಞೆಗಳ ಮೂಲಕ, ಆ ನಂತರ ಅಪ್ರಜಾಸತ್ತಾತ್ಮಕವಾಗಿ ಸಂಸತ್ತ್‌ನಲ್ಲಿ ಅಂಗೀಕಾರ ಪಡೆದು ಮೂರು ಕರಾಳ ಕೃಷಿ ಕಾಯ್ದೆಗಳನ್ನು ಜಾರಿ ಮಾಡಲು ಹೊರಟಿತ್ತು. 'ರೈತಾಪಿ ಕೃಷಿ'ಯನ್ನು ನಾಶ ಮಾಡುವ ಕೇಂದ್ರ ಸರ್ಕಾರದ ಈ ರೈತ ದ್ರೋಹಿ ಧೋರಣೆಗಳ ವಿರುದ್ಧ ದೇಶದ ನೂರು ರೈತ ಸಂಘಟನೆಗಳು ಸಿಡ್ಡಿದ್ದವು. 26, 27 ನವೆಂಬರ್

ಪುಟ 15 ನೋಡಿ

ಕಾರ್ಪೊರೇಟ್ ಬಂಡವಾಳದ ಪರವಾಗಿ ರೂಪಿಸಿರುವ ಕಾರ್ಮಿಕ ಸಂಹಿತೆಗಳ ಜಾರಿಗೆ ರಾಜ್ಯ ಸರಕಾರದ ಸುಗ್ರೀವಾಜ್ಞೆಗೆ ವಿರೋಧ

ಪಾರ್ಲಿಮೆಂಟ್‌ನಲ್ಲಿ ಯಾವುದೇ ಚರ್ಚೆಯಿಲ್ಲದೆ ಕೋವಿಡ್ ಪೂರ್ವದಲ್ಲಿ ವೇತನ ಸಂಹಿತೆ–2019 ನ್ನು, ಕೋವಿಡ್ ಲಾಕ್ಡೌನ್ ಸಂದರ್ಭದಲ್ಲಿ ಇನ್ನೂ ಮೂರು ಕಾರ್ಮಿಕ ಸಂಹಿತೆಗಳನ್ನು ಕಾರ್ಮಿಕ ವಿರೋಧಿಯಾಗಿ ಕಾರ್ಪೊರೇಟ್ ಬಂಡವಾಳದ ಪರವಾಗಿ ರೂಪಿಸಿದೆ. ಈ ಸಂಹಿತೆಗಳನ್ನು ಜಾರಿಗೆ ತರಲು ನಿಯಮಗಳನ್ನು ಕೇಂದ್ರ ಸರ್ಕಾರ ರೂಪಿಸುತ್ತಿದೆ. ಅದಕ್ಕೆ ಪೂರಕವಾಗಿ ರಾಜ್ಯ ಬಿಜೆಪಿ ಸರ್ಕಾರ ಸಹ ಕೋವಿಡ್ ಸಂದರ್ಭದಲ್ಲಿ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ಮಾಡಿ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಈ ಸಂಹಿತೆಗಳನ್ನು ವಿರೋಧಿಸಿರುವ 23ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನ, ಈ ನಿಯಮಗಳಲ್ಲಿ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಕೈಬಿಟ್ಟು ಕಾರ್ಮಿಕ ಪರವಾದ ಮತ್ತು ರಾಜ್ಯವ್ಯಾಪಿ ಸಮಾನ ಕನಿಷ್ಟ ವೇತನ, ಕಾರ್ಮಿಕ ಸಂಘ ಮಾನ್ಯತೆಗೆ, ಗುತ್ತಿಗೆ ಮತ್ತಿತರೆ ಖಾಯಂಯೇತರ ಕಾರ್ಮಿಕರ ಖಾಯಂಗೆ ಕಾನೂನುಗಳನ್ನು ರೂಪಿಸಬೇಕೆಂದು ಒತ್ತಾಯಿಸಿದೆ. ಕಾಂ. ಕೆಎನ್ ಉಮೇಶ್ ಮಂಡಿಸಿದ, ಕಾಂ. ಚಂದ್ರಪ್ಪ ಹೊಸ್ಕೆರಾ ಅನುಮೋದಿಸಿದ ಈ ನಿರ್ಣಯದ ಪೂರ್ಣಪಾಟ ಹೀಗಿದೆ:



ಕೇಂದ್ರದಲ್ಲಿ ಮೋದಿ ಸರ್ಕಾರ 2ನೇ ಬಾರಿಗೆ ಅಧಿಕಾರಕ್ಕೆ ಬಂದ ನಂತರ ಕಾರ್ಮಿಕ ಹಕ್ಕುಗಳನ್ನು ದಮನ ಮಾಡುವ ತನ್ನ ನೀತಿಯನ್ನು ತೀವ್ರಗೊಳಿಸಿದೆ. ಕಾರ್ಪೊರೇಟ್ ಬಂಡವಾಳಗಾರರ ಲಾಭದ ಪ್ರಮಾಣವನ್ನು ಹೆಚ್ಚಿಸಲು ಕಾರ್ಮಿಕ ವಿರೋಧಿ ನೀತಿಗಳನ್ನು ತೀವ್ರತರವಾಗಿ ಜಾರಿ ಮಾಡುತ್ತಿದೆ. ದುಡಿಯುವ ವರ್ಗವು ದೇಶದಲ್ಲಿ ಸಮರಶೀಲ ಹೋರಾಟಗಳನ್ನು ನಡೆಸಿ ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾನಂತರದಲ್ಲಿ ಪಡೆದ ಕಾರ್ಮಿಕ ಕಾನೂನುಗಳ ಸರಳೀಕರಣದ ಹೆಸರಿನಲ್ಲಿ 29 ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸಿ ನಾಲ್ಕು ಸಂಹಿತೆಗಳಾಗಿ ರೂಪಿಸಿ ಅಂಗೀಕರಿಸಿದೆ.

ಪಾರ್ಲಿಮೆಂಟ್‌ನಲ್ಲಿ ಯಾವುದೇ ಚರ್ಚೆಯಿಲ್ಲದೆ ಕೋವಿಡ್ ಪೂರ್ವದಲ್ಲಿ ವೇತನ ಸಂಹಿತೆ–2019 ನ್ನು, ಕೋವಿಡ್ ಲಾಕ್ಡೌನ್ ಸಂದರ್ಭದಲ್ಲಿ ಕೈಗಾರಿಕಾ ಸಂಬಂಧಗಳ ಸಂಹಿತೆ–2020, ಸಾಮಾಜಿಕ ಭದ್ರತಾ ಸಂಹಿತೆ–2020 ಹಾಗೂ ಉದ್ಯೋಗ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಶರತ್ತುಗಳ ಸಂಹಿತೆ–2020 ಗಳನ್ನು ಕಾರ್ಮಿಕ ವಿರೋಧಿಯಾಗಿ ಕಾರ್ಪೊರೇಟ್ ಬಂಡವಾಳ ಪರವಾಗಿ ರೂಪಿಸಿದೆ. ಈ ಸಂಹಿತೆಗಳನ್ನು ಜಾರಿಗೆ ತರಲು ನಿಯಮಗಳನ್ನು ಕೇಂದ್ರ ಸರ್ಕಾರ ರೂಪಿಸುತ್ತಿದೆ. ಅದಕ್ಕೆ ಪೂರಕವಾಗಿ ರಾಜ್ಯ ಬಿಜೆಪಿ ಸರ್ಕಾರ ಸಹ ಕೋವಿಡ್ ಸಂದರ್ಭದಲ್ಲಿ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ಮಾಡಿ ಸುಗ್ರೀವಾಜ್ಞೆಯನ್ನು ಹೊರಡಿಸಿತು. ಅದು ವಿಧಾನಸಭೆಯಲ್ಲಿ ಅಂಗೀಕಾರ ಆದರೂ ವಿಧಾನ ಪರಿಷತ್ತಿನಲ್ಲಿ ಸೋಲಾಯಿತು. ನಂತರದಲ್ಲಿ ಅಸಂವಿಧಾನಿಕವಾಗಿ ಮತ್ತೆ ರಾಜ್ಯ ಸರ್ಕಾರ ಸುಗ್ರೀವಾಜ್ಞೆಯನ್ನು ಹೊರಡಿಸಿತು. ಪ್ರಸ್ತುತ ಈ ಸಂಹಿತೆಗಳ ಜಾರಿ ಮಾಡುವ ನಿಟ್ಟಿನಲ್ಲಿ ಕರಡು ನಿಯಮಗಳನ್ನು ಪ್ರಕಟಿಸಿದೆ.

ಈ ಸಂಹಿತೆಗಳು ಜಾರಿಯಾದರೆ ಕಾರ್ಮಿಕರು ಸಂಘ ಕಟ್ಟುವ, ಸಾಮೂಹಿಕ ಚೌಕಾಸಿ ನಡೆಸುವ, ಮುಷ್ಕರ ನಡೆಸುವ ಹಕ್ಕುಗಳು ಇದ್ದರೂ ಇಲ್ಲದಂತಾಗಲಿದೆ. ನಿಗದಿತ ಕಾಲಾವಧಿಯ ಕಾರ್ಮಿಕರ (ಎಫ್.ಟಿ.ಇ) ನೇಮಕಕ್ಕೆ ಮುಕ್ತ ಅವಕಾಶ ಕಲ್ಪಿಸಿ ಖಾಯಂ ಕೆಲಸ, ಕಾರ್ಮಿಕರು ಇಲ್ಲದಾಗಲಿದೆ. 300ಕ್ಕಿಂತ ಕಡಿಮೆ ಕಾರ್ಮಿಕರಿದ್ದಲ್ಲಿ ಲೇ–ಆಫ್ ರಿಟ್ರೆಂಚ್‌ಮೆಂಟ್ ಮತ್ತು ಕಾರ್ಖಾನೆ ಮುಚ್ಚಲು ಸರ್ಕಾರದ ಅನುಮತಿ ಅಗತ್ಯ ಇಲ್ಲದಿರುವುದರಿಂದ ಶೇ.90.76 ರಷ್ಟು ಕೈಗಾರಿಕೆಗಳು ರಾಜ್ಯ ಸರ್ಕಾರದ ಪೂರ್ವ ಅನುಮತಿ ಇಲ್ಲದೆ ಯಾವಾಗ ಬೇಕಾದರೂ ಲೇ–ಆಫ್, ರಿಟ್ರೆಂಚ್‌ಮೆಂಟ್ ಮಾಡಲು ಮತ್ತು ಕಾರ್ಖಾನೆ ಮುಚ್ಚಲು ಮುಕ್ತ ಅವಕಾಶ ಕಲ್ಪಿಸಲಿದೆ. ಕಾರ್ಮಿಕರ ಮೇಲೆ ಅಧಿಕ ಉತ್ಪಾದನೆಯ ಒತ್ತಡ ಹೇರಲು ಅದನ್ನು ಒಪ್ಪದಿದ್ದಲ್ಲಿ ಸ್ವಯಂ ನಿವೃತ್ತಿ ಪಡೆಯುವಂತೆ ಮಾಡಿ ಕಾರ್ಮಿಕರನ್ನು ಬೀದಿಪಾಲು ಮಾಡಲಿದೆ. ಈಗಾಗಲೇ 300ಕ್ಕಿಂತ ಕಡಿಮೆ ಕಾರ್ಮಿಕರಿದ್ದಲ್ಲಿ ಲೇ–ಆಫ್ ರಿಟ್ರೆಂಚ್‌ಮೆಂಟ್ ಮತ್ತು ಕಾರ್ಖಾನೆ ಮುಚ್ಚಲು ಸರ್ಕಾರದ ಅನುಮತಿ ಅಗತ್ಯವಿಲ್ಲವೆಂಬಂತೆ ರಾಜ್ಯ

ಪುಟ 15 ನೋಡಿ

ರಾಜ್ಯದ ಎಲ್ಲ ಭ್ರಷ್ಟಾಚಾರ ಪ್ರಕರಣಗಳ ನ್ಯಾಯಾಂಗ ತನಿಖೆ ನಡೆಸಬೇಕು

ಪ್ರಧಾನಿ ನರೇಂದ್ರ ಮೋದಿಯವರು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು 'ಹತ್ತು ಪರ್ಸಟೆಂಜ್ ಸರ್ಕಾರ್' ಎಂದು ಲೇವಡಿ ಮಾಡಿದ್ದರು ಆದರೆ ಈಗ ಕರ್ನಾಟಕದ ಗುತ್ತಿಗೆದಾರರ ಸಂಘವೇ ರಾಜ್ಯದ ಬಿಜೆಪಿ ಸರ್ಕಾರ '40 ಪರ್ಸೆಂಟೇಜ್' ಸರ್ಕಾರವಾಗಿದೆ ಎಂದು ಪ್ರಧಾನಿಗೇ ದೂರು ಸಲ್ಲಿಸುವ ಪರಿಸ್ಥಿತಿ ಉಂಟಾಗಿದೆ. ರಾಜ್ಯದ ಅಭಿವೃದ್ಧಿಗೆ ಮಾರಕವಾದ, ಜನತೆಯ ತೆರಿಗೆ ಹಣವನ್ನು ಲೂಟಿ ಮಾಡುವ ಈ ಭ್ರಷ್ಟಾಚಾರವನ್ನು ನಿಗ್ರಹಿಸಲು ರಾಜ್ಯ ಸರ್ಕಾರ ಅಗತ್ಯ ಕ್ರಮವಹಿಸಬೇಕು, ರಾಜ್ಯದ ಎಲ್ಲ ಭಷ್ಟಾಚಾರ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಲು ರಾಜ್ಯ ಸರ್ಕಾರ ಮುಂದಾಗಬೇಕೆಂದು ಸಿಪಿಐ(ಎಂ) ರಾಜ್ಯ ಸಮ್ಮೇಳನ ಆಗ್ರಹಿಸಿದೆ. ಕಾಂ.ಕೆ.ನೀಲಾ ಈ ನಿರ್ಣಯವನ್ನು ಮಂಡಿಸಿದರು, ಕಾಂ.ಮುನೀರ್ ಕಾಟಿಪಳ್ಳ ಅನುಮೋದಿಸಿದರು.

ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ವ್ಯಾಪಕವಾಗಿರುವ ಬೆಳೆದಿರುವ ಭ್ರಷ್ಟಚಾರದಿಂದ ಕರ್ನಾಟಕ ದೇಶದಲ್ಲೇ 4ನೇ ಸ್ಥಾನ ಪಡೆದುಕೊಂಡಿದೆ. ಟ್ರಾನ್ಸ್‌ಫರೆನ್ಸ್ ಇಂಟರ್ ನ್ಯಾಷನಲ್ ಇಂಡಿಯಾ (ಟಿಐಐ) ಎನ್ನುವ ಸ್ವಯಂ ಸೇವಾ ಸಂಸ್ಥೆ ಮಾಡಿರುವ ಇತ್ತೀಚಿನ ಸಮೀಕ್ಷೆಯಲ್ಲಿ ಭ್ರಷ್ಟಚಾರದ ವಿಚಾರದಲ್ಲಿ ಉತ್ತರಪ್ರದೇಶ, ಜಾರ್ಖಂಡ್ ಹಾಗೂ ತೆಲಂಗಾಣ ರಾಜ್ಯಗಳು ಕ್ರಮೇಣ ಒಂದು ಎರಡು ಹಾಗೂ ಮೂರನೇ ಸ್ಥಾನಗಳಲ್ಲಿದ್ದರೆ ನಂತರದ ಸ್ಥಾನ ಕರ್ನಾಟಕದ್ದಾಗಿದೆ. ವಿಶೇಷವೆಂದರೆ ಹಿಂದಿನ ಬಿಜೆಪಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ತ್ವರಿತ ನ್ಯಾಯವ್ಯವಸ್ಥೆಯನ್ನು ಬಲಪಡಿಸುವ ಘೋಷಣೆ ಮಾಡಿದ ಬೆನ್ನಲ್ಲೇ ಈ ಸಮೀಕ್ಷೆ ಪ್ರಕಟಗೊಂಡಿದೆ ಎನ್ನುವುದು ವಿಪರ್ಯಾಸದ ಸಂಗತಿಯಾಗಿದೆ. ಕರ್ನಾಟಕದ ಶೇ 40 ರಷ್ಟು ಜನರು ತಮ್ಮ ಭೂ ಸಂಬಂಧಿ, ನೊಂದಣಿ ಹಾಗೂ ಸಮಸ್ಯೆಗಳ ಪರಿಹಾರಕ್ಕಾಗಿ, ಶೇ21 ರಷ್ಟು ಜನರು ನಗರ ಹಾಗೂ ಮುನಿಸಿಪಾಲಿಟಿಗಳಲ್ಲಿನ ಕೆಲಸಗಳಿಗಾಗಿ ಹಾಗೂ ಇನ್ನೂ ಶೇ 23 ರಷ್ಟು ಜನರು ಪೊಲೀಸ್ ಠಾಣೆಗಳಲ್ಲಿ ಲಂಚ ನೀಡಿ ಕೆಲಸ ಮಾಡಿಕೊಳ್ಳುತ್ತಿದ್ದಾರೆ ಎಂದು ಈ ಸಮೀಕ್ಷೆ ಬಯಲುಗೊಳಿಸಿದೆ.

ಕಳೆದ ಬಾರಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಪ್ರಧಾನಿ ನರೇಂದ್ರ ಮೋದಿಯವರು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು 'ಹತ್ತು ಪರ್ಸಟೆಂಜ್ ಸರ್ಕಾರ್' ಎಂದು ಲೇವಡಿ ಮಾಡಿದ್ದರು ಆದರೆ ಈಗ ಕರ್ನಾಟಕದ ಗುತ್ತಿಗೆದಾರರ ಸಂಘವೇ ರಾಜ್ಯದ ಬಿಜೆಪಿ ಸರ್ಕಾರ '40 ಪರ್ಸೆಂಟೇಜ್' ಸರ್ಕಾರವಾಗಿದೆ, ಇದರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಸ್ವತ: ಪ್ರಧಾನಿಗೆ ಕಳೆದ



ಡಿಸೆಂಬರ್ ನಲ್ಲಿ ದೂರು ನೀಡಿದ್ದರೂ ಯಾವುದೇ ಕ್ರಮವಹಿಸಿಲ್ಲ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಇತ್ತೀಚಿಗೆ ಪತ್ರಿಕಾಗೋಷ್ಟಿ ನಡೆಸಿ ಬಿಜೆಪಿ ಸರ್ಕಾರದ ಭ್ರಷ್ಟಚಾರದ ಮುಖವನ್ನು

ಪುಟ 12 ನೋಡಿ

ಸಂಪಾದಕೀಯ

ಮೇಕೆದಾಟು ಶೀಘ್ರ ಇತ್ಯರ್ಥವಾಗಲಿ

ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಯೋಜನೆ ಈ ಮೇಕೆದಾಟು ಯೋಜನೆ. ಮೇಕೆದಾಟು ಬಳಿ ಹರಿಯುವ ಕಾವೇರಿ ನದಿಗೆ ಸಮಾನಂತರ ಜಲಾಶಯ ನಿರ್ಮಾಣ ಮಾಡಿ 66 ಟಿಎಂಸಿ ಹೆಚ್ಚುವರಿ ನೀರನ್ನು ಸಂಗ್ರಹಿಸಿ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಇದಾಗಿದೆ. ಈ ಯೋಜನೆಯಿಂದ ಬೇಸಿಗೆಯಲ್ಲಿ ಉಂಟಾಗುವ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಿಕೊಳ್ಳುವುದಾಗಿದೆ. ಈಗ ಬೆಂಗಳೂರು ನಗರಕ್ಕೆ 1350 ಎಂಎಲ್‌ಡಿ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. 2030 ಕ್ಕೆ 2285 ಎಂಎಲ್‌ಡಿ ನೀರು ಬೇಕಾಗುವುದು. ಮೇಕೆದಾಟುನಿಂದ ಬೆಂಗಳೂರು ನಗರ್ ಮತ್ತು ಕೆಲ ಬಯಲು ಸೀಮೆಯ ಜಿಲ್ಲೆಗಳಿಗೆ ನೀರನ್ನು ಪೂರೈಸಿ, ಎದುರಾಗಬಹುದಾದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿಕೊಳ್ಳಬಹುದು. ಇದೇ ವೇಳೆಗೆ ತಮಿಳುನಾಡಿಗೆ ಅದರ ಪಾಲಿನ 177 ಟಿಎಂಸಿ ನೀರನ್ನು ನೀಡಿ ಸಮುದ್ರಕ್ಕೆ ಹರಿದು ವ್ಯರ್ಥವಾಗುವ ನೀರನ್ನು ಮೇಕೆದಾಟುವಿನಲ್ಲಿ ಸಂಗ್ರಹಿಸಿ ಜಲ ವಿದ್ಯುತ್ ಉತ್ಪಾದನೆ ಮಾಡುವ ಉದ್ದೇಶವಾಗಿದೆ.

ಮೇಕೆದಾಟು ಅಣೆಕಟ್ಟನ್ನು ಕುಡಿಯುವ ನೀರು ಮತ್ತು ವಿದ್ಯುತ್ ಉತ್ಪಾದನೆಗಾಗಿ 5912 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಈ ಅಣೆಕಟ್ಟೆಯಲ್ಲಿ 5 ಟಿಎಂಸಿ ನೀರು ಸಂಗ್ರಹಿಸಲಾಗುತ್ತದೆ. 400 ಮೇಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತದೆ. ಮೇಕೆದಾಟು ಒಂದು ಪ್ರವಾಸಿ ತಾಣವೂ ಆಗಿರುತ್ತದೆ. ಕಾವೇರಿ ನದಿ ಬಂಡೆಗಳ ನಡುವೆ ಹರಿಯುತ್ತದೆ. ಅಲ್ಲಿ ಬೆಳೆಯುವ ಹುಲ್ಲನ್ನು ತಿನ್ನಲು ಹೋಗುವ ಮೇಕೆಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಮೇಕೆಗಳು ದಾಟುತ್ತಿರುತ್ತವೆ. ಹಾಗಾಗಿ ಈ ಸ್ಥಳಕ್ಕೆ ಮೇಕೆದಾಟು ಎಂಬ ಹೆಸರು ಬಂದಿದೆ.

ಕಾಂಗ್ರೆಸ್‌ನವರು ಈ ವಿಷಯದಲ್ಲಿ ರಾಜಕಾರಣ ಮಾಡಲು ಹೊರಟಿರಬಹುದು. ಚುನಾವಣೆ ಸಮೀಪದಲ್ಲಿರುವ ಕಾರಣ ಅವರ ಕೆಲಸ ಅವರು ಮಾಡುತ್ತಿದ್ದಾರೆ. ಆದರೆ ಕೇಂದ್ರದಲ್ಲಿಯೂ ರಾಜ್ಯದಲ್ಲಿಯೂ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿದೆ. ಯಾಕೆ ಪ್ರಧಾನಿ ಮೋದಿಯವರು ಈ ವಿವಾದವನ್ನು ಏಕೆ ಬಗೆಹರಿಸಲಾರದು?

ಬಿಜೆಪಿ ಅಧಿಕಾರಕ್ಕೆ ಬಂದು ಎರಡೂವರೆ ವರ್ಷದಲ್ಲಿ ಡಬ್ಬಲ್ ಎಂಜಿನ್ ಏನು ಮಾಡಿತು ಎಂಬ ಪ್ರಶ್ನೆ.

ಮೇಕೆದಾಟು ವಿಷಯದಲ್ಲಿ ರಾಜಕೀಯ ರಹಿತವಾದ ಒಗ್ಗಟ್ಟು ಪ್ರದರ್ಶಿಸಬೇಕು. ರಾಜ್ಯ ಸರ್ಕಾರದ ಉಸ್ತುವಾರಿಯಲ್ಲಿರುವ 'ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ' ಒಪ್ಪಿಗೆ ನೀಡಿರುವುದರಿಂದ ಅದು ವರ್ಷಗಳು ಕಳೆದರೂ ಯೋಜನೆ ಕಡತದಲ್ಲಿ ಉಳಿಸಿದೆ. ಈ ಯೋಜನೆ ಕುಡಿಯುವ ನೀರಿನ ಯೋಜನೆ. ಇದಕ್ಕೆ ಯಾರೂ ತಕರಾರು ಮಾಡುವಂತಿಲ್ಲ. ಈ ಯೋಜನೆಗೆ ಸುಪ್ರೀಂ ಕೋರ್ಟ್ ನೀಡಿದ ತಡೆಯಾಜ್ಞೆ ತೆರವುಗೊಳಿಸಬೇಕು. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಕಾರ ಅಗತ್ಯ. ತಮಿಳುನಾಡಿನ ಸಹಕಾರವನ್ನು ಪಡೆಯಲು ಸಾಧ್ಯವಾಗಬೇಕು.

ಕೋವಿಡ್–19 ಮೂರನೇ ಅಲೆಯ ನಿಯಂತ್ರಣಕ್ಕೆ ಅಗತ್ಯ ಸಮಗ್ರ ಕ್ರಮವಹಿಸಲು ಸಿಪಿಐ(ಎಂ) ಒತ್ತಾಯ

ರಾಜ್ಯದಲ್ಲಿ ಕೋವಿಡ್–19 ಮೂರನೇ ಅಲೆಯು ವ್ಯಾಪಿಸುತ್ತಿದ್ದು 04.01.2022 ರ ಮಾಹಿತಿಯಂತೆ ಸಕ್ರಿಯ ಪ್ರಕರಣಗಳ ಸಂಖ್ಯೆಯು 17,414 ಇದ್ದದ್ದು 06.01.2022 ರ ಹೊತ್ತಿಗೆ ಅವು 22,173 ಆಗಿ, ಸುಮಾರು 4,759 ಪ್ರಕರಣಗಳು ಹೆಚ್ಚಳಗೊಂಡಿವೆ.

ಕರ್ನಾಟಕ ಸರಕಾರ ಕೋವಿಡ್ –19 ಮೂರನೇ ಅಲೆಯ ನಿಯಂತ್ರಣಕ್ಕೆ ಲಸಿಕೆ ನೀಡುವ ಕಾರ್ಯಕ್ರಮವನ್ನು ಮತ್ತು ಅದೇ ಸಂದರ್ಭದಲ್ಲಿ, ರಾತ್ರಿ ಹಾಗೂ ವಾರದ ಕೊನೆಯಲ್ಲಿ ಕರ್ಫ್ಯೂ ವಿಧಿಸಿದೆ. ಅಗತ್ಯ ವಿರುವ ಜನ ಸಮುದಾಯಗಳಿಗೆ ಲಸಿಕೆ ನೀಡುವ ಕ್ರಮವನ್ನು ನಾವು ಸ್ವಾಗತಿಸುತ್ತೇವೆ ಮತ್ತು ಅದನ್ನು ವೇಗವಾಗಿ ವಿಸ್ತರಿಸಲು ಒತ್ತಾಯಿಸುತ್ತೇವೆ. ಆದರೇ, ಇದು ಮತ್ತು ಕೇವಲ ಕರ್ಫ್ಯೂ ವಿಧಿಸುವ ಕ್ರಮಗಳು ಮಾತ್ರವೇ ಈ ಸಾಂಕ್ರಾಮಿಕ ಹರಡದಂತೆ ತಡೆಯುತ್ತದೆಂಬ ಸರಕಾರದ ನಿರ್ಣಯವನ್ನು ಒಪ್ಪಲಾಗದು.

ಕೋವಿಡ್–19 ರ ಮೊದಲ ಹಾಗೂ ಎರಡನೇ ಅಲೆಗಳನ್ನು ಆ ಸಂದರ್ಭಗಳಲ್ಲಿ ಪರಿಣಾಮಕಾರಿಯಾಗಿ ತಡೆಯಲು ಅಗತ್ಯವಾದ ವೈಜ್ಞಾನಿಕ ಕ್ರಮಗಳನ್ನು ಸಮರ್ಪಕವಾಗಿ ಕೈಗೊಳ್ಳದೇ ಹೋದುದರಿಂದ, ಹೆಚ್ಚಿನ ಸಂಖ್ಯೆಯಲ್ಲಿ ಸಾವುಗಳು ಸಂಭವಿಸುವಂತಾಯಿತು. ಇಂದಿಗೆ ಒಟ್ಟು 38,358 ಸಾವುಗಳು ಸಂಭವಿಸಿವೆ.

ಮುಖ್ಯವಾಗಿ, ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ಇದು ಕಂಡು ಬಂದಿದೆಯೋ, ಆ ಪ್ರದೇಶಗಳಲ್ಲಿ ಕೋವಿಡ್ ಪರೀಕ್ಷೆಗಳನ್ನು ಮನೆ ಮನೆಗೆ ತೆರಳಿ ಮಾಡುವುದನ್ನು ವ್ಯಾಪಕಗೊಳಿಸಬೇಕು. ಯಾವ ವಾರ್ಡಗಳಲ್ಲಿ, ಪ್ರದೇಶಗಳಲ್ಲಿ ಪ್ರಕರಣಗಳು ಕಂಡು ಬರುವವೋ ಅಂತಹ ವಾರ್ಡ್ ಅಥವಾ ಪ್ರದೇಶಗಳನ್ನು ನಿರ್ಬಂಧಿಸಿ, ಕಂಟೈನ್ಮೆಂಟ್ ವಲಯಗಳನ್ನು ರಚಿಸಿ ಆ ಪ್ರದೇಶದ ಎಲ್ಲರನ್ನು ಪರೀಕ್ಷಿಸಿ ಅಗತ್ಯ ಶುಶ್ರೂಷೆಗೆ ತುರ್ತು ಕ್ರಮ ವಹಿಸಬೇಕು.

ಎರಡನೇ ಅಲೆಯಲ್ಲಿ ಆಸ್ಪತ್ರೆಯಲ್ಲಿ ಬೆಡ್ ಗಳನ್ನು, ಆಮ್ಲಜನಕ, ಲಸಿಕೆ, ರೆಮ್ಡಿ ಸಿವರ್ ಔಷಧಿಗಳು ದೊರೆಯದಂತೆ, ಕೃತಕವಾಗಿ ಅಭಾವ ಉಂಟು ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡಲಾಯಿತು. ಇದರಿಂದಾಗಿ, ಬೀದಿಯ ಮೇಲೆ ಅಂಬುಲೆನ್ಸ್ ಗಳಲ್ಲಿ ಜನತೆ ದೊಡ್ಡ ಸಂಖ್ಯೆಯಲ್ಲಿ ಸಾಯುವಂತಾಯಿತು. ಸಾವಿಗೀಡಾದವರ ಶವ ಸಂಸ್ಕಾರವು ಸರಕಾರಕ್ಕೆ ಸವಾಲಾಯಿತು. ಇಂತಹ ಅಕ್ರಮ ದಂಧೆಯಲ್ಲಿ ಆಡಳಿತ ಪಕ್ಷದ ಶಾಸಕರು, ಸಂಸದರು ಮತ್ತು ಹಿಂದೂ ಮತಾಂಧ ಶಕ್ತಿಗಳು ತಮ್ಮನ್ನು ತೊಡಗಿಸಿಕೊಂಡಿದ್ದು ಬಯಲಾಯಿತು. ತಮ್ಮ ಸರಕಾರ ಈ ಕುರಿತು ಇಂತಹ ಅಕ್ರಮ ದಂಧೆಯ ಮೇಲೆ ಯಾವುದೇ ರೀತಿಯ ಕ್ರಮಗಳನ್ನು ಇದುವರೆಗೆ ಕೈಗೊಳ್ಳದಿರುವುದು ತೀವ್ರ ಖಂಡನೀಯವಾಗಿದೆ. ಈ ಅವಧಿಯಲ್ಲಿ ಇಂತಹ ಅಕ್ರಮ ದಂದೆಗಳು ನಡೆಯದಂತೆ ಮತ್ತು ಆಸ್ಪತ್ರೆಯಲ್ಲಿ ಬೆಡ್ ಗಳು, ಔಷಧಿಗಳು, ಆಮ್ಲಜನಕದ ಕೊರತೆಯಾಗದಂತೆ ತೀವ್ರ ನಿಗಾ ವಹಿಸಬೇಕು ಮತ್ತು ವಾರ್ ರೂಂಗಳನ್ನು ಸ್ಥಾಪಿಸಿ ಪ್ರಕರಣಗಳಿಗನುಸಾರ ಶುಶ್ರೂಷೆ ದೊರೆಯುವಂತೆ ಸಕಲ ಸಿದ್ದತೆಗಳನ್ನು ಕೈಗೊಳ್ಳಬೇಕು. ಹಳೆಯ ಪ್ರಕರಣಗಳನ್ನು ಈಗಲಾದರೂ ತನಿಖೆಗೊಳಪಡಿಸಬೇಕು.

ಅದೇ ರೀತಿ, ಜನತೆಯನ್ನು ತೀವ್ರ ಭಯ ಭೀತಿಗೊಳಪಡಿಸುವ ಮತ್ತು ಅದರಿಂದಾಗಿ, ಅವರ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುವಂತೆ ಮಾಡುವ ಕುತಂತ್ರಿ ಮಾಧ್ಯಮಗಳನ್ನು ನಿಯಂತ್ರಿಸಿ, ಜನತೆ ಧೈರ್ಯದಿಂದ ಅದನ್ನು ಎದುರಿಸುವಂತೆ ಅವರಿಗೆ ವೈಜ್ಞಾನಿಕ ಸಲಹೆ ನೀಡುವ ಪ್ರಚಾರವನ್ನು ನಡೆಸುವಂತೆ ಕ್ರಮವಹಿಸ ಬೇಕು.

ರಾಜ್ಯದ 1.50 ಕೋಟಿ ಬಿಪಿಎಲ್ ಹಾಗೂ ಎಪಿಲ್ ಪಡಿತರ ಚೀಟಿದಾರರು, ಚೀಟಿ ದೊರೆಯದ ಎಲ್ಲ ಬಡವರ ರೋಗ ನಿರೋಧಕ ಶಕ್ತಿಯನ್ನು ವ್ಯಾಪಕ ಗೊಳಿಸಲು ರಾಜ್ಯ ಸರಕಾರ ತಲಾ ವ್ಯಕ್ತಿಗೆ ಮಾಸಿಕ 10 ಇರಾ ಯಂತೆ ತಕ್ಷಣದಿಂದಲೇ 16 ಅಗತ್ಯ ಆಹಾರ ಸಾಮಾಗ್ರಿಗಳನ್ನು ಮತ್ತು ಅದರೊಂದಿಗೆ ಉಚಿತ ಮಾಸ್ಕ್, ಸ್ಯಾನಿಟರಿ ಪ್ಯಾಡ್ ಹಾಗೂ ಸಾಬೂನು, ಸ್ಯಾನಿಟೈಜರ್ ಗಳನ್ನು ವಿತರಿಸಬೇಕು. ಅಲ್ಲದೇ ತಕ್ಷಣವೇ ಈ ಎಲ್ಲರಿಗೂ ರಾಜ್ಯ ಸರಕಾರ ತಲಾ ಕುಟುಂಬಕ್ಕೆ ಮಾಸಿಕ ಕನಿಷ್ಠ 2,000 ರೂಗಳ ಕೋವಿಡ್ ನೆರವು ನಿಧಿಯನ್ನು ಒದಗಿಸಬೇಕು. ಅದೇ ರೀತಿ, ಕೇಂದ್ರ ಸರಕಾರದ ನೆರವು ಪಡೆದು ಅದನ್ನು 10,000 ರೂಗಳಿಗೆ ಹೆಚ್ಚಿಸಬೇಕು. ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಮೊಬೈಲ್ ಸ್ಕ್ವಾಡ್ ಗಳನ್ನು ಸ್ಥಾಪಿಸಿ ಉಚಿತ ವೈದ್ಯಕೀಯ ಹಾಗೂ ಔಷಧಿ ಒದಗಿಸಬೇಕು.

ಕೋವಿಡ್ ವಾರಿಯರ್ಸಗಳಾಗಿ ದುಡಿಯುವ ಮತ್ತು ಆಸ್ಪತ್ರೆ ಹಾಗೂ ಮುನ್ಸಿಪಲ್ ಹಾಗೂ ಪಂಚಾಯತ್‌ಗಳ ಕಾರ್ಮಿಕರು ಸೇರಿದಂತೆ ಎಲ್ಲರಿಗೂ ಮತ್ತು ಮಸಣ ಕಾರ್ಮಿಕರಿಗೂ ವಿಮಾ ಯೋಜನೆಯನ್ನು ವಿಸ್ತರಿಸಿ ರಕ್ಷಣೆಗೆ ಕ್ರಮವಹಿಸಬೇಕು.

ಅದೇ ರೀತಿ, ಈಗಾಗಲೇ ಕೋವಿಡ್ ಸಂಕಷ್ಟದಿಂದ ನಷ್ಟಕ್ಕೊಳಗಾದ ಎಲ್ಲಾ ಕುಟುಂಬಗಳ ಸಾಲವನ್ನು ಮನ್ನಾ ಮಾಡಬೇಕು. ಕೋವಿಡ್ ಸಾವುಗಳ ಪರಿಹಾರವನ್ನು ಕನಿಷ್ಠ 10 ಲಕ್ಷ ರೂಗಳಿಗೆ ಹೆಚ್ಚಿಸಬೇಕು.

ಕಳೆದೆರಡು ಅಲೆಗಳಲ್ಲಿ ಜನತೆ ಸಂಕಷ್ಟದಲ್ಲಿರುವಾಗಲೇ ರಾಜ್ಯದ ಬಹುತೇಕ ದುಡಿಯುವ ಜನತೆಯ ಕಸುಬುಗಳನ್ನು ದೋಚುವ ದುಷ್ಕೃತ್ಯವನ್ನು ರಾಜ್ಯ ಸರಕಾರ ಕೈಗೊಂಡಿದ್ದು ರಾಜ್ಯದಾದ್ಯಂತ ತೀವ್ರ ಪ್ರತಿಭಟನೆಗೆ ಕಾರಣವಾಗಿದೆ. ರಾಜ್ಯದ ವ್ಯವಸಾಯ ಹಾಗೂ ಕೃಷಿ ಭೂಮಿ ಮತ್ತು ಹೈನುಗಾರಿಕೆ ಮುಂತಾದ ಉಪಕಸುಬುಗಳನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸುವ ರೈತ ವಿರೋಧಿ ಕಾಯ್ದೆಗಳಾದ ಭೂ ಸುಧಾರಣಾ ತಿದ್ದುಪಡಿ–2020, ಎಪಿಎಂಸಿ ತಿದ್ದುಪಡಿ ಕಾಯ್ದೆ–2020, ಜಾನುವಾರು ಹತ್ಯಾ ನಿಷೇಧ ತಿದ್ದುಪಡಿ ಕಾಯ್ದೆ–2020, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಗಳನ್ನು ಜಾರಿಗೊಳಿಸುತ್ತಿರುವುದರಿಂದ ಆತಂಕಿತ ಜನತೆಯನ್ನು, ಚಳುವಳಿಗಳಿಯದಂತೆ ತಡೆಯಲು ಕೋವಿಡ್–19 ರ ಮೂರನೇ ಅಲೆಯ ಸಂದರ್ಭದಲ್ಲಿ ಪ್ರತಿಭಟನೆಗಳನ್ನು ನಿಷೇಧಿಸಿದ್ದೀರಿ! ಇದು ಜನತೆಯ ಸಂಕಟವನ್ನು ಮತ್ತಷ್ಟು ದುಪ್ಪಟ್ಟುಗೊಳಿಸಿ ಅವರ ರೋಗ ನಿರೋಧಕ ಶಕ್ತಿಯನ್ನು ದುರ್ಬಲ ಗೊಳಿಸಲಿದೆ. ಕೋವಿಡ್ ಗಿಂತಲೂ ಭಯಾನಕ ಪರಿಸ್ಥಿತಿ ನಿಮ್ಮ ಸರಕಾರದ ಈ ವಂಚಕತನದಿಂದ ಉಂಟಾಗಿರುವುದರಿಂದ, ಜನತೆ ಕೋವಿಡ್ ಲೆಕ್ಕಿಸದೇ ಪ್ರತಿಭಟನೆ ನಡೆಸುವಂತಾಗಿದೆ. ಈ ಅಪಾಯದಿಂದ ಜನತೆಯನ್ನು ರಕ್ಷಿಸಲು, ಅಂತಹ ಎಲ್ಲಾ ಜನ ವಿರೋಧಿ ಕಾಯ್ದೆಗಳ ಜಾರಿಯನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಒಕ್ಕೂಟ ಸರಕಾರ ಈಗಾಗಲೇ ಅಂತಹ ಕಾಯ್ದೆಗಳನ್ನು ವಾಪಾಸು ಪಡೆದಿರುವುದರಿಂದ ತಕ್ಷಣ ತಮ್ಮ ಸರಕಾರವೂ ವಾಪಾಸು ಪಡೆಯಬೇಕು. ಜನ ಚಳುವಳಿಗಳ ಜೊತೆ ಮಾತುಕತೆ ನಡೆಸಿ ಅವರ ಹಕ್ಕೊತ್ತಾಯಗಳಿಗೆ ಕ್ರಮವಹಿಸಬೇಕು.

ಈ ಎಲ್ಲ ಕುರಿತು ಅಗತ್ಯ ಕ್ರಮ ವಹಿಸಿ ರಾಜ್ಯವನ್ನು ಸಂಕಷ್ಟದಿಂದ ಪಾರು ಮಾಡಲು ನೈಜ ಕಾಳಜಿಯನ್ನು ಮತ್ತು ಅಪಾರ ಪ್ರಮಾಣದ ನೆರವನ್ನು ಘೋಷಿಸುವ ಮೂಲಕ ಕ್ರಮವಹಿಸಲು ಈ ಮೂಲಕ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ದ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸಿದೆ.

ಭ್ರಷ್ಟಾಚಾರ ಮತ್ತು ಕಾರ್ಪೋರೇಟ್ ಲೂಟಿಯಿಂದ ಮುಕ್ತವಾದ ಸಮೃದ್ಧ ಸೌಹಾರ್ದ ನವ ಕರ್ನಾಟಕ ಕಟ್ಟೋಣ

ಈ ಸಂಚಿಕೆ ಗಂಗಾವತಿಯಲ್ಲಿ ನಡೆದ 23ನೆಯ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನದ ಕುರಿತು ವಿವರವಾದ ವರದಿಗಳಿರುವ ವಿಶೇಷ ಸಂಚಿಕೆಯಾಗಿ ಪ್ರಕಟವಾಗುತ್ತಿದೆ. ಪುಟ 3, 4 (ರಾಜ್ಯದ ವಿದ್ಯಮಾನಗಳು) 7 (ರಾಷ್ಟ್ರೀಯ ವಿದ್ಯಮಾನಗಳು) ಬಿಟ್ಟರೆ ಉಳಿದ 12 ಪುಟಗಳೂ ಸಮ್ಮೇಳನದ ವರದಿಗೆ ಮೀಸಲಾಗಿದೆ. ಮಧ್ಯ (8, 9, 10)) ಪುಟಗಳಲ್ಲಿ ಕಾ. ಪ್ರಕಾಶ ಕಾರಟ್ ಅವರ ಉದ್ಘಾಟನಾ ಭಾಷಣಗಳು, ಕಾ.ಬಿ.ವಿ.ರಾಘವುಲು ಅವರ ಸಮಾರೋಪ ಭಾಷಣ ಮತ್ತು ರಾಜ್ಯ ಕಾರ್ಯದರ್ಶಿ ಯು.ಬಸವರಾಜ ಅವರು ವರದಿ ಮಂಡನಾ/ಚರ್ಚೆಗೆ ಉತ್ತರ ಕೊಟ್ಟ ಭಾಷಣಗಳ ವರದಿಗಳೂ ಇವೆ. ಪುಟ 2, 5, 11, 12, 13, 15 ರಲ್ಲಿ ಸಮ್ಮೆಳನ ಅಂಗೀಕರಿಸಿದ 7 ಪ್ರಮುಖ ನಿರ್ಣಯಗಳನ್ನು ಕೊಡಲಾಗಿದೆ. ಉಳಿದ ನಿರ್ಣಯಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. ಅರ್ಹತಾ ಪರಿಶೀಲನಾ ವರದಿ (ಪುಟ 6) ಮತ್ತು ಸಮ್ಮೆಳನದ ವಿಶೇಷ ಕ್ಷಣಗಳ ಫೋಟೊಗಳನ್ನು ಕೊಡಲಾಗಿದೆ.

ಕಾಂ. ಅನುಸೂಯ



ಅನುಸೂಯ ವಿಜಿನಾಪುರ ಅಂಬೇಡ್ಕರ್ ನಗರ ಸರ್ಕಾರಿ ಕೆರೆ ಅಂಗಳದಲ್ಲಿ ಸಾಕಷ್ಟು ಬಡವರು ಮನೆ ಕಟ್ಟಿಕೊಂಡು ವಾಸವಿರುವುದಕ್ಕೆ ಹಕ್ಕುಪತ್ರಕೊಡಿಸಲು ಸಿಪಿಐ(ಎಂ) ಪಕ್ಷ ಮತ್ತು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹೋರಾಟ ಮಾಡುವ ಸಂಧರ್ಭದಲ್ಲಿ ನಮ್ಮಗೆ ಸಿಕ್ಕ ಹೆಣ್ಣು ಮಗಳು. ಈಕೆಗಿಂತ ಮುಂಚೆ ಇವರ ಅಕ್ಕ ಮುನಿಲಕ್ಷ್ಮಿ, ತಾಯಿ ಶ್ಯಾಮಕ್ಕ ಇಬ್ಬರೂ ನಮ್ಮ ಹೋರಾಟಗಳಲ್ಲಿ ಸಕ್ರಿಯರಾಗಿದ್ದರು. ಆಗ ಅನುಸೂಯಳ ಒರಟುತನ, ಗಡಸು ಮಾತು. ರೋಷ ಕಂಡ ಅಕೆಯನ್ನು ಮಾತನಾಡಿಸಲು ಹೆದರಿಕೆಯಾಗುತ್ತಿತ್ತು.

ನಂತರ ನಮ್ಮ ಹೋರಾಟಗಳಿಂದ ಪ್ರಭಾವಿತಳಾಗಿ ನಮ್ಮ ಹೋರಾಟಗಳ ಜೊತೆ ಕೈಜೋಡಿಸಿದಳು ಹಾಗು ಮೂಂಚೂಣಿಯಲ್ಲಿ ನಿಲ್ಲುತ್ತಿದ್ದಳು. 1998ರಲ್ಲಿ ಸ್ಲಂ ಜನರನ್ನು ಒಕ್ಕಲೆಬ್ಬಿಸಲು ಆಗಿನ ಸಕ್ಕರೆ ಸಚಿವರಾದ ಎ.ಕೃಷ್ಣಪ್ಪ ನವರು ಮುಂದಾದರು. ಅವರನ್ನು ಪ್ರಶ್ನಿಸಲು ಹೋದಾಗ ಪೊಲೀಸ್ ನವರು ಅಕೆಯನ್ನು ಹಿಡಿದುಕೊಂಡಾಗ 4–5 ಪೋಲಿಸರನ್ನು ತಳ್ಳಿ ಗುಡಿಸಲು ಕೀಳದಂತೆ ಎದೆ ಕೊಟ್ಟು ನಿಂತಳು. ನಂತರ ಮಾನ್ಯ ಸಚಿವರು ಅಕೆಯನ್ನು ಬಂಧಿಸಲು ಸೂಚಿಸಿದಾಗ ಎಲ್ಲ ಹೆಣ್ಣುಮಕ್ಕಳು ಪೊರಕೆ ಹಿಡಿದರು. ಸಚಿವರು, ತಹಸೀಲ್ದಾರ್ ಮತ್ತು ಪೋಲಿಸ್ ನವರು ಅಲ್ಲಿಂದ ಓಡಿಹೋಗುವಂತೆ ಮಾಡುವಲ್ಲಿ ಅನುಸೂಯ ಪಾತ್ರ ಮೂಂಚೂಣಿಯಲ್ಲಿತು. ಹೀಗೆ ಹೋರಾಟಗಳಲ್ಲಿ ತೊಡಗಿಸಿಕೊಳ್ಳುತಾ ಮಹಿಳಾ ಚಳುವಳಿಯಲ್ಲಿ ಸಕ್ರಿಯವಾಗುವ ಮೂಲಕ 2002–03 ರಲ್ಲಿ ಪಕ್ಷದ ಸದಸ್ಯೆಯಾದಳು.

ಪಕ್ಷದ ಸದಸ್ಯೆಯಾದ ಅನುಸೂಯಳಿಗೆ ಕೆಂಪು ಬಾವುಟ ಅಂದರೆ ಹುಚ್ಚು. ಮನೆಯ ಮೇಲೆ ಕೆಂಪುಬಾವುಟ. ಹಾಕುವ ಬಟ್ಟೆ ಕೆಂಪು. ಗಾಡಿ ಬಣ್ಣ ಕೆಂಪು, ಗಾಡಿಯ ಮೇಲೆ ಪಕ್ಷದ ಚಿಹ್ನೆ, ಹೀಗೆ ಅತಿಯಾದ ಅಭಿಮಾನ. ಪಕ್ಷದ ಕಾರ್ಯಕ್ರಮ ಅಂದರೆ ಎಲ್ಲೆ ಕೆಲಸ ಮಾಡುತ್ತಿರಲಿ ಏನಾದರೂ ಸುಳ್ಳು ಹೇಳಿ ಬಂದು ಹಾಜರಾಗುತ್ತಿದ್ದಳು. ಹೋರಾಟ ಕಾರ್ಯಕ್ರಮಕ್ಕೆ ಬಂದರೆ ಪೋಲಿಸರಿಗೆ ಚಳ್ಳೆ ಹಣ್ಣು ತಿನ್ನಿಸುತ್ತಿದ್ದರು. ಉದಾ. ಬೆಂಗಳೂರಿನಲ್ಲಿ ಕುಮಾರಸ್ವಾಮಿ ಮತ್ತು ಯಡ್ಡಿಯೂರಪ್ಪನವರ ದೊಸ್ತಿ ಸರ್ಕಾರ ಬೆಂಗಳೂರಿನಲ್ಲಿರುವ 31 ಸಾವಿರ ಎಕ್ಕರೆ ಭೂಮಿಯನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿ ಹರಾಜು ಹಾಕುವುದನ್ನು ತಡೆಯಲು ಬೆಂಗಳೂರು ಸಿಪಿಐ(ಎಂ) ಪಕ್ಷ ಹೋರಾಟವನ್ನು ರೂಪಿಸಿತ್ತು. ಆಗ ಜಿಲ್ಲಾಧಿಕಾರಿ ಕಚೇರಿ ಸುತ್ತಲೂ ಪೋಲಿಸ್ ಬಂದೊ ಬಸ್ತ್ ಇತ್ತು. ಕಚೇರಿಯ ಗೇಟಿಗೆ ಬೀಗ ಹಾಕಲಾಗಿತು. ಹೇಗಾದರೂ ಜಿಲ್ಲಾಧಿಕಾರಿ ಕಚೇರಿಯ ಒಳಗೆ ಹೋಗಲು ಪ್ರಯತ್ನಿಸುತ್ತಿದ್ದಾಗ ಗೇಟ್ ಹತ್ತಿ ಒಳಗೆ ನುಗ್ಗಿದವರಲ್ಲಿ ಅನುಸೂಯ ಸಹ ಒಬ್ಬಳು.

ಮತ್ತೊಂದು ಬಾರಿ ರಾಮನಗರ ಗಣಿ ವಿಚಾರದಲ್ಲಿ ಹೋರಾಟ ಮಾಡಿದ ನಮ್ಮ ಮುಖಂಡರನ್ನು ಯಡ್ಡಿಯೂರಪ್ಪನ ಸರ್ಕಾರ ಬಂಧಿಸಿದಾಗ ಪಕ್ಷ ಯಡ್ಡಿಯೂರಪ್ಪನ ಮನೆ ಮುತ್ತಿಗೆ ಹಾಕಲು ಪಕ್ಷ ಕಾರ್ಯಕ್ರಮ ರೂಪಿಸಿದಾಗಲೂ ಅನುಸೂಯ ಮುಂಚೂಣಿಯಲ್ಲಿದ್ದಳು. ಪೋಲಿಸರು ಬಂಧಿಸಿ ಜೀಪ್ ನೊಳಗೆ ಕೂರಿಸುವಾಗ 4 ಜನ ಮಹಿಳಾ ಪೋಲಿಸರನ್ನು ತಳ್ಳಿ ಬಿಸಾಡಿ ಈಚೆ ಬಂದ ಕೆಚ್ಚೆದೆ ಹೆಣ್ಣು ಮಗಳು. ಕೆ.ಅರ್.ಪುರಂ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಯ ಸಂದರ್ಭದಲ್ಲಿ ಮಗುವಿನ ಸಾವಿಗೆ ಕಾರಣರಾದ ಸ್ತ್ರೀ ರೋಗ ತಜ್ಞರ ವಿರುದ್ಧ ಹೋರಾಟ ಮಾಡಿದ ಹೆಣ್ಣು ಮಗಳು. ನೊಂದ ಹೆಣ್ಣು ಮಕ್ಕಳು ಮಧ್ಯ ರಾತ್ರಿ ಬಂದು ಬಾಗಿಲು ಬಡಿದರೆ ಆ ಹೆಣ್ಣು ಮಗಳಿಗೆ ನ್ಯಾಯ ಕೊಡಿಸಲು ಅಷ್ಟು ಹೊತ್ತಿನಲ್ಲಿ ಪೋಲಿಸ್ ಠಾಣೆಗೆ ಹೋಗುತ್ತಿದ್ದ ಗಡುಸುತನ ಅವರಲ್ಲಿತ್ತು.

ಒಂದು ಬಾರಿ ನೊಂದ ಹೆಣ್ಣು ಮಗಳಿಗೆ ನ್ಯಾಯ ನೀಡಬೇಕೆಂದು ಕೆ.ಅರ್.ಪುರಂ ಇನ್ಸ್‌ಪೆಕ್ಟರ್ ಬಳಿ ಪೋನ್ ನಲ್ಲಿ ಮಾತನಾಡಿದ್ದಾಳೆ. ಅವರು ಈಕೆ ಗಡುಸು ಧ್ವನಿ ಕೇಳಿ 'ಯಾರೋ ಬೊ.. ಮಗನೇ, ಬೂಟ್ ನಲ್ಲಿ ಹೊಡೆಯುತ್ತೇನೆ' ಎಂದಾಗ ಸಂಜೆ ಕೆಲಸ ಮುಗಿಸಿ ಠಾಣೆಯ ಅಧಿಕಾರಿಯ ಮುಂದೆ ಹೋಗಿ ಕುಳಿತುಕೊಂಡು ಸರ್ಕಾರ ನಿಮ್ಮಗೆ ಬೂಟ್ ಕೊಟ್ಟದ್ದು ನಮ್ಮಗೆ ಹೊಡೆಯಲ್ಲಿಕ್ಕಾ, ಇವತ್ತು ನನ್ನಗೆ ಬೂಟ್ ನಲ್ಲಿ ಹೊಡೆಯುವವರೆಗೂ ನಾನು ಇಲ್ಲಿಂದ ಹೋಗುವುದಿಲ್ಲ' ಅಂತ ಅವರ ಚೆಂಬರ್ ನಲ್ಲಿ ಗಂಟೇ ಗಟ್ಟಲೇ ಜನವಾದಿ ಮಹಿಳಾ ಮುಖಂಡರ ಜೊತೆ ಕುಳಿತು ಕೆಲಸ ಮಾಡಲು ಬಿಟ್ಟಿರಲಿಲ್ಲ. ನಂತರ ನನಗೆ ಇನ್ಸ್‌ಪೇಕ್ಟರ್ ಫೋನ್ ಮಾಡಿ ಈಕೆಯನ್ನು ಕರೆದುಕೊಂಡು ಹೋಗಲು ಸೂಚಿಸಿದರು. ಆಗ ನಾವು 'ನೀವು ಅಕೆಗೆ ಹೇಳಿದ್ದಕ್ಕೆ ಕ್ಷಮೆ ಕೇಳುವವರೆಗೂ ಅಕೆ ಹೋಗುವುದಿಲ್ಲ' ಎಂದು ತಿಳಿಸಿದಾಗ ಬೇರೆ ದಾರಿಯಿಲ್ಲದೆ ಅಧಿಕಾರಿಗಳು ಕ್ಷಮೆ ಕೇಳಿ ಕೈಮುಗಿಯುವಂತೆ ಮಾಡಲಾಯಿತು. ಠಾಣೆಗೆ ಸಾಕಷ್ಟು ಜನರು ಬರುತ್ತಿರುವಾಗ ಮರ್ಯಾದೆ ಹೋಗುತ್ತದೆಂದು ಇನ್ಸ್‌ಪೆಕ್ಟರ್ ಗೆ ಆತಂಕವಾಗಿತ್ತು.

ಹೀಗೆ ಹೇಳುತ್ತಾ ಹೋದರೆ ಅನುಸೂಯಳ ಬಗ್ಗೆ ಸಾಕಷ್ಟು ಘಟನೆಗಳಿವೆ. ಅಂಗನವಾಡಿಯ ಅಖಿಲ ಭಾರತ ಸಮ್ಮೇಳನದಲ್ಲಿ ವಸತಿ ಜವಾಬ್ದಾರಿಯನ್ನು ಜನವಾದಿ (JMS)ಗೆ ನೀಡಲಾಗಿತ್ತು. ಆಗ ಹಾಸಿಗೆ ಹೊತ್ತು ತಂದು ಹಾಕುವುದರಿಂದ ಇಡಿದು ನೀರು ಕಾಯಿಸಿಕೊಡುವ ಸ್ವಯಂ ಸೇವಕರ ಕೆಲಸ ಅಚ್ಚುಕಟ್ಟಾಗಿ ಮಾಡಿದ್ದಳು. ಇದರಿಂದಾಗಿ ಹೊರ ರಾಜ್ಯದಿಂದ ಬಂದ ಪ್ರತಿನಿಧಿಗಳು ವರ್ಷ ವರ್ಷ ಉಡುಗೊರೆಗಳನ್ನು ಕಳಿಸುವಂತಹ ಪ್ರೀತಿಯ ಗೆಳತಿಯಾಗಿದ್ದಳು. ವಿಜಿನಾಪುರ ಒಂದೇ ಅಲ್ಲ ಸುತ್ತ ಮುತ್ತಲ ಪ್ರದೇಶಗಳಲ್ಲದೆ ನಮ್ಮ ರಾಜ್ಯದ ಎಲ್ಲ ಜಿಲ್ಲೆಗಳ ಜನವಾದಿಯ ಗೆಳತಿಯರಿಗೆ ಅನುಸೂಯ ಅಚ್ಚುಮೆಚ್ಚು. ಸ್ಥಳೀಯವಾಗಿ ಎಲ್ಲ ಧರ್ಮದ ಜನರು ಇವರನ್ನು ಇಷ್ಟ ಪಡುತ್ತಿದ್ದರು. ವಿಜನಾಪುರದಲ್ಲಿ ಜನವಾದಿ ಮಹಿಳಾ ಸಂಘಟನೆಯ ಕಚೇರಿ ಕಟ್ಟಲು ಅನುಸೂಯರವರ ಪಾತ್ರ ಹೆಚ್ಚು. ಸರ್ಕಾರಿ ಜಾಗದಲ್ಲಿ ಕಚೇರಿ ನಿರ್ಮಾಣಕ್ಕೆ ಜಾಗ ಹಿಡಿದಿದ್ದೆವು. ಅದರ ಮೇಲೆ ಸ್ಥಳೀಯ ಬಿಜೆಪಿ ಪಾಲಿಕೆ ಸದಸ್ಯರ ಕಣ್ಣು ಬಿದ್ದು, ಜಾಗ ಬಿಟ್ಟು ಕೊಡಲು ನಮ್ಮನ್ನು ಕೇಳಿದರು. ನಾವು ಯಾರೂ ಒಪ್ಪಿರಲಿಲ್ಲ. ಮಂಡ್ಯದಲ್ಲಿ 'ಸಮತೆಗಾಗಿ ಸಹಪಯಾಣ' ರಾಜ್ಯ ಮಟ್ಟದ ಕಾರ್ಯಕ್ರಮ ನಡೆಯುತ್ತಿತ್ತು. ನಾವೆಲ್ಲರೂ ಅಲ್ಲಿರುವಾಗ ಬೆಸ್ಕಾಂ ಅಧಿಕಾರಿಗಳು ಟ್ರಾನ್ಸ್ ಪಾರಂ ಹಾಕಲು ಗುಂಡಿ ತೆಗೆದಿದ್ದರು. ಇದು ಈಕೆಗೆ ಗೊತ್ತಾಗಿ ಇನ್ನೊಬ್ಬ ಸಂಗಾತಿ ನಸ್ರೀನ್ ತಾಜ್ ಹೋಗಿ ಸಿಕ್ಕಾಪಟ್ಟೆ ಗಲಾಟೆ ಮಾಡಿ ಅಲ್ಲಿಂದ ಅವರು ವಾಪಸ್ ಹೋಗುವವರೆಗೂ ಬಿಟ್ಟಿಲ್ಲ. ಇವರು ಅವತ್ತು ಸುಮ್ಮನಿದ್ದಿದರೆ ನಾವು ಮಂಡ್ಯದಿಂದ ಬರುವಷ್ಟರಲ್ಲಿ ಜಾಗ ಕಣ್ಮರೆಯಾಗುತ್ತಿತು.

ತೂಬರಹಳ್ಳಿಯಲ್ಲಿ ವಾಸಿಸುತ್ತಿದ್ದ ಪಶ್ಚಿಮ ಬಂಗಾಳದ ಜನರನ್ನು ಬಾಂಗ್ಲಾದೇಶದವರೆಂದು ಅಲ್ಲಿನ ಶಾಸಕರಾದ ಅರವಿಂದ ಲಿಂಬಾವಳಿ ಒಕ್ಕಲೆಬ್ಬಿಸುವಾಗ ಪಕ್ಷದ ವತಿಯಿಂದ ಬೆಳಿಗ್ಗೆ 4 ಗಂಟೆಗೆ ಕಾಂ ಗೋಪಾಲಗೌಡರ ಜೊತೆಯಲ್ಲಿ ಹೋಗಿ ಕತ್ತಲೆಯಲ್ಲಿ ನಾಯಿಯಿಂದ ಕಚ್ಚಿಸಿಕೊಂಡು ಹೋರಾಟದಲ್ಲಿ ಭಾಗವಹಿಸಿದ್ದರು.


ಕಚೇರಿಗಳು ಯಾವಾಗಲೂ ತೆಗೆದಿರಬೇಕು. ಜನರ ಸಮಸ್ಯೆಗೆ ತಕ್ಷಣ ಸ್ಪಂದಿಸಬೇಕು. ಪಕ್ಷ ಜೋರಾಗಿ ಬೆಳೆಸಬೇಕು ಅನ್ನುವ ಆಸೆಯಿಂದ ಎಲ್ಲರೊಂದಿಗೂ ಜಗಳವಾಡುತ್ತಿದ್ದರು. ಅರೋಗ್ಯದ ಕಡೆ ಸರಿಯಾಗಿ ಗಮನಹರಿಸದ ಕಾರಣ ಹೃದಯ ಸಂಬಂಧಿಸಿದ ಕಾಯಿಲೆಯಿಂದ ಆಸ್ಪತ್ರೆ ಸೇರುವಂತಾಯಿತು. ಆಸ್ಪತ್ರೆಯಲ್ಲಿ ಅಕ್ಸಿಜನ್ ಹಾಕಿ ಮಲಗಿದಾಗ ನರ್ಸ್ ಮಾತ್ರೆ ತರಲು ಚೀಟಿ ಬರೆದುಕೊಟ್ಟಾಗ 'ಯಾಕಮ್ಮ ನಿಮ್ಮ ಹತ್ತಿರ ಮಾತ್ರೆ ಇಲ್ವಾ ಬರೆದುಕೊಡುತ್ತಿದ್ದಿರಾ' ಅಂತ ಪ್ರಶ್ನಿಸಿದಳು. ನೋವಿನಲ್ಲಿಯೇ ಜನವರಿ 3 ರಂದು ಸಂಜೆ 5 ಗಂಟೆಗೆ ನಿಧನಳಾದಳು.

ತಂದೆ ತಾಯಿ ಇಲ್ಲದ ಈಕೆ 'ನನ್ನ ಅಮ್ಮ ನೀನು. ನನ್ನ ಆಸೆ ಇಡೇರಿಸಬೇಕು' ಎಂದು ಹೇಳುತ್ತಾ, ಎಲ್ಲರಿಗೂ ವಿದಾಯ ಹೇಳಿ ಹೋದಳು. ಅನುಸೂಯಳ ವಯಸ್ಸು 53.

ಇಂತಹ ಒಬ್ಬ ಕಾರ್ಯಕರ್ತೆಯನ್ನು ಹುಟ್ಟುಹಾಕಲು ಸಾಧ್ಯವಿಲ್ಲ. ಅಕೆಯ ಆಸೆಯಂತೆ ಕೆಂಪು ಬಾವುಟ ಕೆಂಪು ಬಣ್ಣದ ಹೂಗಳಿಂದ ಅಲಂಕಾರ, ಪೆಂಡಾಲ್ ಗೆ ಕೆಂಪು ಬಾವುಟ, ಶವ ಸಾಗಿಸುವ ವಾಹನದಲ್ಲೂ ಕೆಂಪು ಬಾವುಟದೊಂದಿಗೆ 'ಅನುಸೂಯ ಅಮರ್ ಹೈ' ಎಂಬ ಘೋಷಣೆಯೊಂದಿಗೆ ನಮ್ಮನೆಲ್ಲ ಅಗಲಿ ಹೋದರು.

ಈಗ ಕೇವಲ ಅನುಸೂಯಳ ನೆನಪು ಮಾತ್ರ.

–ಗೌರಮ್ಮ



ಕಾಮ್ರೇಡ್ ಮಂಜಯ್ಯ ಭಂಡಾರಿ

ಸಿಪಿಐಎಂನ ಹಿರಿಯ ಸಂಗಾತಿ, ಭೂ ಸುಧಾರಣೆ ಕಾನೂನು ಜಾರಿಗಾಗಿ, ರೈತರ ಭೂಮಿ ಹಕ್ಕಿಗಾಗಿ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಕಾಮ್ರೇಡ್ ಮಂಜಯ್ಯ ಭಂಡಾರಿ ಹರೇಕಳ ನಿಧನ ಹೊಂದಿದ್ದಾರೆ. ಇವರಿಗೆ ಪಕ್ಷದ ಉಳ್ಳಾಲ ವಲಯ ಸಮಿತಿಯಿಂದ ಅಂತಿಮ ನಮನ ಸಲ್ಲಿಸಲಾಯಿತು.

ವಾರಾಂತ್ಯ ಕರ್ಫ್ಯೂ–ಕೊರೊನಾ ನಿರ್ಬಂಧಗಳನ್ನು ವಿರೋಧಿಸಿ ಸಿಪಿಐ(ಎಂ) ಪ್ರತಿಭಟನೆ



ರಾಜ್ಯ ಸರ್ಕಾರದ ವೈಫಲ್ಯ ಮುಚ್ಚಿ ಹಾಕಲು ವಿಧಿಸಿದ ವಾರಾಂತ್ಯ ಕರ್ಫ್ಯೂ ಹಾಗೂ ಕೋವಿಡ್ ನಿರ್ಬಂಧಗಳನ್ನು ವಿರೋಧಿಸಿ ಹಾಗೂ ಜನಸಾಮಾನ್ಯರ ಬದುಕನ್ನು ಸಂಕಷ್ಟಕ್ಕೆ ದೂಡಿದ ರಾಜ್ಯ ಸರ್ಕಾರದ ವಿರುದ್ಧ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ನೇತೃತ್ವದಲ್ಲಿ ಮಂಗಳೂರು ನಗರದಲ್ಲಿಂದು ಪ್ರತಿಭಟನಾ ಪ್ರದರ್ಶನ ನಡೆಸಿದರು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಪ್ರತಿಭಟನಾಕಾರರು ರಾಜ್ಯ ಸರಕಾರದ ಅವೈಜ್ಞಾನಿಕ ಕ್ರಮಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ, ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬೊಮ್ಮಯಿ ನೇತೃತ್ವದ ಬಿಜೆಪಿ ಸರಕಾರ ಹೆಜ್ಜೆಹೆಜ್ಜೆಗೂ ಜನವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿದೆ. ಅದರ ಜೊತೆಗೆ ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೊಳಿಸಿ ಜನರ ಗಮನವನ್ನು ಬೇರೆಡೆಗೆ ಸೆಲೆಯಲು ಯತ್ನಿಸುತ್ತಿದೆ. ಮಾತ್ರವಲ್ಲದೆ ಸರಕಾರದ ವಿರುದ್ಧ ಭುಗಿಲೆದ್ದ ಜನಾಕ್ರೋಶವನ್ನು ಶಮನ ಮಾಡಲು ಕೊರೊನಾವನ್ನು ಮುಂದಿಟ್ಟುಕೊಂಡು ಕೀಳು ಮಟ್ಟದ ರಾಜಕೀಯ ನಡೆಸುತ್ತಿದೆ ಎಂದು ತೀವ್ರವಾಗಿ ಟೀಕಿಸಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಮುನೀರ್ ಕಾಟಿಪಳ್ಳ ಮಾತನಾಡುತ್ತಾ, ರಾಜ್ಯದ ಜನತೆಯ ಬದುಕಿನ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸದ ಸರಕಾರವು ಅಧಿಕಾರ ನಡೆಸಲು ಅಯೋಗ್ಯರು. ಅಂದು ಭ್ರಷ್ಟಾಚಾರದ ವಿರುದ್ಧ ಬೊಗಳೆ ಬಿಟ್ಟವರು ಇಂದು 40% ಕಮಿಷನ್ ಪಡೆಯುವ ಸರಕಾರವೆಂದು ತನ್ನವರಿಂದಲೇ ಕರೆಸಿಕೊಂಡಿದೆ ಎಂದು ವ್ಯಂಗ್ಯವಾಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಸುನಿಲ್ ಕುಮಾರ್ ಬಜಾಲ್, ಕೊಳೆತು ನಾರುತ್ತಿರುವ ಮಾಧ್ಯಮ ರಂಗ, ಕುಲಗೆಟ್ಟ ರಾಜಕಾರಣ ಹಾಗೂ ಜನರ ಪ್ರಾಣದಲ್ಲಿ ಚೆಲ್ಲಾಟವಾಡುವ ಮೆಡಿಕಲ್ ಮಾಫಿಯಾಗಳ ಸಮ್ಮಿಶ್ರಣವು ಇಡೀ ಜಗತ್ತನ್ನು ತನ್ನ ಕಪಿಮುಷ್ಠಿಯಲ್ಲಿಟ್ಟು ಕೊರೊನಾ ಹೆಸರಿನಲ್ಲಿ ರಾಜಕೀಯ ನಡೆಸುತ್ತಿದೆ. ಕಾರ್ಪೊರೇಟ್ ಕಂಪೆನಿಗಳ ಹಿತಾಸಕ್ತಿಗಳಿಗಾಗಿ ಜನರ ಹಿತವನ್ನು ಬಲಿಕೊಡುವ ಕೇಂದ್ರ ಸರ್ಕಾರದ ವಿರುದ್ಧವೂ ಜನತೆ ತಿರುಗಿ ಬೀಳುತ್ತಿದ್ದಾರೆ ಎಂದು ಹೇಳಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕ್ರಷ್ಣ ಶೆಟ್ಟಿ, ಸುಕುಮಾರ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ನಾಯಕರಾದ ಸದಾಶಿವದಾಸ್, ಜಯಂತ ನಾಯಕ್, ಬಶೀರ್ ಪಂಜಿಮೊಗರು, ಸಂತೋಷ್ ಬಜಾಲ್, ಯೋಗೀಶ್ ಜಪ್ಪಿನಮೊಗರು, ಬಿ.ಕೆ.ಇಮ್ತಿಯಾಜ್, ಜಯಂತಿ ಶೆಟ್ಟಿ, ಸಿಐಟಿಯು ಜಿಲ್ಲಾ ನಾಯಕರಾದ ರಾದಾ ಮೂಡಬಿದ್ರೆ, ಗಿರಿಜಾ, ರವಿಚಂದ್ರ ಕೊಂಚಾಡಿ, ಮಹಮ್ಮದ್ ಮುಸ್ತಫಾ, ಸಂತೋಷ್ ಆರ್.ಎಸ್, ನಾಗೇಶ್ ಕೋಟ್ಯಾನ್, ಯುವ ಮುಖಂಡರಾದ ನವೀನ್ ಕೊಂಚಾಡಿ, ದಯಾನಂದ ಶೆಟ್ಟಿ, ಮನೋಜ್ ವಾಮಂಜೂರು, ನೌಷಾದ್ ಬೆಂಗರೆ, ದಲಿತ ಹಕ್ಕುಗಳ ಸಮಿತಿ ಮುಖಂಡರಾದ ತಿಮ್ಮಯ್ಯ ಕೊಂಚಾಡಿ, ಕೃಷ್ಣ ತಣ್ಣೀರುಬಾವಿ, ಜನವಾದಿ ಮಹಿಳಾ ಸಂಘಟನೆ ಭಾರತಿ ಬೋಳಾರ, ಪ್ರಮೀಳಾ ಶಕ್ತಿನಗರ, ಕಲಾವಿದರಾದ ಕೀತು ಘುರ್ಟಾಡೋ, ಸಾಮಾಜಿಕ ಚಿಂತಕರಾದ ಪ್ರಮೀಳಾ ದೇವಾಡಿಗ, ಜೆರಾಲ್ಡ್ ಟವರ್, ಉದಯ ಆಚಾರ್ಯ, ವಿದ್ಯಾರ್ಥಿ ನಾಯಕರಾದ ಮಾಧುರಿ ಬೋಳಾರ, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ್ ಮುಂತಾದವರಿದ್ದರು.

ಕೋಮು ಸೌಹಾರ್ದತೆಗಾಗಿ, ಕೋಮುವಾದಿ ಶಕ್ತಿಗಳನ್ನು ನಿಗ್ರಹಿಸಲು ಸರಕಾರಕ್ಕೆ ಆಗ್ರಹ
ಜನವರಿ 26 ರಿಂದ 30ರ ವರೆಗೆ ಸೌಹಾರ್ದತಾ ಕಾರ್ಯಕ್ರಮಗಳಿಗೆ ಕರೆ

'ಸರ್ವ ಜನಾಂಗದ ಶಾಂತಿಯ ತೋಟ'ವಾಗಿರುವ ಕರ್ನಾಟಕವನ್ನು ಕೋಮುವಾದದ ಅಗ್ನಿಕುಂಡವಾಗಿ ಮಾರ್ಪಡಿಸಲು ಸಂಘಪರಿವಾರ ಸತತವಾಗಿ ಯತ್ನಿಸುತ್ತಾ ಬಂದಿದೆ. ಇಂದು ಕೋಮುವಾದದ ಬಹುಮುಖಿ ಅಪಾಯಗಳನ್ನು ಗಂಭೀರವಾಗಿ ಅರಿತು, ಅದರ ವಿರುದ್ಧ ನಿಖರ, ನಿರ್ದಿಷ್ಟವಾದ ಹೋರಾಟವನ್ನು ಬೆಳೆಸುವಲ್ಲಿ ಪ್ರಮುಖ ಜಾತ್ಯಾತೀತ ರಾಜಕೀಯ ಪಕ್ಷಗಳಲ್ಲಿ ಜಾಗೃತಿಯ ಕೊರತೆ,, ಕೆಲವು ಪಕ್ಷಗಳ ಸಂದರ್ಭಸಾಧಕ ರಾಜಕಾರಣದಂತಹ ಪ್ರವೃತ್ತಿಗಳನ್ನು ಬಿಟ್ಟು ಧೃಡ ಹೋರಾಟಕ್ಕೆ ಮುಂದಾಗಬೇಕೆಂದು ಸಿಪಿಐ(ಎಂ)ನ 23ನೇ ಕರ್ನಾಟಕ ರಾಜ್ಯ ಸಮ್ಮೇಳನ ಕರೆ ನೀಡಿದೆ. ನಮ್ಮ ಸಂವಿಧಾನ ಅಂಗೀಕರಿಸಿದ ಗಣರಾಜ್ಯೋತ್ಸವದ ದಿನವಾದ ಜನವರಿ 26 ರಿಂದ ಕೋಮುವಾದಿ ಶಕ್ತಿಗಳಿಂದ ಹತ್ಯೆಗೀಡಾದ ಮಹಾತ್ಮಗಾಂಧಿಯವರು ಹುತಾತ್ಮರಾದ ಜನವರಿ 30 ರವರೆಗೆ ರಾಜ್ಯದಾದ್ಯಂತ ಕೋಮುವಾದ ತೊಲಗಿಸಿ, ಶಾಂತಿ, ಸೌಹಾರ್ದತೆ ಸಂರಕ್ಷಿಸಲು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಸಮ್ಮೇಳನವು ನಿರ್ಧರಿಸಿದೆ ಮತ್ತು ಇದನ್ನು ಯಶಸ್ವಿಗೊಳಿಸಲು ಜನತೆಯಲ್ಲಿ ಮನವಿ ಮಾಡಿದೆ.

ಶಾಂತಿ, ಸೌಹಾರ್ದತೆ, ಧಾರ್ಮಿಕ ಸಹಬಾಳ್ವೆ, ಸಾಮರಸ್ಯ ಮತ್ತು ಬಹುತ್ವದ ಸಂಸ್ಕೃತಿಯ ನಮ್ಮ ನಾಡನ್ನು ಅಸಹಿಷ್ಣತೆ, ಮತೀಯ ದ್ವೇಷ, ಹಿಂಸಾಕಾಂಡದ ನೆಲೆಯನ್ನಾಗಿಸಲು ಕೋಮುವಾದಿ ಫ್ಯಾಶಿಸ್ಟ್ ಶಕ್ತಿಗಳು ಸತತವಾಗಿ ಬಹುಮುಖಿಗಳ ಧಾಳಿ ನಡೆಸುತ್ತಿರುವುದನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಯ 23 ನೆಯ ಕರ್ನಾಟಕ ರಾಜ್ಯ ಸಮ್ಮೇಳನವು ಆತಂಕದಿಂದ ಗಮನಿಸುತ್ತದೆ. ಯಾವುದೇ ಬೆಲೆ ತೆತ್ತಾದರೂ ಸೌಹಾರ್ದತೆಯ ಕರ್ನಾಟಕವನ್ನು ಉಳಿಸಿಕೊಳ್ಳುವ ಹೋರಾಟವನ್ನು ಮುಂದುವರಿಸಲು ಪಣ ತೊಡುತ್ತದೆ.



ಕಾರ್ಪೋರೇಟ್ ಕಂಪನಿಗಳ ಹಿತ ಕಾಯುವ ಕೃಷಿ ನಾಶಕ್ಕೆ ಕಾರಣವಾಗುವ ಕೇಂದ್ರದ ಮೂರು ಕಾಯ್ದೆಗಳ ವಿರುದ್ಧ ದೇಶದ ರೈತರು–ಕಾರ್ಮಿಕ'ವರ್ಗದ ಬೃಹತ್ ಪ್ರತಿರೋಧ ಅರಂಭಗೊಂಡ ನಂತರ ಮತ್ತು ಅದು ಯಶಸ್ಸು ಕಂಡ ನಂತರ ಆರ್.ಎಸ್.ಎಸ್. ತನ್ನ ವಿಭಜಕ ಅಜೆಂಡಾದ ಜಾರಿಗೆ ಆಕ್ರಮಣಕಾರಿಯಾಗಿ ತೊಡಗಿರುವುದನ್ನು ಸಮ್ಮೇಳನವು ಗಮನಿಸುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಶ್ರೀ ಬಸವರಾಜ ಬೊಮ್ಮಾಯಿಯವರನ್ನು ಅಧಿಕಾರಕ್ಕೆ ತರಲಾಗಿದೆ.

ಜನಾದೇಶಕ್ಕೆ ಮತ್ತು ಸಂವಿಧಾನಾತ್ಮಕ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಕಪ್ಪು ಮಸಿ ಬಳಿದು ಹಣದ ಆಮಿಷ ಹಾಗೂ ಅಧಿಕಾರ ಬಲದ ಬ್ಲಾಕ್ ಮೇಲ್ ಕುತಂತ್ರಗಳಿಂದ ಹಿಂಬಾಗಿಲಿನಿಂದ ಕರ್ನಾಟಕ ಸರಕಾರದ ಅಧಿಕಾರ ಹಿಡಿದ ಸಂಘಪರಿವಾರ ಮತ್ತದರ ರಾಜಕೀಯ ಮುಖವಾದ ಭಾರತೀಯ ಜನತಾ ಪಕ್ಷ ನಾಡಿನ ಸಂಸ್ಕೃತಿ, ಸಂವಿಧಾನದ ಆಶಯಗಳಿಗೆ ವಿರುದ್ದವಾಗಿ ವರ್ತಿಸುತ್ತಿದೆ. ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ, ಗೋಹತ್ಯಾ ನಿಷೇಧ ಕಾಯ್ದೆ, ಮತಾಂತರ ತಡೆಯುವ ಹೆಸರಿನಲ್ಲಿ ಧಾರ್ಮಿಕ ಹಕ್ಕುಗಳ ರಕ್ಷಣಾ ಮಸೂದೆ, ದೇವಾಲಯಗಳ ನಿರ್ವಹಣೆ ಕುರಿತಾದ ಕಾಯ್ದೆಯೊಂದರ ಪ್ರಸ್ತಾಪ, ಕೇಂದ್ರದ ಹೊಸ ಶಿಕ್ಷಣ ನೀತಿಯ ತರಾತುರಿಯ ಜಾರಿ, ಹೀಗೆ ನಮ್ಮ ಭಾರತದ ಸಂವಿಧಾನದ ಮೂಲ ಲಕ್ಷಣವಾದ ಆಹಾರದ ಮತ್ತು ಮತಧರ್ಮ ಅನುಸರಿಸುವ ಧಾರ್ಮಿಕ ಸ್ವಾತಂತ್ರ್ಯದ ವ್ಯಕ್ತಿಗತ ಆಯ್ಕೆಯ ಹಕ್ಕು, ದತ್ತಿ ಹಾಗೂ ಧಾರ್ಮಿಕ ನಿರ್ವಹಣೆಯ ಸಾರ್ವಜನಿಕ ಹಕ್ಕುಗಳು, ಸಾಂಸ್ಕೃತಿಕ ನೀತಿಯ ಹೆಸರಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ, ವಿವಿಧ ಸಾಮಾಜಿಕ, ಸಾಹಿತ್ಯಿಕ,ಸಾಂಸ್ಕೃತಿಕ, ಶೈಕ್ಷಣಿಕ, ಸಂವಿಧಾನಾತ್ಮಕ ಸಂಸ್ಥೆಗಳನ್ನು ಸಂಘಪರಿವಾರದ 'ಕರಸೇವಕ'ರ ಹಿಡಿತಕ್ಕೆ ಒಪ್ಪಿಸುವುದು ಈ ಮೂಲಕ ಸಾಮಾಜಿಕ ತಳಹದಿಯನ್ನೇ ಅಸಹನೆಯ ಕೋಮುವಾದೀಕರಣಕ್ಕೆ ತಿರುಗಿಸುವ ಅಪಾಯಕಾರಿ ಕೃತ್ಯಕ್ಕೆ ಇಳಿದಿದೆ. ಫ್ಯಾಸಿಸ್ಟ್ ಮಾದರಿಯ ಕೋಮುವಾದ ಇಂದು ಸಮಾಜದ ಎಲ್ಲ ರಂಗಗಳಲ್ಲಿಯೂ ಆಳಗೊಳ್ಳುತ್ತಿರುವುದು, ಅದಕ್ಕಾಗಿ ಇಡೀ ಸರಕಾರ ಆಡಳಿತದ ಎಲ್ಲಾ ಅಂಗಗಳನ್ನು ದುರ್ಬಳಕೆ ಮಾಡಲಾಗುತ್ತಿರುವುದು ಅತ್ಯಂತ ಗಂಭೀರವಾದ ಬೆಳವಣಿಗೆಯಾಗಿದೆ.

ದೇಶದ ಜನತೆ ಆಳುವ ವರ್ಗಗಳ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಗಳಿಂದ ತತ್ತರಿಸುತ್ತಾ ತೀವ್ರ ಅತೃಪ್ತಿ ಹೆಚ್ಚುತ್ತಾ ಹೋಗುತ್ತಿರುವಾಗ ಅದು ಪ್ರಜಾಸತ್ತಾತ್ಮಕ ಮತ್ತು ದೇಶಪ್ರೇಮಿ ಪ್ರತಿರೋಧದ ಚಳುವಳಿಯಾಗದಂತೆ ತಡೆದು ಹಾದಿ ತಪ್ಪಿಸಲು ಕೋಮುವಾದ ಮತ್ತು ಮತೀಯ ಮೂಲಭೂತವಾದ ಬಂದಿರುವುದು ನಿಚ್ಚಳ ಅನುಭವವಾಗಿದೆ.

ಹತಾಶೆ ಮತ್ತು ಅತಂತ್ರದಿಂದ ನಲುಗುತ್ತಿರುವ ಜನತೆಯಲ್ಲಿ ಹುಸಿ ಅಸ್ಮಿತೆಯನ್ನು ಸೃಷ್ಟಿಸಲು ಜಾತಿ, ಭಾಷೆ, ಮತಧರ್ಮದಂತಹ ಗುರುತುಗಳನ್ನು ದಾಳವಾಗಿ ಬಳಸುತ್ತಿದೆ. ಕರ್ನಾಟಕದಲ್ಲಿ ಸಂಘಪರಿವಾರ ಬಿಜೆಪಿ ಹಲವಾರು ಪ್ರಾದೇಶಿಕ ವಿಭಿನ್ನ ಪ್ರಶ್ನೆಗಳನ್ನು ಇದಕ್ಕಾಗಿ ಬಳಸುತ್ತಿದೆ. ಈ ಕೋಮುವಾದಿ ಶಕ್ತಿಗಳು ಕೊವಿಡ್–19 ರ ಸೋಂಕಿನ ಸಂದರ್ಭವನ್ನೂ ಮುಸ್ಲಿಂ ಅಲ್ಪಸಂಖ್ಯಾತರನ್ನು ದೂಷಿಸಿ ಜನತೆಯ ಐಕ್ಯತೆಯನ್ನು ಒಡೆದು ಸಾಂಕ್ರಾಮಿಕತೆಯ ವಿರುದ್ಧ ಎಲ್ಲಾ ಜನತೆ ಒಂದಾಗಿ ಹೋರಾಡದಂತೆ, ಮತದ್ವೇಷದ ದಳ್ಳುರಿಯ ಕಿಚ್ಚು ಹೊತ್ತಿ ಉರಿಯುವಂತೆ ಬಳಸುವ ಹೇಯ ಕೃತ್ಯಕ್ಕೆ ಮುಂದಾದದ್ದನ್ನು ದೇಶ ಕಂಡಿದೆ.

'ಸರ್ವ ಜನಾಂಗದ ಶಾಂತಿಯ ತೋಟ'ವಾಗಿರುವ ಕರ್ನಾಟಕವನ್ನು ಕೋಮುವಾದದ ಅಗ್ನಿಕುಂಡವಾಗಿ ಮಾರ್ಪಡಿಸಲು ಸಂಘಪರಿವಾರ ಸತತವಾಗಿ ಯತ್ನಿಸುತ್ತಾ ಬಂದಿದೆ. ಆದರೆ ರಾಜ್ಯದ ಜನತೆ ಪೂರ್ಣವಾಗಿ ಅವಕಾಶವನ್ನು ನೀಡದೇ ಪ್ರತಿರೋಧ ಒಡ್ಡುತ್ತಾ ಬಂದಿದ್ದಾರೆ. ಆದರೆ ಕೋಮುವಾದಿಗಳು ಅಂತಹ ಪ್ರಯತ್ನಗಳನ್ನು ಬಿಟ್ಟಿಲ್ಲ. ವಿಶೇಷವಾಗಿ, ಅಂತಹ ಪ್ರಯತ್ನಗಳ ಪರಿಣಾಮವಾಗಿ ದಕ್ಷಿಣ ಕರ್ನಾಟಕ ಪ್ರದೇಶವಾದ ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಈ ಅವಧಿಯಲ್ಲಿ ಇಬ್ಬರು ಶಾಸಕರನ್ನು ಹೊಂದಿರುವುದನ್ನು ಮತ್ತಷ್ಟೂ ಕ್ರೋಢೀಕರಿಸಿ ಮುಂದೆ ನುಗ್ಗಲು ಯತ್ನಿಸುತ್ತಿದೆ. ಅದಕ್ಕಾಗಿ ಕೋಮುದ್ವೇಷದ ಹೆಚ್ಚಳ ಹಾಗೂ ಅಲ್ಪಸಂಖ್ಯಾತರು ಹಾಗೂ ಅವರ ಪ್ರಾರ್ಥನಾ ಸ್ಥಳಗಳ ಮೇಲೆ ಧಾಳಿಗಳನ್ನು ಆಯೋಜಿಸುತ್ತಿದೆ ಎಂಬುದನ್ನು ಗಮನಿಸಬೇಕು.

ಇದೇ ಸಂದರ್ಭದಲ್ಲಿ ಬಹುಸಂಖ್ಯಾತ ಹಿಂದುತ್ವವಾದದ ಧಾಳಿಗಳನ್ನು ನೆಪವಾಗಿರಿಸಿ ಅಲ್ಪಸಂಖ್ಯಾತರ ನಡುವೆ ಮತೀಯ ಮೂಲಭೂತವಾದ ತಲೆ ಎತ್ತುತ್ತಿರುವುದು ಸಹ ಅತ್ಯಂತ ಅಪಾಯಕಾರಿಯಾಗಿದೆ. ಮಾತ್ರವಲ್ಲ ಇವೆರಡೂ ಒಂದನ್ನೊಂದು ಪೋಷಿಸುವ ಶಕ್ತಿಗಳಾಗಿವೆ ಎನ್ನುವುದನ್ನು ಸಿಪಿಐ(ಎಂ) ಪುನರುಚ್ಚರಿಸುತ್ತದೆ. ಇಂತಹ ಶಕ್ತಿಗಳ ಬಗ್ಗೆ ಜಾಗೃತಿ ಅವಶ್ಯಕವೆಂದು, ಮನವಿ ಮಾಡಿದೆ.

ಸೌಹಾರ್ದತೆಯನ್ನು ಪ್ರತಿಪಾದಿಸುವ, ಕೋಮುವಾದವನ್ನು ವಿರೋಧಿಸುವ ಪ್ರಗತಿಪರ, ಮತನಿರಪೇಕ್ಷಿತ ಸಾಹಿತ್ಯಿಕ ಸಾಂಸ್ಕೃತಿಕ ಚಿಂತಕರು ಹಾಗೂ ಬರಹಗಾರರನ್ನು ಗುರಿಯಾಗಿಸಿ ಧಾಳಿ ನಡೆಸಲಾಗುತ್ತಿದೆ. ಸಾಹಿತಿ ಪ್ರೊ.ಭಗವಾನ್, ಕವಿ, ಸಂಗೀತಗಾರ ಹಂಸಲೇಖ ರಂಥವರ ಮೇಲೆ ನಡೆದಿರುವ ಕಿರುಕುಳ, ಬೆದರಿಕೆಗಳ ಧಾಳಿಗಳು ಇತ್ತೀಚಿನವು. ಹೀಗೆ ಇನ್ನೂ ಹಲವರನ್ನು ದಾಳಿಗೆ ಗುರಿ ಮಾಡಲಾಗಿದೆ. ಡಾ.ಎಂ.ಎಂ.ಕಲಬುರ್ಗಿ, ಗೌರಿ ಲಂಕೇಶ ರವರ ಹತ್ಯೆಯ ಪ್ರಶ್ನೆಯು ಇನ್ನೂ ಒಂದು ತಾರ್ಕಿಕ ಅಂತ್ಯವನ್ನು ಕಂಡಿಲ್ಲ. ಅದನ್ನು ವಿಳಂಬಿಸದೇ ಕ್ರಿಮಿನಲ್ ಅಪರಾಧದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ಆಗಲೇಬೇಕು.

ಕನ್ನಡ ಭಾಷೆ, ಸಂಸ್ಕೃತಿಯ ಅಸ್ಮಿತೆಯಾಗಿರುವ ಕನ್ನಡ ವಿಶ್ವವಿದ್ಯಾಲಯವನ್ನು ಹಂತ, ಹಂತವಾಗಿ ದುರ್ಬಲಗೊಳಿಸಲಾಗುತ್ತಿರುವುದು, ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಅತಿ ಪುರಸ್ಕಾರ ನೀಡುತ್ತಿರುವುದು ದುರಾಲೋಚನೆಯ ಭಾಗವಾಗಿದೆ.

ಬಿಜೆಪಿಯ ಆಡಳಿತದ ಅವಧಿಯಲ್ಲಿ ಅಲ್ಪಸಂಖ್ಯಾತರ ಮೇಲಿನ ಧಾಳಿಗಳು ಹೆಚ್ಚಾಗಿವೆ. ಇದೀಗ ಮತ್ತೆ ಮತಾಂತರದ ನೆಪವೊಡ್ಡಿ ಹಲವಾರು ಕ್ರಿಶ್ಚಿಯನ್ ಚರ್ಚುಗಳ ಮೇಲೆ ಧಾಳಿ, ಮುಸ್ಲಿಮರ ಮೇಲೆ ಗುಂಪು ಧಾಳಿ, ಮುಸ್ಲಿಂ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿಯ ಬೆದರಿಕೆ ನಡೆಸುತ್ತಿರುವುದು ಅಲ್ಪಸಂಖ್ಯಾತರನ್ನು ಕೆಣಕಿ, ಹತಾಶೆಗೆ ತಳ್ಳಲು, ಕೋಮು ವಿಭಜನೆ ತರಲು ಹೊರಟಿರುವುದು ಖಂಡನೀಯ. ಮುಖ್ಯಮಂತ್ರಿ ಒಳಗೊಂಡು ಬಿಜೆಪಿಯ ಹಲವು ಹಿರಿಯ ನಾಯಕರು, ಸಂಪುಟದ ಹಿರಿಯ ಸಚಿವರುಗಳೇ ಅಲ್ಪಸಂಖ್ಯಾತರ ಮೇಲಿನ ಧಾಳಿಗಳ ಸಮರ್ಥನೆ ಹಾಗೂ ಧಾಳಿಗಳಿಗೆ ಪ್ರಚೋದನೆ ನೀಡುತ್ತಿದ್ದಾರೆ. ಮತೀಯ ಸೌಹಾರ್ದತೆಯ ಶ್ರದ್ಧಾ ಕೇಂದ್ರಗಳನ್ನು, ಪೂಜಾ ಸ್ಥಳಗಳನ್ನು ಧ್ವಂಸಗೊಳಿಸುವ ಬೆದರಿಕೆಗಳನ್ನು ಹಿರಿಯ ಸಚಿವರೇ ಹಾಕುತ್ತಿದ್ದಾರೆ. ಈ ಮೂಲಕ 1991ರ ಧಾರ್ಮಿಕ ಪೂಜಾ ಸ್ಥಳಗಳ ಸಂರಕ್ಷಣೆಯ ಕಾಯ್ದೆಯನ್ನು ನಗ್ನವಾಗಿಯೇ ಉಲ್ಲಂಘಿಸುವ ಆ ಮೂಲಕ ಸಂವಿದಾನ, ಕಾನೂನಾತ್ಮಕ ಆಡಳಿತವನ್ನು ಧಿಕ್ಕರಿಸಿ ಅರಾಜಕತೆಯನ್ನು, ವ್ಯಾಪಕ ಆಂತರಿಕ ನಾಗರೀಕ ಸಂಘರ್ಷವನ್ನು ಹುಟ್ಟು ಹಾಕಲು, ಮನುವಾದವನ್ನು ಜಾರಿ ಮಾಡಲು ಹೊರಟಿದ್ದಾರೆ. ಬಾಬಾಬುಡನ್ ದರ್ಗಾ– ದತ್ತಪೀಠದ ವಿವಾದದ ನ್ಯಾಯಾಲಯಗಳ ಹಿಂದಿನ ತೀರ್ಪನ್ನು ಗೌರವಿಸದೇ ತನ್ನದೇ ತಿರುಚಿದ ವ್ಯಾಖ್ಯಾನವನ್ನು ಸರಕಾರದ ಮೂಲಕ ಜಾರಿಗೆ ತರಲು ಯತ್ನಿಸಲಾಗುತ್ತಿದೆ. ಕೇಂದ್ರದ ಹೊಸ ಶಿಕ್ಷಣ ನೀತಿಯ ಜಾರಿ, ಪಠ್ಯಕ್ರಮದ ಬದಲಾವಣೆ ಮೂಲಕ ಶಿಕ್ಷಣ ರಂಗವನ್ನು ಕೋಮುವಾದೀಕರಿಸಲು ಸಂಘಪರಿವಾರ– ಬಿಜೆಪಿ ಸರಕಾರ ತೀವ್ರ ಪ್ರಯತ್ನ ನಡೆಸಿರುವುದನ್ನು ಸಮ್ಮೇಳನವು ತೀವ್ರವಾಗಿ ವಿರೋಧಿಸುತ್ತದೆ. ದೇಶದ ನಾಗರೀಕರನ್ನು ಮತೀಯ ಆಧಾರದಲ್ಲಿ ವಿಭಜಿಸುವ ಪೌರತ್ವ ಕಾಯ್ದೆಯನ್ನು ಜಾರಿಗೊಳಿಸಲು ಮುಂದಾಗುತ್ತಿದ್ದು ಅದನ್ನು ಕೂಡಲೇ ವಾಪಾಸು ಪಡೆಯಬೇಕೆಂದು, ಅಂತಹ ಪ್ರಯತ್ನಗಳನ್ನು ನಿಲ್ಲಿಸಬೇಕೆಂದು ಸಮ್ಮೇಳನವು ಆಗ್ರಹಿಸುತ್ತದೆ.

ಭಾರತದಲ್ಲಿನ ಕೋಮುವಾದಕ್ಕೆ ಜಾತಿ ಸ್ವರೂಪ ಇರುವುದನ್ನು ಗಮನಿಸಬೇಕು. ಹೀಗಾಗಿ ಅದು ವಿವಿಧ ಜಾತಿಗಳ ಅಸ್ಮಿತೆಯನ್ನು ಎಬ್ಬಿಸಿ, ಜಾತಿಗಳ ಕ್ರೋಢೀಕರಣಕ್ಕೂ ಎಳಸುತ್ತಿದೆ. ದಮನಿತ ಸಮುದಾಯಗಳ ಶಿಕ್ಷಣ ಮತ್ತು ವೃತ್ತಿ ಮೀಸಲಾತಿಯನ್ನು ಅರ್ಥಹೀನಗೊಳಿಸಲು ಮತ್ತು ವಿವಿಧ ಜನವಿಭಾಗಗಳನ್ನು ಎತ್ತಿ ಕಟ್ಟಿ ಸಂಘರ್ಷಗಳನ್ನು ಹುಟ್ಟು ಹಾಕಲು ಕೋಮುವಾದಿಗಳು ಹವಣಿಸುತ್ತಿದ್ದು ಈ ಹುನ್ನಾರವನ್ನು ವಿಫಲಗೊಳಿಸಬೇಕು ಮತ್ತು ಐಕ್ಯತೆಯನ್ನು ಕಾಪಾಡಬೇಕು.

ಫ್ಯಾಶಿಸಂ, ಕೋಮುವಾದ ಎನ್ನುವುದು ನಿಜ ಅರ್ಥದಲ್ಲಿ ಬಂಡವಾಳವಾದದ ತೀವ್ರ ಬಲಪಂಥೀಯತೆಯ ಅತ್ಯಂತ ಪ್ರತಿಗಾಮಿ ಅಭಿವ್ಯಕ್ತಿಯಾಗಿದೆ ಮತ್ತು ಈ ವರ್ಗಗಳ ಸೇವೆಯಲ್ಲಿ ಪೂರ್ಣ ತೊಡಗಿರುತ್ತದೆ, ದುಡಿಯುವ ವರ್ಗಗಳ ಕಡು ಶತೃವೂ ಆಗಿದ್ದು ಶೋಷಣೆಯನ್ನು ಅಬಾಧಿತಗೊಳಿಸುವ ಯತ್ನದಲ್ಲಿ ಕಾರ್ಯಾಚರಿಸುತ್ತದೆ ಎಂಬ ಅಂಶವನ್ನು ಪುನರುಚ್ಚರಿಸುವ ಸಮ್ಮೇಳನವು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜನ ವಿರೋಧಿ, ದೇಶ ದ್ರೋಹಿ ಆರ್ಥಿಕ ನೀತಿಗಳನ್ನು ಜಾರಿಗೊಳಿಸುತ್ತಿವೆ. ಕರ್ನಾಟಕದಲ್ಲಿ ಹಿಂದೆ ಬಿ.ಎಸ್.ಯಡಿಯೂರಪ್ಪ, ಪ್ರಸಕ್ತವಾಗಿ ಬಸವರಾಜ ಬೊಮ್ಮಾಯಿಯವರ ಸರಕಾರಗಳು ಅತ್ಯಂತ ಉತ್ಸುಕತೆಯಿಂದ ಜಾರಿಗೊಳಿಸುತ್ತಿರುವ ಆರ್ಥಿಕ ನೀತಿಗಳ ವಿರುದ್ಧ, ಜನತೆಯ ಹಿತ ರಕ್ಷಣೆಗಾಗಿ ನಡೆಯುವ ಹೋರಾಟವು ಮಹತ್ವವನ್ನು ಹೊಂದಿದೆ. ಜನತೆಯ ಒಗ್ಗಟ್ಟನ್ನು ಬೆಸೆಯುತ್ತದೆ. ಕಾರ್ಮಿಕರು ರೈತ– ಕೃಷಿ ಕೂಲಿಕಾರರು, ಸೇವಾ ವಲಯದ ನೌಕರರ ಹೋರಾಟಗಳನ್ನು ಸಿಪಿಐ(ಎಂ) ಬೆಂಬಲಿಸುತ್ತದೆ. ಮುಂಬರುವ ಅಖಿಲ ಭಾರತ ಮುಷ್ಕರವನ್ನು ಯಶಸ್ವಿಗೊಳಿಸಲು ಕರೆ ನೀಡುತ್ತದೆ. ಇಂತಹ ವಿಶಾಲ ಪ್ರತಿರೋದ ಸಾಮಾಜಿಕ, ಆರ್ಥಿಕ ಬದಲಾವಣೆಗಳನ್ನು ತರುವುದು.

ಇಂದು ಕೋಮುವಾದದ ಬಹುಮುಖಿ ಅಪಾಯಗಳನ್ನು ಗಂಭೀರವಾಗಿ ಅರಿತು, ಅದರ ವಿರುದ್ಧ ನಿಖರ, ನರ್ದಿಷ್ಟವಾದ ಹೋರಾಟವನ್ನು ಬೆಳೆಸುವಲ್ಲಿ ಪ್ರಮುಖ ಜಾತ್ಯಾತೀತ ರಾಜಕೀಯ ಪಕ್ಷಗಳಲ್ಲಿ ಜಾಗೃತೆ ಇಲ್ಲವಾಗಿರುವುದನ್ನು , ಕೆಲವು ಪಕ್ಷಗಳ ಸಂದರ್ಭಸಾಧಕ ರಾಜಕಾರಣವನ್ನು ಟೀಕಿಸಿರುವ ಸಮ್ಮೇಳನವು ಅಂತಹ ಪ್ರವೃತ್ತಿಗಳನ್ನು ಬಿಟ್ಟು ಧೃಡ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡುತ್ತದೆ.

ಕೋಮು ಸೌಹಾರ್ದತೆಗಾಗಿ, ಕೋಮುವಾದಿ ಶಕ್ತಿಗಳನ್ನು ನಿಗ್ರಹಿಸಲು ಸರಕಾರವನ್ನು ಸಮ್ಮೇಳನವು ಆಗ್ರಹಿಸುತ್ತದೆ. ಕೋಮುವಾದದ ವಿರುದ್ಧ ರಾಜಿ ಇಲ್ಲದ ಹೋರಾಟವನ್ನು ನಡೆಸಲು ನಿರ್ಧರಿಸಿರುವ ಸಿಪಿಐ(ಎಂ) 23 ನೆಯ ರಾಜ್ಯ ಸಮ್ಮೇಳನವು ಪ್ರಬಲ ಪ್ರತಿರೋಧವನ್ನು ಒಡ್ಡುವುದು ತುರ್ತು ಕರ್ತವ್ಯವಾಗಿದ್ದು ಎಲ್ಲಾ ಪ್ರಗತಿಪರ, ಜೀವಪರ, ಮತನಿರಪೇಕ್ಷ, ದೇಶಪ್ರೇಮಿ ಶಕ್ತಿಗಳನ್ನು ಒಂದುಗೂಡಿಸಲು ಶ್ರಮಿಸಲಿದೆ. ಈ ದೆಸೆಯಲ್ಲಿ ಎಲ್ಲಾ ಶಕ್ತಿಗಳು ಮುಂದಾಗಬೇಕೆಂದು ವಿನಂತಿಸುತ್ತದೆ.

ಈ ಹಿನ್ನೆಲೆಯಲ್ಲಿ ನಮ್ಮ ಸಂವಿಧಾನ ಅಂಗೀಕರಿಸಿದ ಗಣರಾಜ್ಯೋತ್ಸವದ ದಿನವಾದ ಜನವರಿ 26 ರಿಂದ ಕೋಮುವಾದಿ ಶಕ್ತಿಗಳಿಂದ ಹತ್ಯೆಗೀಡಾದ ಮಹಾತ್ಮಗಾಂಧಿಯವರು ಹುತಾತ್ಮರಾದ ಜನವರಿ 30 ರವರೆಗೆ ರಾಜ್ಯದಾದ್ಯಂತ ಕೋಮುವಾದ ತೊಲಗಿಸಿ, ಶಾಂತಿ, ಸೌಹಾರ್ದತೆ ಸಂರಕ್ಷಿಸಲು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ಸಮ್ಮೇಳನವು ನಿರ್ಧರಿಸುತ್ತದೆ ಮತ್ತು ಇದನ್ನು ಯಶಸ್ವಿಗೊಳಿಸಲು ಜನತೆಯಲ್ಲಿ ಮನವಿ ಮಾಡುತ್ತದೆ.

23ನೆಯ ರಾಜ್ಯ ಸಮ್ಮೇಳನ ಸಂಖ್ಯೆಗಳಲ್ಲಿ

3 ದಿನಗಳ 23ನೆಯ ರಾಜ್ಯ ಸಮ್ಮೇಳನದಲ್ಲಿ 246 ಪ್ರತಿನಿಧಿಗಳು 47ವೀಕ್ಷಕರು 69 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದರು. 296ಪುಟಗಳ ವರದಿಯ ಮೇಲೆ 74 ಪ್ರತಿನಿಧಿಗಳು 480 ನಿಮಿಷಗಳ ಕಾಲ ಚರ್ಚೆ ನಡೆಸಿದರು. ಸಮ್ಮೇಳನ 8 ಮಹಿಳೆಯರಿರುವ 34 ಸದಸ್ಯರ ರಾಜ್ಯಸಮಿತಿಯನ್ನು ಆರಿಸಿತು ಹಾಗೂ ಇಬ್ಬರು ಮಹಿಳೆಯರು ಸೇರಿದಂತೆ 12 ಸದಸ್ಯರಿರುವ ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆ ಮಾಡಿತು.

ಅರ್ಹತಾ ಪರಿಶೀಲನಾ ಸಮಿತಿಯ ವರದಿ

ವಯಸ್ಸು

18–25 – 2 (ಅಭಿನ್‌ರಾಜ್ 24 ವರ್ಷ, ಅಲ್ಬಿನ್ ಕೆ – 24)
26–30 – 17
31 –50 – 136
51 –70 – 120
70 ಕ್ಕಿಂತ ಮೇಲ್ಪಟ್ಟವರು – 5
83 ವರ್ಷದ ಕಾಂ.ವಿಜೆಕೆ ನಾಯರ್ ಅತ್ಯಂತ ಹಿರಿಯರಾದರೆ, 24 ವರ್ಷದ ಕಾಂ.ಅಭಿನ್‌ರಾಜ್ ಮತ್ತು ಆಲ್ಬಿನ್ ಕೆ ಅತ್ಯಂತ ಕಿರಿಯ ವಯಸ್ಸಿನ ಸಂಗಾತಿಗಳು
(ಏಳು ಮಂದಿಯಿಂದ ಮಾಹಿತಿ ಸಿಕ್ಕಿಲ್ಲ)

ವಿದ್ಯಾಭ್ಯಾಸ

ಅವಿದ್ಯಾವಂತರು – 02
1 ರಿಂದ 5 ನೇ ತರಗತಿ – 10
6 ರಿಂದ 10 ನೇ ತರಗತಿ – 67
ಪದವಿಪೂರ್ವ – 55
ಪದವೀದರರು – 110
ಸ್ನಾತಕೋತ್ತರ – 34
(10 ಮಂದಿಯಿಂದ ಮಾಹಿತಿಯಿಲ್ಲ)

ಪಕ್ಷಕ್ಕೆ ಸೇರಿದ ವರ್ಷ

1948 ರಿಂದ 1976 – 06
1977 ರಿಂದ 1991 – 64
1992 ರಿಂದ 2012 – 171
2012 ರ ನಂತರ – 42
(4 ಮಂದಿಯಿಂದ ಮಾಹಿತಿ ಸಿಕ್ಕಿಲ್ಲ)

ವಿವಾಹಿತರು / ಅವಿವಾಹಿತರು

ವಿವಾಹಿತರು – 258
ಅವಿವಾಹಿತರು – 28
(ಇಬ್ಬರಿಂದ ಮಾಹಿತಿ ಇಲ್ಲ)

ಭಾಗವಹಿಸಿದ ರಾಜ್ಯ ಸಮ್ಮೇಳನಗಳು

ಮೊದಲ ಭಾರಿ ಭಾಗವಹಿಸಿದವರು – 78
2 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 47
3 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 25
4 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 33
5 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 20
6 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 20
7 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 19
8 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 14
9 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 8
10 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 6
11 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 3
12 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 2
13 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 1
14 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 3
15 ಸಮ್ಮೇಳನಗಳಲ್ಲಿ ಭಾಗವಹಿಸಿದವರು – 3

ವರ್ಗ ಹಿನ್ನೆಲೆ:

ಕೂಲಿಕಾರ – 34
ಬಡ ರೈತ – 61
ಮಧ್ಯಮ ರೈತ – 46
ಶ್ರೀಮಂತ ರೈತ – 1
ಭೂಮಾಲಿಕ – 0
ಕಾರ್ಮಿಕ – 105
ನೌಕರ – 22
ಮಧ್ಯಮ ವರ್ಗ – 4
ಪುಟ್ಟ ಬಂಡಾವಾಳಿಗರು – 2
(13 ಮಂದಿಯಿಂದ ಮಾಹಿತಿ ಸಿಕ್ಕಿಲ್ಲ)

ಸಾಮಾಜಿಕ ಹಿನ್ನೆಲೆ :

ಪರಿಶಿಷ್ಟ ಜಾತಿ – 53
ಪರಿಶಿಷ್ಟ ಪಂಗಡ – 13
ಆದಿವಾಸಿ – 1
ಅಲ್ಪಸಂಖ್ಯಾತರು – 22
ಹಿಂದುಳಿದ ವರ್ಗ – 86
ಸಾಮಾನ್ಯ – 101
(11 ಮಂದಿಯಿಂದ ಮಾಹಿತಿ ಸಿಕ್ಕಿಲ್ಲ)

ಪಕ್ಷದಲ್ಲಿ ಸ್ಥಾನ

ರಾಜ್ಯ ಮಟ್ಟದಲ್ಲಿ – 41
ಜಿಲ್ಲಾ ಮಟ್ಟದಲ್ಲಿ – 159
ತಾಲ್ಲೂಕು ಮಟ್ಟದಲ್ಲಿ – 24
ವಲಯ – 20
ಶಾಖಾ ಮಟ್ಟದಲ್ಲಿ – 44

ಉದ್ಯೋಗ

ಕೃಷಿ – 24
ಸಾಮೂಹಿಕ ಸಂಘಟನೆ – 7
ಪೂರ್ಣಾವಧಿ – 110
ಸ್ವಯಂ ಉದ್ಯೋಗ – 27
ನೌಕರರು – 59
ಕೂಲಿಗೆಲಸ – 14
ವಕೀಲರು – 10
ವಿಮಾ – 8
ಕೇಂದ್ರ – 1
ಬ್ಯಾಂಕ್ ನೌಕರರು – 1
ಗೃಹಿಣಿ – 4
ನಿರುದ್ಯೋಗಿಗಳು – 8
(21 ಮಂದಿಯಿಂದ ಮಾಹಿತಿ ಸಿಕ್ಕಿಲ್ಲ)

ಸಾಮೂಹಿಕ ಸಂಘಟನೆ ಕೆಲಸ

ವಿದ್ಯಾರ್ಥಿ – 8
ಯುವಜನರಂಗ – 9
ಕಾರ್ಮಿಕ ರಂಗ – 147
ದಲಿತ ರಂಗ – 12
ಸಮುದಾಯ – 2
ಆದಿವಾಸಿ – 3
ಜನಶಕ್ತಿ – 6
ದೇವದಾಸಿ – 5
ವಿಜ್ಞಾನ – 5
ರೈತ ರಂಗ – 40
ಎಐಎಲ್‌ಯು – 4
ಮಹಿಳಾ ರಂಗ – 17
ಕೃಷಿ ಕೂಲಿಕಾರ – 21
ಅಂಗವಿಕಲ – 1
ಕಟ್ಟಡ – 2
(5 ಮಂದು ಮಾಹಿತಿ ನೀಡಿಲ್ಲ)

ಸಾಮೂಹಿಕ ಸಂಘಟನೆಯಲ್ಲಿ ಸ್ಥಾನ

ಅಖಿಲ ಭಾರತ ಮಟ್ಟದಲ್ಲಿ – 21
ರಾಜ್ಯ ಮಟ್ಟದಲ್ಲಿ – 81
ಜಿಲ್ಲಾ ಮಟ್ಟದಲ್ಲಿ – 113
ತಾಲ್ಲೂಕು ಮಟ್ಟದಲ್ಲಿ – 42
ಏನು ಬರೆಯದವರು – 46

ಮಾಸಿಕ ಆದಾಯ

ಆದಾಯ ವಿಲ್ಲದವರು – 9
1000 ದವರೆಗೆ – 2
1001 ರಿಂದ 5000 – 55
5001 ರಿಂದ 10000 – 94
10001 ರಿಂದ 20000 – 64
20001 ರಿಂದ 50000 – 25
50001 ರಿಂದ 100000 – 13
100000 ಕ್ಕಿಂತ ಹೆಚ್ಚು – 7
(19 ಮಂದಿಯಿಂದ ಮಾಹಿತಿ ಇಲ್ಲ)

ಪಕ್ಷದ ಪತ್ರಿಕೆ

ಜನಶಕ್ತಿ ಚಂದಾದಾರರು – 193
ಪಿಡಿ ವಾರಪತ್ರಿಕೆ – 35
ಎರಡು ವಾರ ಪತ್ರಿಕೆಗಳನ್ನು ಓದುವವರು – 28
(32 ಮಂದಿ ಏನೂ ಬರೆದಿಲ್ಲ)


ಜೈಲು ವಾಸ

1 ರಿಂದ 7 ದಿವಸ – 47
7 ರಿಂದ 15 ದಿವಸ – 14
16 ರಿಂದ 30 ದಿವಸ – 11
1 ರಿಂದ 3 ತಿಂಗಳು – 5
3 ರಿಂದ 6 ತಿಂಗಳು – 1
6 ತಿಂಗಳಿಗಿಂತಲೂ ಹೆಚ್ಚು – 2
1 ವರ್ಷ 2 ತಿಂಗಳು 22 ದಿವಸ – 1
(ಕಾಂ. ವಿಜೆಕೆ ನಾಯರ್)
ಭೂಗತ ಜೀವನ 1 ರಿಂದ 30 ದಿನ – 2
(ಕಾಂ. ವಿಜೆಕೆ ನಾಯರ್‌ಮೂರು ತಿಂಗಳು ಭೂಗತರಾಗಿದ್ದರು)
ಜೈಲಿಗೆ ಹೋಗದವರು ಹಾಗೂ ಏನೂ ಬರೆಯದವರು – 205

ಪ್ರಮುಖ ಚಳುವಳಿಗಳು / 3 ವರ್ಷದಲ್ಲಿ ಭಾಗವಹಿಸಿರುವ ಪ್ರಮುಖ ಹೋರಾಟ

ಬಹುತೇಕ ಹೋರಾಟ ಎಂದು ಬರೆದವರು – 246
ಏನು ಬರೆಯದವರು – 42

ಸಮ್ಮೇಳನದ ಕಲಾಪಗಳಿಗಾಗಿ ರಚಿಸಿದ ವಿವಿಧ ಸಮಿತಿಗಳ ಸದಸ್ಯರುಗಳು



ಅಧ್ಯಕ್ಷೀಯ ಮಂಡಳಿ: ಕಾಂ. ಕೆ. ಶಂಕರ್, ಕಾಂ. ವರಲಕ್ಷ್ಮಿ, ಕಾಂ. ಜಯರಾಮ ರೆಡ್ಡಿ, ಕಾಂ. ಮಾಳಮ್ಮ ಮತ್ತು ಕಾಂ. ಸಯ್ಯದ್ ಮುಜೀಬ್

ದಾಖಲಾತಿ ಸಮಿತಿ: ಕಾಂ. ಮಾಲಿನಿ ಮೇಸ್ತ, ಕಾಂ. ಮಹೇಶ ಪತ್ತಾರ್, ಕಾಂ. ಲಿಂಗರಾಜು, ಕಾಂ. ಸಿ.ಕುಮಾರಿ ಮತ್ತು ಕಾಂ. ರಘುರಾಮ ರೆಡ್ಡಿ

ಅರ್ಹತಾ ಪರಿಶೀಲನಾ ಸಮಿತಿ : ಕಾಂ. ವಸಂತಾಚಾರಿ, ಕಾಂ ಶ್ರೀಮಂತ ಬೀರಾದರ್, ಕಾಂ. ವಿ. ಗೀತಾ, ಕಾಂ. ಸುರೇಶ್ ಕಲ್ಲಗಾರ್ ಮತ್ತು ಕಾಂ. ಜಗದೀಶ್ ಸೂರ್ಯ.

ನಿರ್ಣಯ ಸಮಿತಿ: ಕಾಂ. ಮೀನಾಕ್ಷಿ ಸುಂದರಂ, ಕಾಂ. ಜಿ.ಸಿ. ಬಯ್ಯಾರೆಡ್ಡಿ, ಕಾ. ಕೆ.ಎಸ್. ವಿಮಲಾ, ಕಾಂ. ಗೌರಮ್ಮ, ಕಾಂ. ಚಂದ್ರಪ್ಪ ಹೊಸ್ಕೇರ, ಕಾಂ. ಎಸ್.ವೈ. ಗುರುಶಾಂತ್, ಕಾಂ. ಕೆ. ನೀಲಾ., ಕಾಂ. ಮುನೀರ್ ಕಾಟಿಪಳ್ಳ, ಕಾಂ. ಎನ್. ನಾಗರಾಜ್, ಕಾಂ. ಯಮುನಾ ಗಾಂವ್ಕರ್ ಮತ್ತು ಕಾಂ. ಅಮರೇಶ್

ಭಾಷಾಂತರ ಸಮಿತಿ: ಕಾಂ. ಕೆ.ಎನ್. ಉಮೇಶ್, ಕಾಂ. ಎನ್. ಪ್ರತಾಪಸಿಂಹ, ಕಾಂ. ಸುರೇಶ್, ಕಾಂ.ಕೆ. ಪ್ರಕಾಶ, ಕಾಂ. ಹರ್ಷ, ಕಾಂ. ಟಿ.ಎಲ್. ಕೃಷ್ಣೇಗೌಡ ಮತ್ತು ಕಾಂ. ಮುರಳೀಧರ ಪೇಶ್ವ







‘ದ್ವೇಷ ಭಾಷಣ’ಗಳಷ್ಟೇ ಅಲ್ಲ ಫ್ಯಾಸಿಸ್ಟ್ ತೆರನ ಹಿಂಸಾಚಾರಕ್ಕೆ ಕರೆ!

ಪ್ರಕಾಶ ಕಾರಟ್



ಈ ‘ದ್ವೇಷ ಭಾಷಣಗಳು’ ಆವೇಶಭರಿತ ಮಾತುಗಾರಿಕೆಗಷ್ಟೇ ಸೀಮಿತವಾದವುಗಳಲ್ಲ. ಅವುಗಳು ದೈನಂದಿನ ಜೀವನದಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರ ವಿರುದ್ಧ ದಬ್ಬಾಳಿಕೆ ನಡೆಸುವಲ್ಲಿ ಪರ್ಯಾವಸಾನವಾಗುತ್ತಿವೆ, ಪ್ರತಿಫಲನಗೊಳ್ಳುತ್ತಿವೆ. ಇವೆಲ್ಲ ಕೇವಲ ದ್ವೇಷ ಭಾಷಣಗಳಾಗಿ ಉಳಿದಿಲ್ಲ. ಹಿಂಸಾಚಾರಕ್ಕೆ ಹಾಗೂ ಜನಾಂಗೀಯ ನಾಶಕ್ಕೆ ಬಹಿರಂಗ ಕರೆಯಾಗಿವೆ. ಇವನ್ನು ಸಂಘಟಿಸಿದವರು ಭಾರತವನ್ನು ‘ಹಿಂದೂರಾಷ್ಟ್ರ’ ಮಾಡುವತ್ತ ‘ಧರ್ಮ ಸಂಸದ್’ ಒಂದು ಹೆಜ್ಜೆಯಾಗಿದೆ ಎಂದು ಹೇಳಿದ್ದಾರೆ. ಇಸ್ಲಾಂ ವಿರುದ್ಧದ ಹೋರಾಟಕ್ಕೆ ಕರೆ ಕೊಟ್ಟಿದ್ದೇ ಮಾತ್ರವಲ್ಲದೆ ಅಖಾಡಾಗಳನ್ನು ಶಸ್ತ್ರಾಸ್ತ್ರ ತರಬೇತಿ ಹಾಗೂ ಹಿಂದು ಧರ್ಮ ರಕ್ಷಣೆಯ ಗುಂಪುಗಳ ಕೇಂದ್ರವಾಗಿ ಮಾಡಲಾಗುವುದು ಎಂದೂ ಅವರು ಘೋಷಿಸಿದ್ದಾರೆ. ಇವರೆಲ್ಲರೂ ಹಿಂದೂ ರಾಷ್ಟ್ರ ಹೇರುವ ಉದ್ದೇಶದಿಂದ ಸಂವಿಧಾನ ಮತ್ತು ಪ್ರಭುತ್ವದ ಸಂಸ್ಥೆಗಳನ್ನು ಬುಡಮೇಲು ಮಾಡುವ ಹಿಂದುತ್ವ ಸೇನೆಯ ಭಾಗವಾಗಿದ್ದಾರೆ. ಆದರೆ ಉತ್ತರಾಖಂಡ ಪೋಲೀಸರು ಮಾತ್ರ ಇನ್ನೂ ದೃಢವಾದ ಪುರಾವೆಗಾಗಿ ಹುಡುಕಾಡುತ್ತಿದ್ದಾರೆ!.

ಹರಿದ್ವಾರದಲ್ಲಿ 2021ರ ಡಿಸೆಂಬರ್ 17ರಿಂದ 19ರ ವರೆಗೆ ದ್ವೇಷ ಭಾಷಣ ಹರಿಬಿಟ್ಟ ‘ಧರ್ಮಸಂಸದ್’ ನಡೆದು ಎರಡು ವಾರವಾದರೂ ಒಬ್ಬನೇ ಒಬ್ಬನನ್ನೂ ಇದುವರೆಗೆ ಬಂಧಿಸಲಾಗಿಲ್ಲ. ಮುಸ್ಲಿಮರ ಮೇಲೆ ದಾಳಿ ಮಾಡಲು ಮತ್ತು ಸಾಮೂಹಿಕ ಹತ್ಯೆ ನಡೆಸಿ ನಿರ್ಮೂಲಗೊಳಿಸಬೇಕು ಎಂದು ಅಲ್ಲಿ ಕರೆಗಳನ್ನು ಕೊಡಲಾಗಿತ್ತು. ದಾಖಲಾದ ಮೊದಲ ಎಫ್‌ಐಆರ್‌ನಲ್ಲಿ ಒಂದೇ ಒಂದು ಹೆಸರು ಉಲ್ಲೇಖಗೊಂಡಿದೆ. ಅದರಲ್ಲೂ ಹಿಂದೂ ಧರ್ಮಕ್ಕೆ ಮತಾಂತರಗೊಂಡ ಒಬ್ಬ ಮುಸ್ಲಿಮನ ಹೆಸರು ಅದಾಗಿದೆ. ಆನಂತರ, ಇನ್ನೊಂದು ಎಫ್‌ಐಆರ್ ದಾಖಲಾಗಿದ್ದು ಈ ಸಮಾರಂಭದ ಸಂಘಟಕ ಯತಿ ನರಸಿಂಘಾನಂದ ಸಹಿತ ಇನ್ನೂ ನಾಲ್ಕು ಹೆಸರುಗಳು ಅದರಲ್ಲಿ ನಮೂದಾಗಿವೆ.

ದ್ವೇಷ ಭಾಷಣ ವಿಚಾರದ ತನಿಖೆಗಾಗಿ ಒಂದು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವುದಾಗಿ ಉತ್ತರಾಖಂಡ ಸರ್ಕಾರ ಜನವರಿ 1ರಂದು ಪ್ರಕಟಿಸಿದೆ. ದೃಢವಾದ ಪುರಾವೆ ಸಿಕ್ಕರಷ್ಟೇ ಬಂಧನ ಮಾಡಲಾಗುತ್ತದೆ ಎಂದು ಈ ಸಂಬಂಧ ಕೇಳಿದ ಪ್ರಶ್ನೆಗೆ ಉತ್ತರಿಸಿದ ಎಸ್‌ಐಟಿ ಉಸ್ತುವಾರಿ ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಪುರಾವೆ ಸಾರ್ವಜನಿಕವಾಗಿದೆ

ದ್ವೇಷ ಭಾಷಣಕ್ಕೆ ಪುರಾವೆ ಸಾರ್ವಜನಿಕವಾಗಿಯೇ ಇದೆ. ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಲಾಗಿತ್ತು. ಭಾಷಣದ ವಿಡಿಯೋಗಳು ವ್ಯಾಪಕವಾಗಿ ಪ್ರಸಾರವಾಗಿವೆ. ಒಬ್ಬರಾದ ನಂತರ ಇನ್ನೊಬ್ಬ ಭಾಷಣಕಾರ ಶಸ್ತ್ರಾಸ್ತ್ರ ಕೈಗೆತ್ತಿಕೊಂಡು ಮುಸ್ಲಿಮರ ನರಮೇಧ ನಡೆಸಬೇಕೆಂದು, ಹಳ್ಳಿಗಳನ್ನು ಮುಸ್ಲಿಮರಿಂದ ಮುಕ್ತಗೊಳಿಸಬೇಕೆಂದು ಕರೆ ಕೊಟ್ಟಿದ್ದನ್ನು ಇವುಗಳು ತೋರಿಸುತ್ತವೆ. ಒಬ್ಬ ಭಾಷಣಕಾರನಂತೂ ತನಗೆ ಅವಕಾಶ ಸಿಕ್ಕಿದ್ದರೆ (ಮಾಜಿ) ಪ್ರಧಾನಿ ಮನಮೋಹನ್ ಸಿಂಗ್‌ರನ್ನು ರಿವಾಲ್ವರ್‌ನಿಂದ ಹೊಡೆದು ಸಾಯಿಸುತ್ತಿದ್ದೆ ಎಂದು ಹೇಳಿದ್ದೂ ದಾಖಲಾಗಿದೆ. ಇವೆಲ್ಲ ಕೇವಲ ದ್ವೇಷ ಭಾಷಣವಾಗಿ ಉಳಿದಿಲ್ಲ. ಹಿಂಸಾಚಾರಕ್ಕೆ ಹಾಗೂ ಜನಾಂಗೀಯ ನಾಶಕ್ಕೆ ಬಹಿರಂಗ ಕರೆಯಾಗಿದೆ. ಆದರೆ ಉತ್ತರಾಖಂಡ ಪೊಲೀಸರು ಮಾತ್ರ ಇನ್ನೂ ದೃಢವಾದ ಪುರಾವೆಗಾಗಿ ಹುಡುಕಾಡುತ್ತಿದ್ದಾರೆ! ಐಪಿಸಿಯ 153ನೇ ಸೆಕ್ಷನ್ ಅನ್ವಯ ಎಫ್‌ಐಆರ್ ದಾಖಲಿಸಲಾಗಿದೆ. ಸಾಮರಸ್ಯ ಕೆಡಿಸಲು, ವೈರತ್ವಕ್ಕೆ ಅಥವಾ ವಿವಿಧ ಗುಂಪುಗಳ ಮಧ್ಯೆ ಧರ್ಮದ ಆಧಾರದಲ್ಲಿ ದ್ವೇಷ ಭಾವನೆ ಬಿತ್ತಲು ಪ್ರಚೋದನೆ ಕೊಡುವುದು ಅಪರಾಧ ಎನ್ನುತ್ತದೆ ಈ ಸೆಕ್ಷನ್. ಆದರೆ ಇಲ್ಲಿ ಅದಕ್ಕಿಂತಲೂ ದೊಡ್ಡ ಅಪರಾಧ ಎಸಗಲಾಗಿದೆ.

‘ಧರ್ಮ ಸಂಸದ್’ನ ಸಂಘಟಕರು ಅಥವಾ ಅದರಲ್ಲಿ ಪಾಲ್ಗೊಂಡವರು ಪ್ರಕರಣದಲ್ಲಿ ದಾಖಲಿಸಿದ ಎಫ್‌ಐಆರ್ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಂಡಿಲ್ಲ. ‘ಧರ್ಮ ಸಂಸದ್’ ನಡೆದ ಒಂದು ವಾರದ ನಂತರ, ಅಂದರೆ ಡಿಸೆಂಬರ್ 28ರಂದು ವಿವಿಧ ಅಖಾಡಗಳ ಸ್ವಾಮಿಗಳು ಸಭೆ ಸೇರಿ 21 ಸದಸ್ಯರ ಕೋರ್ ಸಮಿತಿಯನ್ನು ರಚಿಸಿಕೊಂಡಿದ್ದಾರೆ. ಅದರಲ್ಲಿ ನರಸಿಂಘಾನಂದ ಮತ್ತು ಸಂಸತ್‌ನಲ್ಲಿ ಭಾಗವಹಿಸಿದ್ದ ಐವರು ಇತರರೂ ಇದ್ದಾರೆ. ಇಸ್ಲಾಂ ವಿರುದ್ಧದ ಹೋರಾಟವನ್ನು ಮುಂದುವರಿಸುವುದಾಗಿ ಅವರು ಘೋಷಿಸಿದ್ದಾರೆ. ಕುರಾನ್ ವಿರುದ್ಧ ಹಾಗೂ ನಗರದ ಅನೇಕ ಮೌಲಾನಾಗಳು ಮತ್ತು ಇಮಾಮರ ವಿರುದ್ಧ ಹರಿದ್ವಾರ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವ ಮಟ್ಟಕ್ಕೂ ಅವರು ಹೋಗಿದ್ದಾರೆ.

‘ಹಿಂದೂರಾಷ್ಟ್ರ’ ಮತ್ತು ‘ಧರ್ಮಸಂಸದ್’

ಭಾರತವನ್ನು ‘ಹಿಂದೂರಾಷ್ಟ್ರ’ ಮಾಡುವತ್ತ ‘ಧರ್ಮ ಸಂಸದ್’ ಒಂದು ಹೆಜ್ಜೆಯಾಗಿದೆ ಎಂದು ಅವರು ಹೇಳಿದ್ದಾರೆ. ಇಸ್ಲಾಂ ವಿರುದ್ಧದ ಹೋರಾಟಕ್ಕೆ ಕರೆ ಕೊಟ್ಟಿದ್ದೇ ಮಾತ್ರವಲ್ಲದೆ ಅಖಾಡಾಗಳನ್ನು ಶಸ್ತ್ರಾಸ್ತ್ರ ತರಬೇತಿ ಹಾಗೂ ಹಿಂದು ಧರ್ಮ ರಕ್ಷಣೆಯ ಗುಂಪುಗಳ ಕೇಂದ್ರವಾಗಿ ಮಾಡಲಾಗುವುದು ಎಂದೂ ಅವರು ಘೋಷಿಸಿದ್ದಾರೆ.

ಪ್ರಸ್ತುತ ಕಾನೂನಿನ ಅನ್ವಯ ಯಾವ ರೀತಿಯಲ್ಲಿ ನೋಡಿದರೂ ಇದೊಂದು ದೇಶದ್ರೋಹದ ಪ್ರಕರಣವಾಗಿದೆ. ಹಿಂಸೆಗೆ ಕರೆ ನೀಡಿದರೆ ಅಥವಾ ಪ್ರಚೋದನೆ ಇದ್ದಾಗ ಮಾತ್ರವೇ ದೇಶದ್ರೋಹದ ಸೆಕ್ಷನ್ ಅನ್ವಯವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸಿದೆ.

ಹರಿದ್ವಾರ ಪ್ರಕರಣ ಕೆಲವು ವಿಚಾರಗಳನ್ನು ಸ್ಪಷ್ಟಪಡಿಸಿವೆ. ಮುಸ್ಲಿಂ–ವಿರೋಧಿ ಭಾಷಣ ಮಾಡಿದ ಹಾಗೂ ಅವರನ್ನು ಸರ್ವನಾಶ ಮಾಡಲು ಕರೆ ಕೊಟ್ಟ ಕೇಸರಿಧಾರಿ ಪುರುಷರು ಮತ್ತು ಮಹಿಳೆಯರು ಯಾವುದೋ ಕೆಲವು ಪುಡಿ ಶಕ್ತಿಗಳಲ್ಲ. ಅವರು ಆರ್‌ಎಸ್‌ಎಸ್ ಮತ್ತು ಬಿಜೆಪಿ ಸಹಿತ ಹಿಂದುತ್ವದ ಮುಖ್ಯವಾಹಿನಿಯನ್ನು ಪ್ರತಿನಿಧಿಸುವವರಾಗಿದ್ದಾರೆ. ಅವರಿಗೆ ಪ್ರಭುತ್ವದ ರಕ್ಷಣೆ ಇದೆಯೆನ್ನುವುದಕ್ಕೆ ಒಂದು ಚಿತ್ರವೇ ಸಾಕ್ಷಿಯಾಗಿದೆ. ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ‘ಧರ್ಮ ಸಂಸದ್’ನಲ್ಲಿ ಪ್ರಚೋದನಕಾರಿ ಭಾಷಣ ಮಾಡಿದವರಲ್ಲಿ ಒಬ್ಬರಾದ ಸ್ವಾಮಿ ಪ್ರಬೋಧಾನಂದರ ಪಾದಸ್ಪರ್ಶ ಮಾಡಿದ್ದು ಆ ಚಿತ್ರದಲ್ಲಿದೆ.

ಹರಿದ್ವಾರದ ಈ ಮೇಳವು ಆರ್‌ಎಸ್‌ಎಸ್ ಸಂಸ್ಥೆಗಳು ಹಾಗೂ ಬಿಜೆಪಿ ನಾಯಕರ ಭಾಷಣಗಳು ಹಾಗೂ ವಾಗಾಡಂಬರದ ಭಾಗವಾಗಿತ್ತು. ಯೋಗಿ ಆದಿತ್ಯನಾಥ ಪದೇ ಪದೇ ಮಾಡುವ ಮುಸ್ಲಿಂ ವಿರೋಧಿ ಭಾಷಣದಿಂದ ಹಿಡಿದು ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡವರನ್ನು ಮರಳಿ ಹಿಂದೂ ಧರ್ಮಕ್ಕೆ ಕರೆ ತರಲು ಮಠ ಮತ್ತು ಮಂದಿರಗಳನ್ನು ಬಳಸಿಕೊಳ್ಳಬೇಕೆಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಈಚೆಗೆ ನೀಡಿದ್ದ ಕರೆಯ ವರೆಗೆ ಅದು ಗಟ್ಟಿಯಾಗಿ ಹರಡಿಕೊಂಡಿದೆ. ಈ ‘ದ್ವೇಷ ಭಾಷಣಗಳು’ ಆವೇಶಭರಿತ ಮಾತುಗಾರಿಕೆಗಷ್ಟೇ ಸೀಮಿತವಾದವುಗಳಲ್ಲ. ಅವುಗಳು ದೈನಂದಿನ ಜೀವನದಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರ ವಿರುದ್ಧ ದಬ್ಬಾಳಿಕೆ ನಡೆಸುವಲ್ಲಿ ಪರ್ಯಾವಸಾನವಾಗುತ್ತಿವೆ, ಪ್ರತಿಫಲನಗೊಳ್ಳುತ್ತಿವೆ. ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ರಾಜಸ್ಥಾನದಂಥ ರಾಜ್ಯಗಳಲ್ಲಿ ಬೀದಿಬದಿ ವ್ಯಾಪಾರಿಗಳು, ಸಂಚಾರಿ ವ್ಯಾಪಾರಿಗಳು ಮತ್ತು ಆಟೋ ಚಾಲಕರಂಥ ಸಾಮಾನ್ಯ ಮುಸ್ಲಿಮರ ಮೇಲೆ ಸಾರ್ವಜನಿಕ ಸ್ಥಳಗಳಲ್ಲಿ ದಬ್ಬಾಳಿಕೆ ನಡೆಸಲಾಗುತ್ತಿದೆ. ಕರ್ನಾಟಕದಲ್ಲಿ ಕ್ರೈಸ್ತರು ಹಾಗೂ ಅವರ ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿ ಮಾಡುವುದು ಸಾಮಾನ್ಯವಾಗಿ ಬಿಟ್ಟಿದೆ.

ಹಿಂದುತ್ವ ಸೇನೆಯ ಭಾಗ

ಆರ್‌ಎಸ್‌ಎಸ್‌ನ ಬಜರಂಗ ದಳ, ವಿಶ್ವ ಹಿಂದು ಪರಿಷತ್ ಮತ್ತಿತರ ಸಂಘಟನೆಗಳು, ‘ಧರ್ಮ ಸಂಸದ್’ನ ಸಾಧುಗಳು ಮತ್ತು ವಿವಿಧ ರಾಜ್ಯಗಳಲ್ಲಿ ಬಿಜೆಪಿಯ ಚುನಾಯಿತ ಪ್ರತಿನಿಧಿಗಳು –ಇವರೆಲ್ಲರೂ ಹಿಂದೂ ರಾಷ್ಟ್ರ ಹೇರುವ ಉದ್ದೇಶದಿಂದ ಸಂವಿಧಾನ ಮತ್ತು ಪ್ರಭುತ್ವದ ಸಂಸ್ಥೆಗಳನ್ನು ಬುಡಮೇಲು ಮಾಡುವ ಹಿಂದುತ್ವ ಸೇನೆಯ ಭಾಗವಾಗಿದ್ದಾರೆ.

ಫ್ಯಾಸಿಸ್ಟ್ ತೆರನ ಹಿಂದುತ್ವ ಶಕ್ತಿಗಳು ಒಡ್ಡಿರುವ ಅಪಾಯದ ಗಹನತೆಯನ್ನು ಅರ್ಥ ಮಾಡಿಕೊಳ್ಳಲು ಕೆಲವು ಜಾತ್ಯತೀತ ಪ್ರತಿಪಕ್ಷಗಳು ವಿಫಲವಾಗಿರುವುದು ವಿಷಾದದ ಸಂಗತಿಯಾಗಿದೆ. ಕೆಲವರು ಘಟನೆ ಬಗ್ಗೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದ್ದಾರೆ, ಕೆಲವರು ಖಂಡಿಸಿದ್ದಾರೆ. ಇನ್ನು ಕೆಲವರು ಉತ್ತರ ಪ್ರದೇಶ ಮತ್ತು ಉತ್ತರಾಖಂಡದ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಷಯದಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಮಾತಿನಲ್ಲಿ ಖಂಡಿಸಿದರೆ ಮಾತ್ರವೇ ಸಾಲದು. ಸತತ ಸಂಘಟಿತ ಹೋರಾಟ ಅಗತ್ಯವಾಗಿದೆ. ಮತಾಂಧ ಶಕ್ತಿಗಳು ಬೇಕಾಬಿಟ್ಟಿಯಾಗಿ ವರ್ತಿಸಲು ಬಿಜೆಪಿ–ಆಳ್ವಿಕೆಯ ರಾಜ್ಯಗಳಲ್ಲಿ ಅವಕಾಶ ನೀಡಲಾಗಿದೆ. ಇಂಥ ಸನ್ನಿವೇಶದಲ್ಲಿ, ಈ ಶಕ್ತಿಗಳನ್ನು ಎದುರಿಸಿ ಹಿಮ್ಮೆಟ್ಟಿಸುವುದು ಜಾತ್ಯತೀತ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಕರ್ತವ್ಯವಾಗಿದೆ.

ಅನು: ವಿಶ್ವ



ವ್ಯಂಗ್ಯಚಿತ್ರ: ರಾಜೇಂದ್ರ ದೋಡಪ್‌ಕರ್



ಹಿಂದುತ್ವ-ಕಾರ್ಪೊರೇಟ್ ಯಜಮಾನಿಕೆಯನ್ನು ಹಿಮ್ಮೆಟ್ಟಿಸಲು ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದಾಗಬೇಕು-ಕಾಂ. ಪ್ರಕಾಶ್ ಕಾರಟ್

ದೇಶದಲ್ಲಿ ಹಿಂದುತ್ವ-ಕಾರ್ಪೊರೇಟ್ ಮೈತ್ರಿಯ ಯಜಮಾನಿಕೆಯಲ್ಲಿ ನವ-ಉದಾರವಾದಿ ನೀತಿಗಳನ್ನು ಅನುಸರಿಸುತ್ತಿರುವುದರ ಫಲವಾಗಿ ನಿರುದ್ಯೋಗ ಹಸಿವು ಬಡತನ ಹೆಚ್ಚುತ್ತಿದ್ದು ಇವುಗಳನ್ನು ಹಿಮ್ಮೆಟ್ಟಿಸಲು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಬೇಕು ಎಂದು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಕರೆ ಹೇಳಿದರು.

ಗಂಗಾವತಿಯಲ್ಲಿ ಜನವರಿ 2 ರಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)-ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸುತ್ತ ಪ್ರಸಕ್ತ ಸನ್ನಿವೇಶದ ವಿಶ್ಲೇಷಣೆ ಮಾಡುತ್ತ ಅವರು ಈ ಕರೆ ನೀಡಿದರು.

ಕೋವಿಡ್ ಸಾಂಕ್ರಾಮಿಕದಿಂದಾಗಿ ಕೋಟ್ಯಾಂತರ ಜನ ಬಾಧಿತರಾಗಿದ್ದು ಲಕ್ಷಾಂತರ ಜನ ಅಸುನೀಗಿದ್ದಾರೆ. ಅತ್ಯಂತ ಮುಂದುವರೆದ ದೇಶಗಳಲ್ಲೂ ದಿನಂಪ್ರತಿ ಸಾವಿರಾರು ಜನ ಬಲಿಯಾಗುತ್ತಿದ್ದಾರೆ. ಇದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸದೆ ಖಾಸಗೀಕರಣ ಮಾಡಿದ್ದರ ಪರಿಣಾಮ. ಇದಕ್ಕೆ ಪರ್ಯಾಯವಾಗಿ ಸಮಾಜವಾದಿ ಕ್ಯೂಬಾದಲ್ಲಿ ಸಾಂಕ್ರಾಮಿಕವನ್ನು ಅತ್ಯಂತ ಪರಿಣಾಮಕಾರಿಯಾಗಿ ಎದುರಿಸಿದ್ದಲ್ಲದೆ, ಆರು ರೀತಿಯ ಲಸಿಕೆಗಳನ್ನ ಬಳಸಲಾಗುತ್ತಿದೆ. ಇದು ಸ್ಪಷ್ಟವಾಗಿ ಬಂಡವಾಳಶಾಹಿ ಮತ್ತು ಸಮಾಜವಾದಿ ವ್ಯವಸ್ಥೆಯ ನಡುವಿನ ಪ್ರಧಾನ ವ್ಯತ್ಯಾಸವಾಗಿದೆ.

ಬಡದೇಶಗಳು ಹಾಗೂ ಮುಂದುವರೆದ ದೇಶಗಳ ನಡುವಿನ ವೈರುಧ್ಯ ತೀವ್ರಗೊಳ್ಳುತ್ತಿರುವುದು ಈ ಸಾಂಕ್ರಾಮಿಕದ ಸಂದರ್ಭದಲ್ಲಿ ಎದ್ದುಕಾಣುತ್ತಿದೆ. ಇಂದಿಗೂ ಆಫ್ರಿಕನ್ ದೇಶಗಳಲ್ಲಿ ಶೇಕಡ 70ರಷ್ಟು ಜನರಿಗೆ ಲಸಿಕೆ ಲಭ್ಯವಾಗಿಲ್ಲ ಎಂಬ ವರದಿಗಳಿವೆ. ಲಸಿಕೆಯ ಪೇಟೆಂಟ್ ಪಡೆದಿರುವ ಕಾರ್ಪೊರೇಟ್‌ಗಳು ತಮ್ಮ ಲಾಭಕೋರತನದಿಂದ ದುಬಾರಿ ದರಗಳನ್ನು ನಿಗದಿ ಮಾಡಿ ಬಹುಸಂಖ್ಯಾತ ಜನ ಲಸಿಕೆಯಿಂದ ವಂಚಿತರಾಗುವಂತೆ ಮಾಡಿವೆ.

ದೇಶದಲ್ಲಿ ಹಿಂದುತ್ವ ಪ್ರತಿಪಾದನೆಯ ಅಜೆಂಡಾಗಳೊಂದಿಗೆ ನವ-ಉದಾರವಾದಿ ಧೋರಣೆಗಳನ್ನು ಕೋವಿಡ್ ಸಾಂಕ್ರಾಮಿಕದಲ್ಲೂ ಮುಂದುವರೆಸಿರುವ ಕೇಂದ್ರದ ಬಿಜೆಪಿ ಸರ್ಕಾರದ ನಡೆಯಿಂದಾಗಿ ದೇಶದ ಆರ್ಥಿಕ ಸ್ಥಿತಿಗತಿ ಪಾತಾಳಕ್ಕೆ ಕುಸಿದಿದೆ. ಭಾರೀ ಪ್ರಮಾಣದ ನಿರುದ್ಯೋಗ ತಲೆದೂರಿದೆ. ಮಧ್ಯಮ ವರ್ಗದ ಜನ ಬಡತನ ರೇಖೆಯ ಕೆಳಗಡೆ ತಳ್ಳಲ್ಪಟ್ಟಿದ್ದಾರೆ.

ಇದರ ಬೆನ್ನಲ್ಲೇ ಚಿಲಿ ಸೇರಿದಂತೆ ಲ್ಯಾಟಿನ್ ಅಮೇರಿಕ ದೇಶಗಳಲ್ಲಿ ರೈತರು ಕಾರ್ಮಿಕರು ವಿದ್ಯಾರ್ಥಿ, ಯುವಜನರ ಪ್ರಬಲ ಪ್ರತಿಭಟನೆಗಳು ನವ-ಉದಾರವಾದಿ ನೀತಿಗಳ ವಿರುದ್ಧ ಎದ್ದುಬರುತ್ತಿವೆ. ಪರಿಣಾಮವಾಗಿ ಎಡಪಂಥೀಯ ಸರ್ಕಾರಗಳು ಅಸ್ತಿತ್ವಕ್ಕೆ ಬರುತ್ತಿರುವುದು ಬಂಡವಾಳಶಾಹಿ ವ್ಯವಸ್ಥೆಗೆ ಸಮಾಜವಾದಿ ವ್ಯವಸ್ಥೆಯೇ ಪರ್ಯಾಯ ಎಂಬುದರ ಸಂಕೇತವಾಗಿದೆ. ಬಲಪಂಥೀಯ ಸರ್ಕಾರಗಳ ವಿರುದ್ಧ ಜಗತ್ತಿನಾದ್ಯಂತ ಬೆಳೆದುಬರುತ್ತಿರುವ ಜನರ ಪ್ರತಿರೋಧ ಇತಿಹಾಸ ಚಕ್ರ ತಿರುಗುತ್ತಿರುವುದರ ಸ್ಪಷ್ಟ ಸಂದೇಶವಾಗಿದೆ.

ದೇಶ ಮತ್ತು ಏಷ್ಯಾದ ಅನೇಕ ದೇಶಗಳು ಅಮೇರಿಕಾದ ಸಾಮ್ರಾಜ್ಯಶಾಹಿ ಜೊತೆಗೆ ಮೈತ್ರಿಗೆ ಮುಂದಾಗಿವೆ. ಜಗತ್ತಿನ ಎರಡನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿರುವ ಚೀನಾಗೆ ಪೈಪೋಟಿ ನೀಡಲು ಹಾಗೂ ಅದರ ಆರ್ಥಿಕ ಶಕ್ತಿಯನ್ನು ದುರ್ಬಲಗೊಳಿಸಲು ಇಂತಹ ಮೈತ್ರಿ ಏರ್ಪಡುತ್ತಿದೆ.

ದೇಶದಲ್ಲಿ ಹಿಂದುತ್ವ-ಕಾರ್ಪೊರೇಟ್ ಮೈತ್ರಿಯ ಯಜಮಾನಿಕೆಯು ನವ-ಉದಾರವಾದಿ ನೀತಿಗಳನ್ನು ಹೇರುತ್ತಿದೆ. ಸಾರ್ವಜನಿಕ ರಂಗವನ್ನು ಸಂಪೂರ್ಣವಾಗಿ ನಾಶಪಡಿಸಿ, ಅವೆಲ್ಲವನ್ನು ಕಾರ್ಪೊರೇಟ್ ತೆಕ್ಕೆಗೆ ಸೇರಿಸುವ ಪ್ರಯತ್ನ ನಡೆದಿದೆ. ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ಮೂಲಕ ಇಂತವುಗಳನ್ನು ಮುಂದುವರೆಸಲಾಗುತ್ತಿದೆ. ಹಿಂದುತ್ವ ಮತ್ತು ಕಾರ್ಪೊರೇಟ್ ಶಕ್ತಿಗಳಿಗೆ ತಮ್ಮ ಅಜೆಂಡಾಗಳನ್ನು ಜಾರಿ ಮಾಡಲು ಪರಸ್ಪರ ಅನುಕೂಲ ಮಾಡಿಕೊಡಲು ಇಂತಹ ಅಪವಿತ್ರ ಮೈತ್ರಿ ಏರ್ಪಟ್ಟಿದೆ ಎಂಬುದು ಸ್ಪಷ್ಟ.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ನಿರಂತರ ಹಣಕಡಿತ ಹೆಚ್ಚುತ್ತಿರುವ ನಿರುದ್ಯೋಗ, ಹಸಿವು, ಬಡತನವು ಹಿಂದುತ್ವ-ಕಾರ್ಪೊರೇಟ್ ಮೈತ್ರಿಯ ಯಜಮಾನಿಕೆಯ ಫಲವಾಗಿದೆ. ಇದರ ಬೆನ್ನಲ್ಲೇ ದೆಹಲಿಯಲ್ಲಿ ರೈತರು ನಡೆಸಿದ ಅಭೂತಪೂರ್ವ ಹೋರಾಟ ನವ-ಉದಾರವಾದಿ ನೀತಿಗಳ ವಿರುದ್ಧ ಜನರ ಆಕ್ರೋಶದ ಸಂಕೇತವಾಗಿದೆ.

ದೇಶದಲ್ಲಿ ಆರಂಭಗೊಂಡ ರೈತ-ಕಾರ್ಮಿಕರ ಜಂಟಿ ಹೋರಾಟಗಳು ನವ-ಉದಾರವಾದಿ ನೀತಿಗಳನ್ನು ಸಮರೋಪಾದಿಯಲ್ಲಿ ಜಾರಿ ಮಾಡುವ ಮೋದಿ ಸರ್ಕಾರದ ಪ್ರಯತ್ನಗಳಿಗೆ ಅಡ್ಡಿಯಾಗಿ ನಿಂತಿವೆ.

ಪುಟ 10 ನೋಡಿ

ಭ್ರಷ್ಟಾಚಾರ ಮತ್ತು ಕಾರ್ಪೊರೇಟ್ ಲೂಟಿಯಿಂದ ಮುಕ್ತವಾದ ಜನತೆಯ ಸಮೃದ್ಧ ಸೌಹಾರ್ದ ನವ ಕರ್ನಾಟಕ ಕಟ್ಟೋಣ : ಯು. ಬಸವರಾಜ್

ರಾಜ್ಯ ಕಾರ್ಯದರ್ಶಿ ಕಾ. ಯು. ಬಸವರಾಜ್, ಜನವರಿ 2 ಮಧ್ಯಾಹ್ನ ನಡೆದ 23ನೆಯ ಸಿಪಿಐ(ಎಂ) ರಾಜ್ಯ ಸಮ್ಮೇಳನದ ಪ್ರತಿನಿಧಿ ಅಧಿವೇಶನದಲ್ಲಿ 296 ಪುಟಗಳ ದೀರ್ಘವಾದ ವರದಿಯನ್ನು ರಾಜ್ಯ ಸಮಿತಿಯ



ಪರವಾಗಿ ಮಂಡಿಸಿದರು. ಮೊದಲನೆಯದಾಗಿ ಅವರು ವರದಿಯ ರಚನೆಯನ್ನು ವಿವರಿಸಿ, ಯಾವ ಅಧ್ಯಾಯದ ಓದಿಗೆ ಆದ್ಯತೆ ಕೊಡಬೇಕೆಂದು ತಿಳಿಸಿದರು. ವರದಿಯನ್ನು ಎರಡು ಭಾಗಗಳಲ್ಲಿ ಕೊಡಲಾಗಿತ್ತು. ಒಂದು 'ರಾಜ್ಯದ ಸಾಮಾಜಿಕ-ಆರ್ಥಿಕ ಪರಿಸ್ಥಿತಿ' 62 ಪುಟಗಳ ವರದಿ. ಇನ್ನೊಂದು ಮುಖ್ಯ ಭಾಗವಾದ 'ರಾಜಕೀಯ ಸಂಘಟನಾ ವರದಿ'. ಎರಡನೆಯ ಭಾಗದ ವರದಿಯಲ್ಲಿ ರಾಜ್ಯದ ರಾಜಕೀಯ ಪರಿಸ್ಥಿತಿ, ಪಕ್ಷದ ಮಧ್ಯಪ್ರವೇಶ, ಪಕ್ಷದ ಸಂಘಟನೆ-1 (ವಿವಿಧ ಹಂತದ ಘಟಕಗಳ ಕೆಲಸ), ಪಕ್ಷದ ಸಂಘಟನೆ-2 (ವಿವಿಧ ಫ್ರಾಕ್ಷನ್ ಮತ್ತು ಉಪಸಮಿತಿಗಳ ಹಾಗೂ ವಿವಿಧ ರಂಗದ ಸಾಮೂಹಿಕ ಸಂಘಟನೆಗಳ ಕೆಲಸ) - ಹೀಗೆ ನಾಲ್ಕು ಅಧ್ಯಾಯಗಳಿವೆ ಎಂದು ಅವರು ವಿವರಿಸಿದರು.

ವರದಿಯನ್ನು ಮಂಡಿಸುತ್ತಾ, ಕಳೆದ 4 ವರ್ಷಗಳಲ್ಲಿ ಅತಿವೃಷ್ಟಿ, ಅನಾವೃಷ್ಟಿ, ಕೊವಿದ್ ಲಾಕ್ ಡೌನ್ ಇವುಗಳಿಂದಾಗಿ ಜನರಿಗೆ ಸಂಕಷ್ಟದ ಮೇಲೆ ಸಂಕಷ್ಟ ಎದುರಾಗಿದೆ. ಇವುಗಳಿಗೆ ಈ ಅವಧಿಯಲ್ಲಿದ್ದ ಸರಕಾರಗಳು, ಅದರಲ್ಲೂ ಪ್ರಧಾನವಾಗಿ ಬಿಜೆಪಿ ಸರಕಾರವು ಪರಿಹಾರ ಕೊಟ್ಟಿಲ್ಲ ಮಾತ್ರವಲ್ಲ, ಜನರ ಆತಂಕವನ್ನು ಕಾರ್ಪೊರೇಟ್ ಲೂಟಿಗೆ, ಭ್ರಷ್ಟಾಚಾರಕ್ಕೆ ಅವಕಾಶ ಹೆಚ್ಚಿಸಲು ಬಳಸಿಕೊಂಡಿದೆ ಎಂದು ಕಾ.ಬಸವರಾಜ್ ಆಕ್ರೋಶ ವ್ಯಕ್ತಪಡಿಸಿದರು. ಕೊವಿದ್ ಪರಿಹಾರದಲ್ಲೂ ಬಿಜೆಪಿ ಶಾಸಕರು ಲೂಟಿ ಮಾಡಲು ಹೇಸಿಲ್ಲ. ಅಗತ್ಯ ವಸ್ತುಗಳ ಬೆಲೆಏರಿಕೆಗಳ ಮೂಲಕ ಜನರ ಗಾಯದ ಮೇಲೆ ಬರೆ ಎಳೆಯಲಾಗಿದೆ. ಪರಿಹಾರದ ಬದಲು ರೇಶನ್, ಸಾಲಮನ್ನಾ, ಅಲ್ಪಸಂಖ್ಯಾತ ಮತ್ತು ದಲಿತರ ಸ್ಕಾಲರ್‌ಶಿಪ್, ಮನೆ ಕಟ್ಟಿಸಿ ಕೊಡುವ ಭರವಸೆ ಇತ್ಯಾದಿ - ಇರುವ ಸವಲತ್ತುಗಳಲ್ಲಿ ಕಡಿತ ಮಾಡಿದರು. ಕಾರ್ಪೊರೇಟ್ ಗಳು ಸಾವಿರಾರು ಎಕರೆ ಜಮೀನು

ಪುಟ 10 ನೋಡಿ



ಬಿಜೆಪಿ ದಕ್ಷಿಣ ಭಾರತದಲ್ಲಿ ವಿಸ್ತರಿಸದಂತೆ ತಡೆಯಬೇಕಾಗಿದೆ: ಕಾಂ.ರಾಘವುಲು



ಕರ್ನಾಟಕದ ಹೆಬ್ಬಾಗಿಲಿನಿಂದ ಒಳಗೆ ಬಂದು ದಕ್ಷಿಣ ಭಾರತಕ್ಕೆ ವಿಸ್ತರಿಸುವ ಬಿಜೆಪಿಯ ಹಂಬಲ, ಹುನ್ನಾರಗಳನ್ನು ತಡೆಯಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯ ಕಾ.ಬಿ.ವಿ.ರಾಘವುಲು ಕರೆ ನೀಡಿದರು. ಅವರು 23ನೆಯ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನದ ಸಮಾರೋಪದಲ್ಲಿ ಮಾತನಾಡುತ್ತಿದ್ದರು.

ಈ ಹೋರಾಟದಲ್ಲಿ ಕರ್ನಾಟಕ ರಾಜ್ಯ ಸಿಪಿಐ(ಎಂ) ಘಟಕಕ್ಕೆ ಪ್ರಧಾನ ಪಾತ್ರ ಮತ್ತು ಗುರುತರ ಜವಾಬ್ದಾರಿಯಿದೆ. ಅದಕ್ಕೆ ಆ ಸಾಮರ್ಥ್ಯವೂ ಇದೆ. ದಕ್ಷಿಣದ ಹೆಚ್ಚಿನ ರಾಜ್ಯಗಳಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಭಿನ್ನ ಪಕ್ಷಗಳು ಅಧಿಕಾರದಲ್ಲಿರುವ, ಎರಡು ಮತ್ತು ಹೆಚ್ಚು ಶತ್ರುಗಳಿರುವ ಸಂಕೀರ್ಣ ರಾಜಕೀಯ ಪರಿಸ್ಥಿತಿಯಿದೆ. ಇದಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷ ಆಡಳಿತ ನಡೆಸುತ್ತಿರುವುದರಿಂದ ರಾಜಕೀಯ ಪರಿಸ್ಥಿತಿಯು ಸ್ಪಷ್ಟ ಮತ್ತು ಸರಳವಿದೆ ಎಂದು ಅವರು ಮುಂದುವರೆದು ಹೇಳಿದರು.

ಕರ್ನಾಟಕದಲ್ಲಿರುವ ಮೂರು ಪಕ್ಷಗಳ ನಡುವೆ ಸಾಮ್ಯತೆಗಳೂ ಇವೆ. ಮೂರು ಪಕ್ಷಗಳಲ್ಲಿರುವ ಸಾಮ್ಯವೆಂದರೆ ಅವು ಬಂಡವಾಳಶಾಹಿ–ಭೂಮಾಲಕ ಪಕ್ಷಗಳು ಎಂಬುದು. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಗುತ್ತೇದಾರಿ ಬೂರ್ಜ್ವಾ ಮತ್ತು ಭೂಮಾಲಕ ಪಕ್ಷಗಳು ಮತ್ತು ನವ–ಉದಾರವಾದ ಪ್ರತಿಪಾದಿಸಿ ಬೆಂಬಲಿಸುವ ಪಕ್ಷಗಳು. ಜೆಡಿ(ಎಸ್) ಪ್ರಾಂತೀಯ ಬಂಡವಾಳಶಾಹಿ–ಭೂಮಾಲಕ ಪಕ್ಷ. ಇವು ಮೂರರ ನಡುವೆ ಸ್ಪಷ್ಟ ಭಿನ್ನತೆಗಳೂ ಇವೆ. ಪ್ರಾದೇಶಿಕ ಅಸ್ಮಿತೆಗೆ ಪ್ರಾಧಾನ್ಯತೆ ಕೊಡುತ್ತವೆ. ಪ್ರಾಂತೀಯ ಪಕ್ಷಗಳು ಯಾವಾಗಲೂ ಅವಕಾಶವಾದದಿಂದ ಕೂಡಿರುತ್ತವೆ. ಜೆಡಿ–ಎಸ್ ನಲ್ಲಿ ತಂದೆ ಬಿಜೆಪಿಗೆ ವಿರುದ್ಧ ಮಗ ಬಿಜೆಪಿ ಪರ. ನವ–ಉದಾರವಾದವನ್ನು ಕೆಲವೊಮ್ಮೆ ಬೆಂಬಲಿಸುತ್ತವೆ, ಕೆಲವೊಮ್ಮೆ ವಿರೋಧಿಸುತ್ತವೆ. ನವ–ಉದಾರವಾದ ಮತ್ತು ಕೋಮುವಾದ ಇವೆರಡರ ಬಗೆಗೂ ಜೆಡಿ–ಎಸ್ ಧೋರಣೆ ಗೊಂದಲಮಯವಾಗಿವೆ. ಬಿಜೆಪಿ ಕಟುವಾದ ಕೋಮುವಾದಿ ಪಕ್ಷ, ಕಾಂಗ್ರೆಸ್ ಪಾರಂಪರಿಕವಾಗಿ ಸೆಕ್ಯುಲರ್ ಪಕ್ಷ. ಆದರೆ ಆರ್‌ಎಸ್‌ಎಸ್ ನ್ನು ವಿಮರ್ಶೆ ಮಾಡಿದ್ದಕ್ಕೆ ಕಾಂಗ್ರೆಸ್ ಪಕ್ಷವು ತನ ನಾಯಕನೊಬ್ಬನನ್ನೇ ಅಮಾನತ್ತು ಮಾಡಿದೆ. ಎರಡೂ ಮತೀಯರನ್ನು ಓಲೈಸುವ ಮೃದು ಕೋಮುವಾದಿ ಧೋರಣೆ ಅನುಸರಿಸುತ್ತದೆ. ಈ ಮೂರು ಪಕ್ಷಗಳ ಸಾಮ್ಯತೆ ಮತ್ತು ಭಿನ್ನತೆಗಳನ್ನು ಸ್ಪಷ್ಟವಾಗಿ ಅರಿತುಕೊಂಡು ರಾಜಕೀಯ ಕಾರ್ಯಾಚರಣೆ ರೂಪಿಸಬೇಕು ಎಂದು ಕಾ. ರಾಘವುಲು ಸೂಚಿಸಿದರು.

ದಿಟ್ಟ ಸಮರಧೀರ ಹೋರಾಟಗಳು ಸಂಘಟನೆಯಾಗಿ ಕ್ರೋಢೀಕರಣವಾಗುತ್ತಿಲ್ಲ. ಹೋರಾಟಗಳು ತಾರ್ಕಿಕ ಅಂತ್ಯಕ್ಕೆ ಹೋಗುತ್ತಿಲ್ಲ. ಪಕ್ಷದ ಸದಸ್ಯತ್ವದಲ್ಲಿ ಯುವಜನರ ಪ್ರಮಾಣ ಶೇ.13ಕ್ಕೆ ಕುಸಿದಿದೆ. ದಲಿತರು ಮತ್ತು ಅಲ್ಪಸಂಖ್ಯಾತರ ನಡುವೆ ಸಾಕಷ್ಟು ಕೆಲಸ ಮಾಡಿದರೂ ಪಕ್ಷದ ಹತ್ತಿರ ಬರ್ತಾಯಿಲ್ಲ. ಇವು ವರದಿಯ ಮೇಲೆ ಚರ್ಚೆಯಲ್ಲಿ ಪ್ರತಿನಿಧಿಗಳು ಎತ್ತಿದ ಕೆಲವು ಪ್ರಮುಖ ಪ್ರಶ್ನೆಗಳು ಎಂದು ಕಾ.ರಾಘವುಲು ನಿರೂಪಿಸಿದರು.

ಬಿಜೆಪಿಯ ಕಾರ್ಪೊರೆಟ್–ಪರ ಕೋಮುವಾದಿ ದಾಳಿಗಳನ್ನು ಸೋಲಿಸಲು, ಜನರ ಪ್ರೀತಿ ಸಂಪಾದಿಸಲು ನವ–ಉದಾರವಾದಿ ನೀತಿಗಳನ್ನು ಸೋಲಿಸುವುದು ಒಂದೇ ಮಾರ್ಗ. ಮೇಲ್ಪಟ್ಟದ ನವ–ಉದಾರವಾದದ ನೀತಿಗಳ (ಖಾಸಗೀಕರಣ, ಡಿಜಿಟಲೀಕರಣ, ನೋಟು ನಷೇಧ, ಜಿ.ಎಸ್.ಟಿ ಇತ್ಯಾದಿ) ವಿಶ್ಲೇಷಣೆ ಮತ್ತು ದುಡಿಯುವ ಜನರ ಮೇಲೆ ಪರಿಣಾಮಗಳ ಅಧ್ಯಯನಗಳನ್ನು ಕೇಂದ್ರ ಸಮಿತಿ ಮಾಡಿದೆ. ಕೆಲಸದ ಸ್ಥಳಗಳಲ್ಲಿ ಮೇಲ್ಪಟ್ಟದ ಇಂತಹ ನವ–ಉದಾರವಾದಿ ನೀತಿಗಳ ವಿರುದ್ಧ ಪ್ರತಿರೋಧ ಒಡ್ಡಲಾಗುತ್ತಿದೆ ಎಂದು ಕಾ.ರಾಘವುಲು ವಿವರಿಸಿದರು.

ನವ–ಉದಾರವಾದಿ ನೀತಿಗಳ ಭಾಗವಾಗಿ, ಸೀಮಿತವಾಗಿಯಾದರೂ ಜಾರಿಯಾಗಿದ್ದ ಕಲ್ಯಾಣ ರಾಜ್ಯ ವ್ಯವಸ್ಥೆಯ ವಿದ್ಯುತ್, ನೀರು, ಶಿಕ್ಷಣ, ಆರೋಗ್ಯ ಮುಂತಾದ ಉಚಿತ ಸೇವೆಗಳಿಗೆ ಬೆಲೆ ಪಾವತಿ ಮಾಡುವ ಸೇವೆಗಳಾಗಿವೆ. ಈ ಬದಲಾವಣೆಗಳ ಹಿನ್ನೆಲೆಯಲ್ಲಿ ದುಡಿಯುವ ಜನರ ಜೀವನದ ಮೇಲೆ – ರಾಜ್ಯ, ಪ್ರದೇಶ, ಜಿಲ್ಲೆ, ನಗರ/ತಾಲೂಕು, ಗ್ರಾಮ/ವಾರ್ಡು ಮಟ್ಟದವರೆಗಿನ ಇತ್ಯಾದಿ – ಸ್ಥಳೀಯ ಮಟ್ಟದಲ್ಲಿ ಅದರ ನಿರ್ದಿಷ್ಟ ಪರಿಣಾಮಗಳು ಮತ್ತು ಅದರ ವಿರುದ್ಧ ನಿರ್ದಿಷ್ಟ ಹೋರಾಟಗಳನ್ನು ರೂಪಿಸುವ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾಗಿದೆ. ವಾಸಪ್ರದೇಶಗಳಲ್ಲಿ ಬಸ್ತಿಗಳಲ್ಲಿ ಜನರ ದೈನಿಕ ಜೀವನವನ್ನು ಬಾಧಿಸುವ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ ಎಂದು ಕಾ.ರಾಘವುಲು ವಿಷದಪಡಿಸಿದರು.

ಈಗ ದುಡಿಯುವ ಜನರ ಜತೆ ಕೆಲಸದ ಸ್ಥಳದಲ್ಲಿ ಮಾತ್ರ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಹೋರಾಡುತ್ತಿದ್ದು, ಸ್ಥಳೀಯವಾಗಿ ಜನರ ಸಾಮಾಜಿಕ, ಸಾಂಸ್ಕೃತಿಕ ಜೀವನದಲ್ಲಿ ಮಧ್ಯಪ್ರವೇಶ ಮಾಡುವುದನ್ನು ಬೂರ್ಜ್ವಾ ಪಕ್ಷಗಳಿಗೆ ಬಿಡುತ್ತಿದ್ದೇವೆ. ಅವರು ಅಲ್ಲೊಂದು ಇಲ್ಲೊಂದು 'ಉಚಿತ ಸೇವೆ', 'ದಾನ'ಗಳ ಮೂಲಕ ಅವರ ಮೇಲೆ ರಾಜಕೀಯ ಹಿಡಿತ ಸಾಧಿಸುತ್ತಿದ್ದಾರೆ. ಕೆಲಸದ ಸ್ಥಳದಲ್ಲಿ ದುಡಿಯುವ ಜನರ ಜೀವನೋಪಾಯಗಳ ರಕ್ಷಣೆಗೆ ಹೋರಾಡುತ್ತಲೇ, ಪಕ್ಷ ಸ್ಥಳೀಯ ಮಟ್ಟದಲ್ಲಿ ಜನರ ಸಾಮಾಜಿಕ, ಸಾಂಸ್ಕೃತಿಕ ಜೀವನದಲ್ಲಿ ಮಧ್ಯಪ್ರವೇಶ ಮಾಡಿದಾಗ ಮಾತ್ರ ಜನ ಸ್ಪಂದಿಸುತ್ತಾರೆ ಎಂದು ಕಾ.ರಾಘವುಲು ತಿಳಿಸಿದರು.

ಹಿಂದುತ್ವ ಕೋಮುವಾದವನ್ನು ಸೋಲಿಸಲು ರಾಜಕೀಯ ಸೈದ್ಧಾಂತಿಕ ದಾಳಿ ಮಾತ್ರ ಸಾಕಾಗುವುದಿಲ್ಲ. ಸಾಂಸ್ಕೃತಿಕ ಚಟುವಟಿಕೆಗಳ ಅಗತ್ಯವಿದೆ. ಆಯಾ ಜನವಿಭಾಗಗಳ ಸಾಂಸ್ಕೃತಿಕ ವಿನ್ಯಾಸ, ಪರಂಪರೆ, ಅಭಿವ್ಯಕ್ತಿಗಳನ್ನು ಬಳಸಬೇಕು. ದಿನನಿತ್ಯದ ಅವರ ಜೀವನದಲ್ಲಿ ಹಾಸುಹೊಕ್ಕಾಗಿ ಮಧ್ಯಪ್ರವೇಶಿಸಬೇಕು. ಪ್ರತಿಯೊಂದು ಸಾಮೂಹಿಕ ರಂಗ ಸಾಂಸ್ಕೃತಿಕ ತಂಡವೊಂದನ್ನು ಹೊಂದಿ ಮಧ್ಯಪ್ರವೇಶ ಮಾಡಬೇಕು. ಅದೇ ರೀತಿಯಲ್ಲಿ ಸಾಮಾಜಿಕ ದಮನದ ವಿಷಯಗಳನ್ನೂ ಎತ್ತಿಕೊಳ್ಳಬೇಕು. ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆ ವಿಷಯಗಳನ್ನು ಎತ್ತಿ, ಮುಸ್ಲಿಂ ವಿರೋಧದ ಮರೆಯಲ್ಲಿ ಹಿಂದೂ ಸಮಾಜದ ವೈರುಧ್ಯಗಳನ್ನು ಮುಚ್ಚುವ ಹುಸಿ ಐಕ್ಯತೆ ಸ್ಥಾಪಿಸುವ ಸಂಘ ಪರಿವಾರದ ಹುನ್ನಾರವನ್ನು ಒಡೆಯಬೇಕು ಎಂದು ಕಾ.ರಾಘವುಲು ವಿವರಿಸಿದರು.

ಅದೇ ರೀತಿಯಲ್ಲಿ ಯುವಜನರನ್ನು ನಿರುದ್ಯೋಗದ ಪ್ರಶ್ನೆಯ ಸುತ್ತ ಮಾತ್ರ ಮುಟ್ಟಲು ಸಾಧ್ಯವಿಲ್ಲ. ನವ–ಉದಾರೀಕರಣದ ನಂತರ ಎಲ್ಲ ಕೆಳಮಟ್ಟದ ಉದ್ಯೋಗಗಳಲ್ಲಿ, ಗ್ರಾಮೀಣ ಕೂಲಿಕಾರರಲ್ಲಿ ಯುವಜನರ ಸಂಖ್ಯೆ ಜಾಸ್ತಿ ಆಗಿದೆ. ನಮ್ಮ ಸಾಮೂಹಿಕ ಸಂಘಟನೆಗಳು ಸಂಘಟಿಸುವ ತಲುಪುವ ಎಲ್ಲ ರಂಗಗಳಲ್ಲೂ ಯುವಜನರು ಇದ್ದಾರೆ. ಹಾಗಾಗಿ ಯುವಜನರನ್ನು ತಲುಪಿ ಸಂಘಟಿಸುವುದು ಸಹ ಎಲ್ಲ ಸಾಮೂಹಿಕ ರಂಗಗಳ ಜವಾಬ್ದಾರಿಯಾಗಿದೆ ಎಂದು ಕಾಂ.ರಾಘವುಲು ಒತ್ತಿ ಹೇಳಿದರು.



23 ನೇ ರಾಜ್ಯ ಸಮ್ಮೇಳನದಲ್ಲಿ 35 ಸದಸ್ಯರ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು. **ರಾಜ್ಯ ಕಾರ್ಯದರ್ಶಿಯಾಗಿ ಕಾಂ. ಯು.ಬಸವರಾಜ ಆಯ್ಕೆಯಾದರು.** ಕಾರ್ಯದರ್ಶಿ ಸೇರಿದಂತೆ 12 ಸದಸ್ಯರಿರುವ ನೂತನ ಕಾರ್ಯದರ್ಶಿ ಮಂಡಳಿಯನ್ನು ಸಮ್ಮೇಳನ ಆಯ್ಕೆ ಮಾಡಿತು.

ಇತರ ಕಾರ್ಯದರ್ಶಿ ಮಂಡಳಿ ಸದಸ್ಯರು:

2. ಎಸ್. ವರಲಕ್ಷ್ಮಿ 3. ಕೆ.ಎನ್.ಉಮೇಶ್ 4. ಮೀನಾಕ್ಷಿ ಸುಂದರಂ 5. ಕೆ. ಪ್ರಕಾಶ್
6. ಸೈಯದ್ ಮುಜೀಬ್ 7. ಗೋಪಾಲಕೃಷ್ಣ ಹರಳಹಳ್ಳಿ 8. ಜಿ.ಸಿ.ಬಯ್ಯಾರೆಡ್ಡಿ
9. ಕೆ.ಯಾದವಶೆಟ್ಟಿ 10. ಎಂ.ಪಿ.ಮುನಿವೆಂಕಟಪ್ಪ 11. ಜಿ.ನಾಗರಾಜ್ 12. ಕೆ.ನೀಲಾ

ಇತರ ರಾಜ್ಯ ಸಮಿತಿ ಸದಸ್ಯರು

13. ವಸಂತಾಚಾರಿ 14. ಮುನೀರ್ ಕಾಟಿಪಳ್ಳ 15. ಲಕ್ಷ್ಮೀ ನಾರಾಯಣ
16. ನಿರುಪಾದಿ ಬೆಣಕಲ್ 17. ಯಮುನಾ ಗಾಂವ್ಕರ್ 18. ಬಾಲಕೃಷ್ಣ ಶೆಟ್ಟಿ ಉಡುಪಿ
19. ಗಾಂಧಿನಗರ ನಾರಾಯಣಸ್ವಾಮಿ 20. ಕೆ.ಜಿ.ವಿರೇಶ್
21. ಬಿ.ಎನ್.ಮಂಜುನಾಥ್ 22. ಎನ್.ಪ್ರತಾಪ್ ಸಿಂಹ 23. ವಸಂತರಾಜ್ ಎನ್.ಕೆ.
24. ಎಚ್.ಎಸ್.ಸುನಂದಾ 25. ಗೌರಮ್ಮ 26. ಕೆ.ಎಸ್. ವಿಮಲಾ
27. ಕೆ.ಮಹಾಂತೇಶ್ 28. ಆರ್.ಎಸ್. ಬಸವರಾಜ 29. ಬಿ. ಮಾಳಮ್ಮ
30. ದೇವಿ 31. ಚಂದ್ರಪ್ಪ ಹೊಸ್ಕೇರಾ 32. ಎಸ್.ವೈ ಗುರುಶಾಂತ್
33.. ಎಂ. ಪುಟ್ಟಮಾದು 34. ಗುರುರಾಜ ದೇಸಾಯಿ. ಒಂದು ಸ್ಥಾನ ಖಾಲಿ

ಪ್ರತಿನಿಧಿ ಅಧಿವೇಶನದ ಉದ್ಘಾಟನೆ

ಜನತೆಯ ಜೊತೆ ನಿರಂತರ ಸಂಪರ್ಕವನ್ನು ಮತ್ತೆ ಸಾಧಿಸಬೇಕಿದೆ: ಕಾರಟ್

ಕೋವಿಡ್‌ನಿಂದಾಗಿ ಕಳೆದ 2 ವರ್ಷಗಳಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಕೆಲಸದಲ್ಲಿ ವ್ಯತ್ಯಯಗಳು ಆಗಿವೆ. ಲಾಕ್‌ಡೌನ್ ಅವಧಿ ನಮ್ಮ ಒಟ್ಟು ಕೆಲಸಗಳಿಗೆ ತೊಡಕುಂಟು ಮಾಡಿದೆ. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಇಳಿಕೆಯಾಗಿದೆ. ಪಕ್ಷದ ಕೇಂದ್ರ ಸಮಿತಿಯಿಂದ ಹಿಡಿದು ಕೆಳಹಂತದವರೆಗೂ ಪ್ರತಿಕೂಲ ಪರಿಣಾಮ ಬೀರಿದೆ. ಇದರಿಂದಾಗಿ ಪಕ್ಷ ಮತ್ತು ಜನತೆಯ ನಡುವಿನ ಕೊಂಡಿ ಹಾಗೂ ಜನರ ಜತೆಗಿನ ನಿರಂತರ ಸಂಪರ್ಕ–ಸಂಬಂಧ ಸಡಿಲಗೊಂಡಿದೆ. ಕರ್ನಾಟಕದಲ್ಲಿ ಈ ಕೊಂಡಿಯನ್ನು ಮತ್ತೆ ಜೋಡಿಸಿ ಗಟ್ಟಿಗೊಳಿಸುವುದು ಹೇಗೆಂಬ ಕುರಿತು ಸಮ್ಮೇಳನದಲ್ಲಿ ಚರ್ಚೆ ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬುರೊ ಸದಸ್ಯ ಕಾ.ಪ್ರಕಾಶ್ ಕಾರಟ್ ಎಂದು ಕರೆ ಕೊಟ್ಟರು. ಅವರು 23ನೆಯ ರಾಜ್ಯ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟನೆ ಮಾಡುತ್ತಿದ್ದರು.

ಈ ಹಿನ್ನೆಲೆಯಲ್ಲಿ ಕಾರ್ಷಿಕ ಮತ್ತು ಕೈಗಾರಿಕಾ ರಂಗಗಳಲ್ಲಿ 90ರ ದಶಕದಿಂದ ಜಾರಿಯಾಗುತ್ತಿರುವ ನವ–ಉದಾರವಾದಿ ನೀತಿಗಳ ಪರಿಣಾಮವಾಗಿ ಆಗುತ್ತಿರುವ ಬದಲಾವಣೆಗಳು, ಇವುಗಳಿಂದಾಗಿ ರೈತರು, ಕಾರ್ಮಿಕರು, ಕೂಲಿಕಾರರು ಮತ್ತು ಸಾಮಾನ್ಯ ಜನತೆಯ ಮೇಲೆ ಆಗಿರುವ ಪರಿಣಾಮಗಳು, ವರ್ಗ ಬಲಾಬಲಗಳಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಗುರುತಿಸಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಪಕ್ಷ ನೇಮಿಸಿದ ಅಧ್ಯಯನ ತಂಡ ಸಮೀಕ್ಷೆಯ ನಂತರ ತಯಾರಿಸಿರುವ ಎರಡು ಅಧ್ಯಯನ ವರದಿಗಳು ಇವುಗಳನ್ನು ವಿವರವಾಗಿ ತಿಳಿಸಿವೆ. ಈ ವರದಿಗಳ ಕನ್ನಡ ಅನುವಾದ ಇಂದು ಬಿಡುಗಡೆಯಾಗಿರುವುದು ಸಂತೋಷದ ವಿಷಯ. ಅದನ್ನು ಓದಿ ಈ ಬದಲಾವಣೆಗಳನ್ನು ತಿಳಿದುಕೊಂಡು ನಮ್ಮ ಹೋರಾಟಗಳಲ್ಲಿ ಹೊಸ ಘೋಷಣೆಗಳನ್ನು ಕೊಡುವುದು, ಹೊಸ ತಂತ್ರಗಳನ್ನು ಹೊಸೆಯುವುದು ಸಾಧ್ಯವಾಗಬೇಕು ಎಂದು ಮುಂದುವರೆದು ಕಾ.ಕಾರಟ್ ಹೇಳಿದರು



ಉದಾಹರಣೆಗೆ, ಕೃಷಿ ರಂಗದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ, ಹಿಂದೆ ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ಭೂಹೀನರು ಕೃಷಿ ಕೂಲಿಕಾರರಾಗಿದ್ದ ಪರಿಸ್ಥಿತಿ ಬದಲಾಗಿದೆ. ಕೃಷಿಯಲ್ಲಿ ಮಾತ್ರ ತೊಡಗಿರುವ ಕೃಷಿ ಕೂಲಿಕಾರರ ಸಂಖ್ಯೆ ಕಡಿಮೆಯಾಗಿದ್ದು, ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕೂಲಿ ಮಾಡುವ ಗ್ರಾಮೀಣ ಕೂಲಿಕಾರರರ ಹೆಚ್ಚಳ ಆಗಿದೆ. ಇವನ್ನು ಈ ವರದಿ ಗುರುತಿಸಿದೆ. ಇದನ್ನು ನಮ್ಮ ಕೃಷಿ ಕೂಲಿಕಾರರ ಸಂಘಟನೆ ಗುರುತಿಸಿ ಎಲ್ಲ ಗಾಮೀಣ ಕೂಲಿಕಾರರನ್ನು ಸಂಘಟಿಸಲು ಪ್ರಯತ್ನಿಸಬೇಕು ಎಂದು ಕಾ.ಕಾರಟ್ ವಿವರಿಸಿದರು.

ಕೋವಿಡ್ ಸಮಯದಲ್ಲಿ ನೀವು ಸಕ್ರಿಯವಾಗಿ ಕೆಲಸ ಮಾಡಿದ್ದೀರಿ. ಕರ್ನಾಟಕದಲ್ಲಿ ಪಕ್ಷದ ರಾಜಕೀಯ ಸಂಘಟನಾ ವರದಿಯಲ್ಲಿ ಹಲವು ಸಂಘಟನಾ ಸಮಸ್ಯೆಗಳನ್ನು ಗುರುತಿಸಲಾಗಿತ್ತು. ಇದರಿಂದಾಗಿ ಪಕ್ಷದ ಸಾಮರ್ಥ್ಯವನ್ನು ಅದರ ಬೆಳವಣಿಗೆಗೆ ಬಳಸಿಕೊಳ್ಳಲು ಆಗಲಿಲ್ಲ. ಸಂಘಟನೆ ಮತ್ತು ಪಕ್ಷದ ಕಾರ್ಯಾಚರಣೆಯಲ್ಲಿ ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ಎಲ್ಲ ಹಂತಗಳಲ್ಲೂ ಜಾರಿ ಮಾಡಬೇಕೆಂದು ಕೋಲ್ಕತ್ತಾ ಪ್ಲೀನಂ ಒತ್ತಿ ಹೇಳಿದೆ. ವ್ಯಕ್ತಿಗತ ಕಾರ್ಯಾಚರಣೆಯಿಂದಾಗಿ ವ್ಯಕ್ತಿವಾದ ಬೆಳೆದು ಸಾಮೂಹಿಕ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಪ್ರಜಾಸತ್ತಾತ್ಮಕ ಕೇಂದ್ರವಾದ ತತ್ವಗಳನ್ನು ಪಾಲಿಸಬೇಕಿದೆ ಮತ್ತು ಸಾಮೂಹಿಕ ಕಾರ್ಯಾಚರಣೆಯನ್ನು ಮುಂದುವರಿಸಬೇಕಿದೆ ಎಂದು ಕಾ.ಕಾರಟ್ ಒತ್ತಿ ಹೇಳಿದರು.

ನಾವು ಪಕ್ಷವಾಗಿ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದೇವೆ. ಪಶ್ಚಿಮ ಬಂಗಾಳ, ತ್ರಿಪುರಾಗಳಲ್ಲಿ ನಮ್ಮ ಪಕ್ಷದ ಮೇಲೆ ತೀವ್ರವಾದ ದಾಳಿಗಳು ನಡೆಯುತ್ತಿವೆ. ನಮ್ಮ ಪ್ರಬಲ ನೆಲೆಗಳನ್ನು ನಾಶಪಡಿಸಲು ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ. ಹೀಗಾಗಿ ಕೋಮುವಾದಿ ಶಕ್ತಿಗಳ ಈ ದಾಳಿಗಳನ್ನು ಎದುರಿಸುವುದು ಹೇಗೆ? ಕಳೆದುಕೊಂಡ ನೆಲೆಗಳನ್ನು ಪುನರ್ ಸ್ಥಾಪಿಸುವುದು ಹೇಗೆ ಎಂಬ ನಾವು ಚರ್ಚಿಸಬೇಕು. ದಕ್ಷಿಣದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಬಿಜೆಪಿ, ಹಿಂದುತ್ವವಾದಿ ಸಂಘಟನೆಗಳು ಪ್ರಬಲವಾಗಿ ಬೆಳೆದಿವೆ. ಇಂತಹ ಪ್ರತಿಗಾಮಿ ಶಕ್ತಿಗಳನ್ನು ಹಿಮ್ಮೆಟ್ಟಿಸುವುದು ಹೇಗೆ? ಎಂಬ ಬಗ್ಗೆ ಹಾಗೂ ಪಕ್ಷದ ಸ್ವತಂತ್ರ ಶಕ್ತಿಯನ್ನು ಬಲಗೊಳಿಸುವ ಕುರಿತು ಈ ಸಮ್ಮೇಳನದಲ್ಲಿ ಚರ್ಚೆ ನಡೆಸಬೇಕು ಎಂದು ಕಾ. ಕಾರಟ್ ಕರೆ ಕೊಟ್ಟರು.

ಹಿಂದುತ್ವ–ಕಾರ್ಪೊರೇಟ್ ಯಜಮಾನಿಕೆಯನ್ನು ಹಿಮ್ಮೆಟ್ಟಿಸಲು...

ಪುಟ 8 ರಿಂದ

ಹೀಗಾಗಿ ಜನತೆಯ ಪ್ರಬಲ ಹೋರಾಟಗಳೇ ನವ–ಉದಾರವಾದಿ ನೀತಿಗಳ ವಿರುದ್ಧದ ಅಸ್ತ್ರಗಳಾಗಿವೆ.

ಹಿಂದುತ್ವ ಕಾರ್ಪೊರೇಟ್ ಯಜಮಾನಿಕೆಗೆ ಪರ್ಯಾಯವನ್ನು ರೂಪಿಸಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ. ದೇಶದ ಸಮುಸಾಧಕ ಪಕ್ಷಗಳು ಇದಕ್ಕೆ ಪರ್ಯಾಯವಲ್ಲ. ಅವರಲ್ಲಿರುವ ರಾಜಿ ಮನೋಭಾವ ಇದಕ್ಕೆ ಅಡ್ಡಿಯಾಗಿದೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಮಾತ್ರವೇ ಪರ್ಯಾಯವನ್ನು ರೂಪಿಸಲು ಸಾಧ್ಯ. ಇತಿಹಾಸದುದ್ದಕ್ಕೂ ಜನವಿರೋಧಿ ನೀತಿಗಳಿಗೆ ಪರ್ಯಾಯ ಶಕ್ತಿಯಾಗಿ ಹೋರಾಟದಲ್ಲಿರುವ ಸಿಪಿಐ(ಎಂ) ಪಕ್ಷವನ್ನು ಬಲಪಡಿಸದೆ, ಪರ್ಯಾಯ ರೂಪಿಸಲು ಸಾಧ್ಯವಿಲ್ಲ. ಈ ಬಗ್ಗೆ ಸಿಪಿಐ(ಎಂ)ನ ಮಹಾಧಿವೇಶನದಲ್ಲಿ ಗಂಭೀರವಾಗಿ ಚರ್ಚೆ ನಡೆಸಲಿದ್ದೇವೆ ಎಂದು ಪ್ರಕಾಶ್ ಕಾರಟ್ ಹೇಳಿದರು.

ಮೋದಿ ಸರ್ಕಾರದ ನವಭಾರತ ನಿರ್ಮಾಣದ ಮಾತುಗಳು ಕೃತಿಯಲ್ಲಿ ಕಾಣುತ್ತಿಲ್ಲ. ಹಿಂದುತ್ವವಾದಿ ಅಜೆಂಡಾಗಳನ್ನು ಜಾರಿಮಾಡುವ ಅದರ ಪ್ರಯತ್ನದಿಂದಾಗಿ ನವಭಾರತದ ಬದಲು ದೇಶ ಹಿಮ್ಮುಖ ಚಲನೆಯನ್ನು ಕಾಣುತ್ತಿದೆ. ಕಾಶ್ಮೀರದಲ್ಲಿ ಕಲಂ 370 ತೆಗೆದದ್ದು ಇದಕ್ಕೊಂದು ಉದಾಹರಣೆ. ರಾಮಮಂದಿರದ ಅಡಿಗಲ್ಲು ಹಾಕುವ ಜೊತೆಯಲ್ಲೇ ಪೌರತ್ವ ತಿದ್ದುಪಡಿ ಕಾಯ್ದೆಗೆ ಮುಂದಾಗಿರುವುದು ಧರ್ಮದ ಆಧಾರದಲ್ಲಿ ಪೌರತ್ವ ನೀಡುವ ನೀತಿಯು ಸಂವಿಧಾನ ವಿರೋಧಿ ನಡೆಯಾಗಿದೆ. ಸಾಂವಿಧಾನಿಕ ಸಂಸ್ಥೆಗಳಲ್ಲಿ ಹಿಂದುತ್ವ ಅಜೆಂಡಾವನ್ನು ಹೇರುತ್ತಾ ಆ ಸಂಸ್ಥೆಗಳನ್ನು ದುರ್ಬಲಗೊಳಿಸುವ ಪ್ರಯತ್ನ ನಡೆದಿದೆ. ಹೊಸ ಸಂಸತ್ ಭವನ ನಿರ್ಮಾಣ ಮಾಡುತ್ತಿರುವಾಗಲೇ ಈಗಿರುವ ಸಂಸತ್ ಭವನವನ್ನು ಮ್ಯೂಸಿಯಂ ಆಗಿ ಪರಿವರ್ತಿಸಲು ಮುಂದಾಗಿದೆ. ಇದರ ಅರ್ಥ ದೇಶದಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ಮ್ಯೂಸಿಯಂಗಷ್ಟೇ ಸೀಮಿತಗೊಳಿಸಲು ಹೊಂಚು ಹಾಕಲಾಗಿದೆ. ಈಗಾಗಲೇ ಸಂಸತ್ ಅನ್ನು ಬದಿಗೊತ್ತಿ ಏಕಪಕ್ಷೀಯವಾಗಿ ನೀತಿಗಳನ್ನು ತರುತ್ತಿರುವುದು ಇದರ ಸ್ಪಷ್ಟ ಸಂದೇಶವಾಗಿದೆ.

ಕರ್ನಾಟಕ ಸರ್ಕಾರ ಮತಾಂತರ ನಿಷೇಧ ಕಾಯ್ದೆ ಜಾರಿ ಮಾಡುವ ಮೂಲಕ ಕ್ರಿಶ್ಚಿಯನ್ನರ ಮೇಲೆ ಧಾಳಿ ಮಾಡಲು ಮುಂದಾಗಿದೆ. ಮುಸ್ಲಿಮರು ಕ್ರಿಶ್ಚಿಯನ್ನರು ಮತ್ತು ಕಮ್ಯೂನಿಸ್ಟರು ದೇಶದ ಆಂತರಿಕ ಶತ್ರುಗಳು ಎಂಬ ಗೋಲ್ವಾಲ್ಕರ್ ಧೋರಣೆಯನ್ನು ಜಾರಿ ಮಾಡಲು ಪ್ರಯತ್ನ ನಡೆದಿದೆ. ದೇವಸ್ಥಾನಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸುವ ಕರ್ನಾಟಕ ಸರ್ಕಾರದ ನೀತಿಯು ದೇವಸ್ಥಾನಗಳ ಭಾಗವಾಗಿರುವ ಅಪಾರ ಪ್ರಮಾಣದ ಭೂಮಿ–ಆಸ್ತಿಯನ್ನು ಲಪಟಾಯಿಸಲು ಅನುಕೂಲವಾಗುವಂತೆ ನೀತಿಗಳಲ್ಲಿ ಮಾರ್ಪಾಡು ಮಾಡಲಾಗುತ್ತಿದೆ. ಜೊತೆಗೆ ಇದು ದೇವಸ್ಥಾನಗಳನ್ನು ಆರ್‌ಎಸ್‌ಎಸ್ ಹಿಡಿತಕ್ಕೆ ವಹಿಸುವ ಪ್ರಯತ್ನದ ಭಾಗವಾಗಿದೆ.

ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಿಂದುತ್ವ–ಕಾರ್ಪೊರೇಟ್ ಮೈತ್ರಿಯ ಯಜಮಾನಿಕೆಯ ವಿರುದ್ಧ ಹೋರಾಟಗಳನ್ನು ರೂಪಿಸಲು ರಾಜ್ಯ ಸಮ್ಮೇಳನ ಹಾಗೂ ಏಪ್ರಿಲ್‌ನಲ್ಲಿ ಕಣ್ಣೂರಿನಲ್ಲಿ ನಡೆಯುವ ಅಖಿಲ ಭಾರತ ಮಹಾಧಿವೇಶನದಲ್ಲಿ ತೀರ್ಮಾನಿಸಲಾಗುವುದು ಎಂದು ಕಾರಟ್ ತಿಳಿಸಿದರು.

ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆಯನ್ನು ನಿತ್ಯಾನಂದಸ್ವಾಮಿ ವಹಿಸಿದ್ದರು. ವೇದಿಕೆಯ ಮೇಲೆ ಪೊಲಿಟ್‌ಬ್ಯೂರೋ ಸದಸ್ಯರಾದ ಎಂ.ಎ ಬೇಬಿ, ಬಿ.ವಿ. ರಾಘವಲು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ, ಕೊಪ್ಪಳ ಜಿಲ್ಲಾ ಕಾರ್ಯದರ್ಶಿ ಜಿ.ನಾಗರಾಜ, ರಾಜ್ಯ ಮುಖಂಡರಾದ ಎಸ್. ವರಲಕ್ಷ್ಮಿ, ಕೆ.ಶಂಕರ್, ಜೆ.ಬಾಲಕೃಷ್ಣ ಶೆಟ್ಟಿ, ಮೀನಾಕ್ಷಿ ಸುಂದರಂ, ಕೆ.ಎನ್ ಉಮೇಶ್, ವಿಜೆಕೆ ನಾಯರ್, ಜಿ.ಎನ್. ನಾಗರಾಜ್, ವಸಂತ ಆಚಾರಿ, ಗಂಗಾವತಿ ತಾಲ್ಲೂಕ ಕಾರ್ಯದರ್ಶಿ ನಿರುಪಾದಿ ಬೆಣಕಲ್ ಸೇರಿದಂತೆ ಅನೇಕರಿದ್ದರು.

ವರದಿ: ಲಿಂಗರಾಜು, ಮಳವಳ್ಳಿ

........ಜನತೆಯ ಸಮೃದ್ಧ ಸೌಹಾರ್ದ ನವ ಕರ್ನಾಟಕ ಕಟ್ಟೋಣ

ಪುಟ 8 ರಿಂದ

ಖರೀದಿ ಮಾಡಲು ಅನುವು ಮಾಡಿಕೊಡುವ ಭೂಸುಧಾರಣೆ ತಿದ್ದುಪಡಿ; ಜಾನುವಾರು ನಿಷೇಧ ತಿದ್ದುಪಡಿ ತರಲಾಗಿದೆ. ಅಲ್ಪಸಂಖ್ಯಾತರ ಆಹಾರ ಹಕ್ಕು, ನವಾಸ ಸ್ಥಾನ, ಹೈನುಗಾರಿಕೆ ಮೇಲೆ ದಾಳಿ ಮಾಡಿ ಹೈನುಗಾರಿಕೆಯನ್ನು ಕಾರ್ಪೊರೆಟ್ ಗಳಿಗೆ ವಹಿಸಿ ಕೊಡುವ ಹುನ್ನಾರ ನಡೆದಿದೆ. ಮತಾಂತರ ನಿಷೇಧದ ಮೂಲಕ ಕೋಮುವಿಷವನ್ನು ಇನ್ನಷ್ಟು ವಿಸ್ತಾರವಾಗಿ ಹರಡುವ ಪ್ರಯತ್ನ ಮಾಡಲಾಗುತ್ತಿದೆ. ಮೀಸಲಾತಿ ಮೇಲೆ ದಾಳಿ, ಭಿನ್ನ ಗಂಪುಗಳ ನಡುವೆ ಮೀಸಲಾತಿಗೆ ಪೈಪೋಟಿ ಹೆಚ್ಚಿಸಿ ಅದನ್ನು ಅರ್ಥಹೀನ ಮಾಡುವ ಪ್ರಯತ್ನ ನಡೆದಿದೆ. ದಲಿತ ಸವರ್ಣೀಯ ನೌಕರರನ್ನು ಪರಸ್ಪರ ಎತ್ತಿಕಟ್ಟುವ ಪ್ರಯತ್ನ ಮಾಡಲಾಗುತ್ತಿದೆ. ಕಾರ್ಮಿಕರ, ಇತರ ದುಡಿಯುವ ಜನರ ಚಳುವಳಿಗಳ ಮುಂಚೂಣಿಯಲ್ಲಿರುವ ಕಾರ್ಯಕರ್ತರನ್ನು ಸೆಳೆಯುವ, ಚಳುವಳಿಗಳನ್ನು ಒಡೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಕಾ.ಯು.ಬಿ ರಾಜ್ಯದ ರಾಜಕೀಯ ಪರಿಸ್ಥಿತಿಯ ಸ್ಥೂಲ ನೋಟ ನೀಡಿದರು.

ಈ ದುರಾಡಳಿತದಿಂದ ಆಕ್ರೋಶಗೊಂಡ ಹಲವು ರೈತರು, ಕಾರ್ಮಿಕರು ಇತ್ಯಾದಿ ಹಲವು ಜನವಿಭಾಗಗಳು ಹೋರಾಟ ನಡೆಸಿದ್ದಾರೆ, ಇನ್ನಷ್ಟು ತೀವ್ರ ಹೋರಾಟಗಳಿಗೆ ಸಜ್ಜುಗೊಳ್ಳುತ್ತಿದ್ದಾರೆ. ರೈತರ ಹೋರಾಟ ಕರ್ನಾಟಕದಲ್ಲಿ ನಡೆದಿದ್ದು ರೈತ ಮತ್ತು ಇತರ ಸಾಮೂಹಿಕ ಸಂಘಟನೆಗಳ ಐಕ್ಯತೆ ಅಭೂತಪೂರ್ವವಾಗಿತ್ತು. ಪಕ್ಷದ ಹಲವು ಘಟಕಗಳಲ್ಲಿ ಮತ್ತು ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಕಡಿಮೆಯಾಗಲು ಕೊವಿದ್ ಕಾಲದ ನಬಂಧನೆಗಳು ಮುಖ್ಯ ಕಾರಣವಾದರೂ, ಹಲವು ಘಟಕಗಳಲ್ಲಿ ಸಂಘಟನೆಗಳಲ್ಲಿ ಸದಸ್ಯತ್ವ ಹೆಚ್ಚೂ ಆಗಿದೆ. 2018ರಲ್ಲಿ ರಾಜ್ಯವ್ಯಾಪಿ ಸೌಹಾರ್ದ ಕರ್ನಾಟಕ ಮಾನವ ಸರಪಣಿ ಮತ್ತು ನಂತರವೂ ಜ.30ರಂದು ವ್ಯಾಪಕ ಸೌಹಾರ್ದ ಕಾರ್ಯಕ್ರಮಗಳು, ಸಿಎಎ ಹೋರಾಟದಲ್ಲಿ ಜಂಟಿ ವೇದಿಕೆಗಳ ರಚನೆ, ಏಳು ಎಡ ಪ್ರಜಾಸತ್ತಾತ್ಮಕ ಪಕ್ಷಗಳ ಕೂಟ ರಚನೆ ಈ ಅವಧಿಯ ಪ್ರಮುಖ ಹೋರಾಟಗಳಾಗಿದ್ದವು ಎಂದು ಕಾ. ಯು. ಬಸವರಾಜ್ ತಿಳಿಸಿದರು.

ಸಂಘಟನಾ ಸಮಸ್ಯೆಗಳಲ್ಲಿ ಶೇ.99 ಸುಧಾರಣೆಯಾಗಿದೆ, ಐಕ್ಯತೆಯನ್ನು ಶಾಧಿಸಲಾಗಿದೆ, ಪಕ್ಷ ಸಾಮೂಹಿಕ ನಾಯಕತ್ವದಲ್ಲಿ ಮುನ್ನಡೆಯುತ್ತಿದೆ ಎಂದು ಅವರು ತಿಳಿಸಿದರು. ಪಕ್ಷದ ಚಟುವಟಿಕೆಗಳ ಕ್ರೋಢಿಕರಣ ಮತ್ತು ವಿಸ್ತರಣೆಗೆ ಸಾಕಷ್ಟು ನುರಿತ ಬದ್ಧ ಪೂರ್ಣಾವಧಿ ಕಾರ್ಯಕರ್ತರನ್ನು ನೇಮಿಸಿ ಅವರಿಗೆ ಅಗತ್ಯ ವೇತನ ನೀಡಲು, ಮತ್ತು ಅದಕ್ಕೆ ಅಗತ್ಯವಾದ ನಿಧಿ ಸಂಗ್ರಹ ಮಾಡಲು ಸಾಧ್ಯವಾಗದಿರುವುದು ಮುಖ್ಯ ಕಾರಣವಾಗಿದ ಎಂದು ಸಂಘಟನಾ ಸಮಸ್ಯೆಗಳ ಕುರಿತು ಮಾತನಾಡುತ್ತಾ ಅವರು ತಿಳಿಸಿದರು.

ಕಾರ್ಯದರ್ಶಿಗಳ ವರದಿ ಮಂಡನೆಯ ನಂತರ ಜನವರಿ 2 ರಾತ್ರಿ ಮತ್ತು 3 ರ ಬೆಳಿಗ್ಗೆ ಜಿಲ್ಲಾ/ಘಟಕವಾರು, ಫ್ರಾಕ್ಶನ್ ವಾರು ಗುಂಪು ಚರ್ಚೆ ನಡೆಯಿತು. ಈ ಗುಂಪು ಚರ್ಚೆಯಲ್ಲಿ ಬಂದ ಅಂಶಗಳನ್ನು ಆಯಾ ಗುಂಪಿನ ಆರಿಸಿದ ಪ್ರತಿನಿಧಿಗಳು ಜನವರಿ 3 ರಂದು ಇಡೀ ದಿನ ನಡೆದ ಅಧಿವೇಶನದಲ್ಲಿ ಮಂಡಿಸಿದರು. 74 ಪ್ರತಿನಿಧಿಗಳು 480 ನಿಮಿಷಗಳ ಕಾಲ ಚರ್ಚೆ ನಡೆಸಿದರು.

ಚರ್ಚೆಯಲ್ಲಿ ಎದ್ದು ಬಂದ – ವಿದ್ಯಾರ್ಥಿ–ಯುವರಂಗಕ್ಕೆ ಆದ್ಯತೆ, ಬಾಲಸಂಘ ಚಟುವಟಿಕೆ, ಪಕ್ಷದ ರಾಜಕೀಯ ನೆಲೆ ಕುಸಿತಕ್ಕೆ ಕಾರಣಗಳು, ವಿವಿಧ ಘಟಕಗಳ ಸಂಘಟನಾ ಸಮಸ್ಯೆಗಳು, ಸಂಘಟನಾ ಸಮಸ್ಯೆಗಳಲ್ಲಿ ಶೇ.99 ಸುಧಾರಣೆಯಾಗಿದೆಯೆ ಎಂಬಿತ್ಯಾದಿ ಟೀಕೆ–ಟಿಪ್ಪಣಿಗಳಿಗೆ ಕಾ. ಯು. ಬಸವರಾಜ್ ಜನವರಿ 4ರ ಬೆಳಗಿನ ಅಧಿವೇಶನದಲ್ಲಿ ಉತ್ತರಿಸಿದರು. ಚರ್ಚೆಗೆ ಉತ್ತರದ ನಂತರ ರಾಜಕೀಯ ವರದಿಯನ್ನು ಪ್ರತಿನಿಧಿ ಅಧಿವೇಶನ ಅಂಗೀಕರಿಸಿತು.

ಸಂವಿಧಾನ ಬದ್ಧ ಧಾರ್ಮಿಕ ಸ್ವಾತಂತ್ರ್ಯವನ್ನು ಕಸಿಯುವ ಕೋಮುವಾದಿ ಹಿತಾಸಕ್ತಿಯ 'ಮತಾಂತರ' ನಿಷೇಧ ಕಾಯ್ದೆ ಯನ್ನು ಹಿಂಪಡೆಯಲು ಆಗ್ರಹ, ಪ್ರತಿಭಟನೆಗೆ ಕರೆ

ಕರ್ನಾಟಕದಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಸರಕಾರವು ಅಂಗೀಕರಿಸಿರುವ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಕಾಯ್ದೆ, 2021' ಕಾಯ್ದೆಯು ಭಾರತೀಯರಿಗೆ ಸಂವಿಧಾನವು ಕೊಡ ಮಾಡುವ ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಕಸಿಯುವ ಸಂವಿಧಾನ ವಿರೋಧಿ ಕ್ರಮವಾಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಯ 23 ನೆಯ ರಾಜ್ಯ ಸಮ್ಮೇಳನವು ತೀವ್ರವಾಗಿ ಖಂಡಿಸುತ್ತದೆ.

ಕರ್ನಾಟಕ ವಿಧಾನ ಸಭೆಯಲ್ಲಿ ತರಾತುರಿಯಲ್ಲಿ ಅಂಗೀಕರಿಸಲ್ಪಟ್ಟ ಈ ಮಸೂದೆಯನ್ನು ವಿಧಾನಪರಿಷತ್ತಿನಲ್ಲಿ ತಿರಸ್ಕಾರಕ್ಕೆ ಒಳಗಾಗ ಬಹುದೆಂಬ ಆತಂಕದಿಂದ ಸುಗ್ರೀವಾಜ್ಞೆ ಹೊರಡಿಸಿ ಜಾರಿಗೆ ತರಲು ಶ್ರೀ ಬಸವರಾಜ್ ಬೊಮ್ಮಾಯಿ ಅವರ ನೇತೃತ್ವದ ಸಚಿವ ಸಂಪುಟವು ಕ್ರಮ ವಹಿಸುವುದನ್ನು ಸಮ್ಮೇಳನವು ತೀವ್ರವಾಗಿ ವಿರೋಧಿಸುತ್ತದೆ. ಕರ್ನಾಟಕದ ರಾಜ್ಯಪಾಲರು ಇದಕ್ಕೆ ಅನುವು ಕೊಡುವುದಾಗಲಿ ಅಂಗೀಕರಿಸುದಾಗಲಿ ಮಾಡಬಾರದೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಸ್ವತಂತ್ರ ಭಾರತದ ಸಂವಿಧಾನದ 25 ನೇ ಅನುಚ್ಛೇಧವು ದೇಶದ ಪ್ರತಿಯೊಬ್ಬ ಪ್ರಜೆಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಖಾತ್ರಿ ಪಡಿಸುತ್ತದೆ. ಧಾರ್ಮಿಕ ಸ್ವಾತಂತ್ರ್ಯ ಎಂದರೆ ದೇಶದ ಯಾವುದೇ ಪ್ರಜೆಯು ತನಗೆ ಇಷ್ಟ ಬಂದ ಮತಧರ್ಮವನ್ನು ಅನುಸರಿಸಬಹುದು, ಯಾವುದೇ ಧರ್ಮದ ವಿಚಾರಗಳನ್ನು ಪ್ರಚಾರ ಮಾಡಬಹುದು. ಹಾಗೆಯೇ ಯಾವುದೇ ವ್ಯಕ್ತಿಗೆ ಯಾವುದೇ ಮತಧರ್ಮವನ್ನು ಅನುಸರಿಸುವ, ಇಲ್ಲವೆ ಅನುಸರಿಸದೇ ಇರುವ ಸ್ವಾತಂತ್ರ್ಯ ಸಹ ಇರುತ್ತದೆ. ಇದು ಧಾರ್ಮಿಕ ಸ್ವಾತಂತ್ರ್ಯವಾಗಿದ್ದು ಈ ಧಾರ್ಮಿಕ ಹಕ್ಕು ದೇಶದ ಪ್ರತಿಪ್ರಜೆಯ ಮೂಲಭೂತ ಹಕ್ಕಾಗಿದೆ ಎನ್ನುವುದನ್ನು ಸಮ್ಮೇಳನವು ನೆನಪಿಸ ಬಯಸುತ್ತದೆ.

ಆದರೆ ಕರ್ನಾಟಕ ಸರಕಾರ ತಂದಿರುವ ಕಾಯ್ದೆಯು ಜನರ ಸಂವಿಧಾನಬದ್ಧ ಹಕ್ಕನ್ನು ಕಿತ್ತುಕೊಳ್ಳುವ ಒಂದು ದೌರ್ಜನ್ಯಕಾರಿ, ಸರ್ವಾಧಿಕಾರದ ಕ್ರಮವಾಗಿದೆ. ಬಲವಂತ, ಅನುಚಿತ ಪ್ರಭಾವ, ಒತ್ತಾಯ, ಆಮಿಷಗಳ ಮೂಲಕ ಅಥವಾ ಯಾವುದೇ ವಂಚನೆಯ ವಿಧಾನಗಳ ಮೂಲಕ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರ ಆಗುವುದನ್ನು ತಡೆಯುವ ಉದ್ದೇಶದಿಂದ ಈ ಕಾಯ್ದೆಯನ್ನು ತರಲಾಗಿದೆ ಎಂದು ಸರಕಾರ ಹೇಳಿಕೊಂಡಿದೆ. ಆದರೆ ಈಗಾಗಲೇ ಸಂವಿಧಾನದಲ್ಲಿ ಬಲವಂತದ ಮತಾಂತರವನ್ನು ತಡೆಯುವ ಮತ್ತು ಶಿಕ್ಷಿಸುವ ಅವಕಾಶ ಇರುವಾಗ ಮತ್ತೊಂದು ಕಾಯ್ದೆಯನ್ನು ತರುವುದರ ಔಚಿತ್ಯವಾದರೂ ಏನಿದೆ ಎನ್ನುವುದನ್ನು ಸಮ್ಮೇಳನವು ಪ್ರಶ್ನಿಸುತ್ತದೆ.


ಸಮಾನತೆ–ಸಾಮಾಜಿಕ ನ್ಯಾಯಗಳೆಂಬ ಉದಾತ್ತ ಮಾನವೀಯ ತತ್ವಗಳ ಆಧಾರದಲ್ಲಿ ಒಂದು ಪ್ರಜಾಸತ್ತಾತ್ಮಕ–ಧರ್ಮನಿರಪೇಕ್ಷ ರಾಷ್ಟ್ರವಾಗಿ ಘೋಷಿಸಿಕೊಂಡಿರುವ ಭಾರತವನ್ನು ಜಾತಿ ತಾರತಮ್ಯ ಮತ್ತು ಅಸಮಾನತೆಯ ಆಧಾರದ ಮನುವಾದಿ ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸಲು ಕೆಲಸ ಮಾಡುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಿಯಂತ್ರಣದಲ್ಲಿರುವ ಬಿಜೆಪಿ ಪಕ್ಷವು ಇಂತಹ ಪ್ರಗತಿ ವಿರೋಧಿ ಕಾಯ್ದೆಯೊಂದನ್ನು ತಂದಿರುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಸಮ್ಮೇಳನವು ಸ್ಪಷ್ಟಪಡಿಸುತ್ತದೆ.

ಬಲಾತ್ಕಾರ ಮತ್ತು ಆಮಿಷದ ಮತಾಂತರವನ್ನು ತಡೆಯುವ ಉದ್ದೇಶದ್ದು ಎಂದು ಹೇಳಲಾದ ಈ ಕಾಯ್ದೆಯು ಹಲವು ಕರಾಳ ಸ್ವರೂಪದ ಅಘಾತಕಾರಿ ಕಟ್ಟಳೆಗಳನ್ನು ನಿಯಮಗಳನ್ನು ಒಳಗೊಂಡಿದ್ದು ನಮ್ಮ ಸಮಾಜದ ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿ ಮಾಡಿಕೊಂಡಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಯಾವುದೇ ಧಾರ್ಮಿಕ ಸಂಸ್ಥೆಯು ನಡೆಸುವ ಶಾಲೆ ಅಥವಾ ಕಾಲೇಜಿನಲ್ಲಿ ಉಚಿತ ಶಿಕ್ಷಣ,

ನಿರ್ಣಯ ಮಂಡನೆ: ಎಸ್.ವೈ. ಗುರುಶಾಂತ್
ಅನುಮೋದನೆ: ಯಾದವ ಶೆಟ್ಟಿ

ಉದ್ಯೋಗ ನೀಡುವುದನ್ನು ಸಹ ಮತಾಂತರದ ಉದ್ದೇಶದ ಆಮಿಷಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಶತಶತಮಾನಗಳ ಕಾಲ ಅಸ್ಪೃಶ್ಯರು ಮತ್ತು ಶೂದ್ರರಿಗೆ ಅಕ್ಷರ ಜ್ಞಾನವನ್ನು ವಂಚಿಸಿದ ಭಾರತದಲ್ಲಿ ಈ ಮಹಿಳೆಯರು ಸೇರಿದಂತೆ ಈ ಶೋಷಿತ ಸಮುದಾಯಗಳಿಗೆ ಭಾರತದ ಬಹಳಷ್ಟು ಭಾಗಗಳಲ್ಲಿ ಅಕ್ಷರದ ಬೆಳಕು ಸಿಕ್ಕಿದ್ದೇ ಧಾರ್ಮಿಕ ಅಲ್ಪಸಂಖ್ಯಾತ ಸಂಸ್ಥೆಗಳ ಶಾಲಾ ಕಾಲೇಜುಗಳ ಮೂಲಕ. ಈಗಲೂ ಧಾರ್ಮಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಸಾಮಾಜಿಕ ನ್ಯಾಯದ ತತ್ವದ ಆಧಾರದಲ್ಲಿ ಈ ಶಿಕ್ಷಣ ಸೇವೆಯನ್ನು ಮುಂದುವರಿಸಿವೆ ಎಂಬ ಅಂಶವನ್ನು ಈ ಕಾಯ್ದೆ ಸಂಪೂರ್ಣವಾಗಿ ಮರೆಮಾಚಿದೆ.

ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡದ ಸಮುದಾಯದವರನ್ನು ಮತಾಂತರ ಮಾಡುವವರಿಗೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಶಿಕ್ಷೆ ಮತ್ತು ದಂಡಗಳಂತಹ ಕರಾಳ ಶಿಕ್ಷೆಯನ್ನು ಕಾಯ್ದೆಯಲ್ಲಿ ನಿಗದಿ ಮಾಡಲಾಗಿದೆ. ದೇಶವು ಸ್ವಾತಂತ್ರ್ಯ ಪಡೆದ ಮುಕ್ಕಾಲು ಶತಮಾನದ ನಂತರವೂ ಭಾರತದಲ್ಲಿ ದಲಿತರಿಗೆ ಅಸ್ಪೃಶ್ಯತೆ ಮತ್ತು ಅಪಮಾನಗಳಿಂದ ಇನ್ನೂ ಮುಕ್ತಿ ಸಿಕ್ಕಿಲ್ಲ. ಜಾತಿ ದೌರ್ಜನ್ಯಗಳಿಗೆ ತಡೆ ಬಿದ್ದಿಲ್ಲ. ಮಹಿಳೆಯರು ಮತ್ತು ಶೋಷಿತ ಸಮುದಾಯಗಳಿಗೆ ಘನತೆಯ ಬದುಕಿನ ಅವಕಾಶ ದೊರೆತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಘನತೆಯ ಬದುಕನ್ನು ಬಯಸಿ ಮತ್ತೊಂದು ಮತ ಧರ್ಮವನ್ನು ಅಪ್ಪಿಕೊಳ್ಳಲು ಬಯಸುವ ಜನರನ್ನು ಇರುವ ಧರ್ಮದಲ್ಲೇ ಕಟ್ಟಿ ಹಾಕಬೇಕೆನ್ನುವ ಕಾಯ್ದೆಯು ಮತಾಂಧ ಸರ್ವಾಧಿಕಾರಿ ಧೋರಣೆಯನ್ನು ಕಾನೂನು ಬದ್ಧಗೊಳಿಸುವಂತಿದೆ. ಜೊತೆಗೆ ಮತಾಂತರ ನಡೆಸಲಾಗುತ್ತಿದೆ ಎಂಬ ಹೆಸರಿನಲ್ಲಿ ಸಮಾಜದಲ್ಲಿ ಗೂಂಡಾಗಿರಿ ನಡೆಸುತ್ತಿರುವ ಸಂಘ ಪರಿವಾರದ ಕಾರ್ಯಕರ್ತರ ಪುಂಡಾಟಿಕೆಗಳಿಗೆ



ಇನ್ನಷ್ಟು ಕುಮ್ಮಕ್ಕು ಕೊಡುವಂತಿರುವುದನ್ನು ಸಮ್ಮೇಳನವು ಗಮನಿಸುತ್ತದೆ.

ಯಾವುದೇ ವ್ಯಕ್ತಿಯು ಮದುವೆಯ ನಂತರ ಮತ್ತು ಮದುವೆಯ ಮುಂಚೆ ಸಹ ಮದುವೆಯ ಕಾರಣಕ್ಕಾಗಿ ಮತಾಂತರ ಆಗುವುದನ್ನು ಸಹ ಈ ಕಾಯ್ದೆಯು ನಿರ್ಬಂಧಿಸುತ್ತದೆ. ಮದುವೆ ಮತ್ತು ಮತಧರ್ಮ ಪಾಲನೆಯು ಯಾವುದೇ ವ್ಯಕ್ತಿಯ ವೈಯುಕ್ತಿಕ ಹಕ್ಕಾಗಿದ್ದು ಆಳುವ ಸರಕಾರಗಳಿಗೆ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಲು ಅವಕಾಶ ಕೊಡುವುದು ಎಂದರೆ ಸಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಮೂಲತತ್ವಗಳನ್ನು ಮಣ್ಣುಪಾಲು ಮಾಡುವುದು ಎಂದೇ ಆಗುತ್ತದೆ. ವಯಸ್ಕ ಯುವಕ–ಯುವತಿಯರು ತಮ್ಮ ಆಯ್ಕೆಯಂತೆ ಮದುವೆ ಆಗುವುದನ್ನು ಮತ್ತು ಅಂತರ್ ಧರ್ಮೀಯ ಪ್ರೇಮ ವಿವಾಹಗಳಾಗುವುದನ್ನು ತಡೆಯುವ ದುರುದ್ದೇಶ ಈ ಕಾಯ್ದೆಯಲ್ಲಿ ಅಡಗಿದೆ. ಇದಲ್ಲದೇ ಮತಾಂತರದ ನೆಪದಲ್ಲಿ ಈ ವಿಷಯಕ್ಕೆ

ಪುಟ 13 ನೋಡಿ

6 ವರ್ಷದೊಳಗಿನ ಮಕ್ಕಳಿಗೆ ಉಚಿತ, ಸಾರ್ವತ್ರಿಕ, ಕಡ್ಡಾಯ ಪೂರ್ವ ಪ್ರಾಥಮಿಕ ಶಿಕ್ಷಣದ ಕಾಯ್ದೆ ರಚಿಸಬೇಕು ಮತ್ತು ಐಸಿಡಿಎಸ್ ಯೋಜನೆಯನ್ನು ಬಲಪಡಿಸಬೇಕು

1974 ರಾಷ್ಟ್ರೀಯ ಮಕ್ಕಳ ನೀತಿಯ ಶಿಫಾರಸ್ಸಿನ ಮೇರೆಗೆ 1975ರಲ್ಲಿ ಐಸಿಡಿಎಸ್ ಯೋಜನೆ ಪ್ರಾರಂಭವಾಗಿ ಇಂದಿಗೆ 46 ವರ್ಷಗಳಾಗಿವೆ. ಮಹಿಳೆ ಮತ್ತು ಮಕ್ಕಳ ಸರ್ವಾಂಗೀಣ ಉನ್ನತಿಗೆ ಈ ಯೋಜನೆ ವಿಶ್ವದಲ್ಲೇ ಗಮನ ಸೆಳೆದಿದೆ. ಆದರೆ, ಜಾಗತೀಕರಣದ ನೀತಿಗಳ ಪರಿಣಾಮವಾಗಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿನ ಕಾರ್ಯಕ್ರಮಗಳಿಗೆ ಕೊಡಬೇಕಾದ ಒತ್ತನ್ನು ಕೊಡದಿರುವ ಹಿನ್ನೆಲೆಯಲ್ಲಿ ಸರ್ಕಾರಗಳು ಸತತವಾಗಿ ಅನುದಾನಗಳನ್ನು ಕಡಿತ ಮಾಡುತ್ತಲೇ ಬಂದಿವೆ. ಈ ಕಾರಣದಿಂದ ಮಕ್ಕಳ ಮತ್ತು ಮಹಿಳೆಯರ ಅಪೌಷ್ಠಿಕತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ಸ್ವತಃ ಸರ್ಕಾರವೇ ಇದಕ್ಕೆ ಕಾರಣವಾಗಿದೆ.

ಈಗಾಗಲೇ ಬಹುಚರ್ಚೆಯಲ್ಲಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿ 2020 ಇದು ಮೇಲ್ನೋಟಕ್ಕೆ ಒಳ್ಳೆಯ ಸ್ಫೂರ್ತಿದಾಯಕ ಮಾತುಗಳನ್ನಾಡಿದೆ. ಆದರೆ ಪ್ರಾಯೋಗಿಕತೆ ಮತ್ತು ಶಿಫಾರಸ್ಸುಗಳು ಎರಡನ್ನು ಗಮನಿಸಿದಾಗ ತೀರಾ ನಿರಾಶಾದಾಯಕವಾಗಿವೆ ಮಾತ್ರವಲ್ಲ ಅಪಾಯಕಾರಿಯಾಗಿದೆ.

ಪ್ರಮುಖವಾಗಿ ಎನ್.ಇ.ಪಿ. ಯಲ್ಲಿ ಐಸಿಡಿಎಸ್ ಬಗ್ಗೆ ಮೆಚ್ಚುಗೆ ಇಲ್ಲ. 3 ವರ್ಷದ ವಯಸ್ಸಿನ ಕೆಳಗಿನ ಮಕ್ಕಳ ಬಗ್ಗೆ ಏನೇನೂ ಹೇಳಿಲ್ಲ. ಬದಲಿಗೆ 3 ವರ್ಷದ ಮೇಲ್ಪಟ್ಟ ಮಕ್ಕಳು ಶೈಕ್ಷಣಿಕ ವ್ಯವಸ್ಥೆಯಡಿ ಬರಬೇಕೆಂದು ಪ್ರತಿಪಾದಿಸುತ್ತದೆ. ಜಗತ್ತಿನ ಮಾರುಕಟ್ಟೆಯನ್ನು ಎದುರಿಸಬೇಕೆಂದರೆ ಮನುಷ್ಯ ಮಗುವಾಗಿರುವಾಗಿನಿಂದಲೇ ಸ್ಪರ್ಧೆಯನ್ನು ಎದುರಿಸಬೇಕು ಎನ್ನುತ್ತದೆ. ಇದರಿಂದಾಗಿ 4–5 ವರ್ಷದ ಮಕ್ಕಳಿಗೆ ಪ್ರತ್ಯೇಕ 'ಬಾಲವಾಟಿಕಾ' ಎನ್ನುವ ವ್ಯವಸ್ಥೆಯನ್ನು ತರಬೇಕೆಂಬ ಶಿಫಾರಸ್ಸು ಇದೆ. ಈ ಶಿಫಾರಸ್ಸು ಜಾರಿಯಾದರೆ ಅಂಗನವಾಡಿ ಕೇಂದ್ರಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹೇಗೆಂದರೆ, 40% ದೈಹಿಕ ಬೆಳವಣಿಗೆ, 85% ಮಾನಸಿಕ ಬೆಳವಣಿಗೆಯಾಗುವುದು ಮಗುವಿನ 6 ವರ್ಷದೊಳಗಿನ ಹಂತದಲ್ಲಿ. ಈ ಮಹತ್ವದ ಬೆಳವಣಿಗೆಯಾಗುವ ಸಂದರ್ಭದಲ್ಲಿ ಮಕ್ಕಳಿಗೆ ಬೇಕಾದ ಪೂರಕ ಪೌಷ್ಠಿಕ ಆಹಾರ, ಪ್ರಾಥಮಿಕ ಆರೋಗ್ಯ ಸೌಲಭ್ಯಗಳನ್ನು ಕೊಡಲಿಕ್ಕಾಗಿಯೇ ಐಸಿಡಿಎಸ್ ಯೋಜನೆಯ ಮುಖಾಂತರ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಿರುವುದು.

Early Childhood Care and Education (ECCE) ಶಿಕ್ಷಣವನ್ನು 3 ರಿಂದ 6 ವರ್ಷದೊಳಗಿನ ಮಕ್ಕಳಿಗೆ ಕೊಡಲಾಗುತ್ತಿದೆ. ಆದರೆ ಎನ್.ಇ.ಪಿ. ಯಿಂದ ಅಂಗನವಾಡಿ ಕೇಂದ್ರಗಳಿಗೆ ಕೇವಲ 3–4 ವರ್ಷದ ಮಕ್ಕಳು ಮಾತ್ರ ಉಳಿಯುತ್ತಾರೆ ಮಾತ್ರವಲ್ಲದೇ 6 ವರ್ಷದೊಳಗಿನ ಮಕ್ಕಳಿಗೆ ಪರೀಕ್ಷೆ, ಸ್ಪರ್ಧೆಯಂತಹ ಔಪಚಾರಿಕ ಕ್ರಮಗಳು ಬಂದರೆ ಮಗುವಿನ ಮೆದುಳಿನ ಮೇಲೆ ನಕರಾತ್ಮಾಕ ಪರಿಣಾಮ ಬೀರುವ ಸಂಭವವಿರುತ್ತದೆ.

ಮತ್ತು ಒಂದೊಂದು ಸರ್ಕಾರ ಬಂದಾಗ ಒಂದೊಂದು ರೀತಿಯ ನೀತಿಗಳನ್ನು ರೂಪಿಸುವುದರಿಂದ ಈ ಕೆಳಕಂಡಂತೆ ನಿರ್ಣಯವನ್ನು

ನಿರ್ಣಯ ಮಂಡನೆ: ಜಿ.ಎನ್. ನಾಗರಾಜ್
ಅನುಮೋದನೆ: ಶಾಂತಾ ಘಂಟಿ

ತೆಗೆದುಕೊಳ್ಳಬೇಕಿದೆ.

6 ತಿಂಗಳಿಂದ 3 ವರ್ಷಕ್ಕೆ ಶಿಶುಪಾಲನ ಕೇಂದ್ರ

3 ರಿಂದ 6 ವರ್ಷ ಅಂಗನವಾಡಿ ಕೇಂದ್ರ

6 ವರ್ಷದಿಂದ ಮಗು 1 ನೇ ತರಗತಿಗೆ ಸೇರಬೇಕು ಮತ್ತು

6 ವರ್ಷದೊಳಗಿನ ಮಗುವಿಗೆ ಉಚಿತ, ಸಾರ್ವತ್ರಿಕ ಮತ್ತು ಪೂರ್ವಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಲು ಪ್ರತ್ಯೇಕ ಕಾಯ್ದೆ ರೂಪಿಸಬೇಕು.

ಐಸಿಡಿಎಸ್ ಯೋಜನೆಯನ್ನು ಖಾಯಂ ಮಾಡಿ ಬಲಿಷ್ಠಗೊಳಿಸುವ ಬದಲಿಗೆ ಸತತವಾಗಿ ಅನುದಾನವನ್ನು ಕಡಿತ ಮಾಡಿ ಈ ಯೋಜನೆಯನ್ನೇ ದುರ್ಬಲಗೊಳಿಸಲಾಗುತ್ತಿದೆ. ಈ ಯೋಜನೆಗೆ ಕೊಡುವ ಒಟ್ಟಾರೆ ಅನುದಾನದಲ್ಲೇ ಪೋಷಣ್ ಅಭಿಯಾನದಂಥ ಗುರಿ ನಿರ್ದೇಶಿತ ಯೋಜನೆಗಳನ್ನು (ಗುರಿ ನಿರ್ಧರಿತ ಯೋಜನೆ targeted scheme) ತಂದು ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ ಬಾಣಂತಿಯರಿಗೆ ಸೀಮಂತ, ಮಕ್ಕಳಿಗೆ ಅನ್ನಪ್ರಾಶನದಂತಹ ಸಾಂಪ್ರದಾಯಿಕ ಮೌಲ್ಯಗಳನ್ನು ತುರುಕುವ ಪ್ರಯತ್ನಗಳಿಗೆ ಸೀಮಿತಗೊಳಿಸುತ್ತದೆ. ಈ ಕಾರ್ಯಕ್ರಮಗಳು ಪೌಷ್ಠಿಕತೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳೆಂದು ದೊಡ್ಡ ಪ್ರಮಾಣದಲ್ಲಿ ಪ್ರಚಾರಗಳನ್ನು ಕೊಟ್ಟು ಅಂಕಿ ಅಂಶಗಳಿಂದ ಉತ್ತರವನ್ನು ಸಿದ್ಧಪಡಿಸಲಾಗುತ್ತದೆ. ಮತ್ತೊಂದೆಡೆ



ನೀತಿ ಆಯೋಗದ ಶಿಫಾರಸ್ಸುಗಳಂತೆ ಆಹಾರ ಪದಾರ್ಥಗಳ ಪೂರೈಕೆಗೆ ಬದಲಾಗಿ ನೇರ ನಗದು ವರ್ಗಾವಣೆಯನ್ನು ಮಾಡುವ ಪ್ರಯತ್ನಗಳು ಈಗಾಗಲೇ ನಡೆಯುತ್ತಿದೆ. ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಹೆಸರಿನಲ್ಲಿ ವೇದಾಂತ, ಪ್ರಥಮ್ ಇನ್ನು ಮುಂತಾದ ಎನ್.ಜಿ.ಓಗಳಿಗೆ ಕೊಡಲಾಗುತ್ತಿದೆ. ಹಾಗೂ ಶಿಶುಪಾಲನ ಕೇಂದ್ರಗಳನ್ನು ನಡೆಸಲಿಕ್ಕೂ ಕೂಡ ಎನ್.ಜಿ.ಓಗಳಿಗೆ ಈಗಾಗಲೇ ಕೊಡಲಾಗುತ್ತಿದೆ. ಮತ್ತೊಂದೆಡೆ ಶಿಕ್ಷಣ ಇಲಾಖೆ ಎಲ್.ಕೆ.ಜಿ–ಯುಕೆಜಿ ಗಳನ್ನು ಪ್ರಾರಂಭಿಸುವುದರಿಂದಲೂ ಅಂಗನವಾಡಿಗಳಿಗೆ ಮಕ್ಕಳ ಕೊರತೆ ಪ್ರಾರಂಭವಾಗುತ್ತದೆ.

ಪುಟ 12 ನೋಡಿ



ಕಾಂ.ಮುನೀರ್ ಕಾಟಿಪಳ್ಳ

ರಾಜ್ಯದ ಎಲ್ಲ ಭ್ರಷ್ಟಾಚಾರ ಪ್ರಕರಣಗಳ ನ್ಯಾಯಾಂಗ ತನಿಖೆ ನಡೆಸಬೇಕು

ಪುಟ 2 ರಿಂದ

ಅನಾವರಣಗೊಳಿಸಿದ್ದಾರೆ.

ಇತ್ತೀಚಿಗೆ ಇಡೀ ದೇಶವನ್ನೇ ಬೆಚ್ಚಿಬೀಳಿಸಿರುವ 'ಬಿಟ್ ಕಾಯಿನ್' ಹಗರಣದ ಪ್ರಮುಖ ಆರೋಪಿ ಹ್ಯಾಕರ್ ಶ್ರೀ ಕೃಷ್ಣ ಆಲಿಯಾಸ್ ಶ್ರೀಕಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣಾ ವ್ಯವಸ್ಥೆಯನ್ನೇ (ವಿವಿಧ ಇಲಾಖೆಗಳ ಟೆಂಡರ್ ನಿರ್ವಹಿಸುವ) ಹ್ಯಾಕ್ ಮಾಡಿ ಅಲ್ಲಿ ನೂರಾರು ಜನ ಗುತ್ತಿಗೆದಾರರು ಇಟ್ಟಿದ್ದ ನೂರಾರು ಕೋಟಿ ಭದ್ರತಾ ಠೇವಣಿಯನ್ನೇ(ಇಎಂಡಿ) ಲಪಟಾಯಿಸಿದ್ದ ಇದರ ಬಗ್ಗೆ ಸಿಐಡಿ ತನಿಖೆ ಆರಂಭಿಸಿದ್ದರೂ ಅದು ತಾರ್ಕಿಕ ಅಂತ್ಯ ಕಾಣದಂತೆ ಮಾಡಲಾಯಿತು. ಹೀಗಾಗಿ ಈ 'ಬಿಟ್ ಕಾಯಿನ್ ಲಾಭ' ಪಡೆದವರಲ್ಲಿ ಬಿಜೆಪಿ ಕಾಂಗ್ರಸ್ ಪಕ್ಷದ ಪ್ರಮುಖ ನಾಯಕರುಗಳು ಮತ್ತು ಅವರ ಕುಟುಂಬಗಳು ಹಾಗೂ ರಾಜ್ಯ ಸರ್ಕಾರದ ಹಲವು ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನಲಾಗುತ್ತಿದೆ. ನಗರಪ್ರದೇಶಗಳಲ್ಲಿ ಮಧ್ಯಮ ವರ್ಗದ ಜನರಿಗೆ ಅವರ ಕನಸಿನ ಮನೆಗಳನ್ನು ನಿರ್ಮಿಸಿಕೊಡುವ ಉದ್ದೇಶದಿಂದ ಸ್ಥಾಪಿಸಲಾದ ನಗರಾಭಿವೃದ್ಧಿ 31 ಪ್ರಾಧಿಕಾರಗಳು ಜನಪತ್ರಿನಿಧಿಗಳ ದುರಾಸೆ, ದಲ್ಲಾಳಿ ಮತ್ತು ಅಧಿಕಾರಿಗಳ ಅಪವಿತ್ರ ಮೈತ್ರಿಯಿಂದಾಗಿ ವ್ಯಾಪಕ ಭ್ರಷ್ಟಚಾರದ ಕೂಪಗಳಾಗಿವೆ ಇದಕ್ಕೆಲ್ಲ ಕಿರೀಟವಿಟ್ಟಂತಿರುವ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರ(ಬಿಡಿಎ) ಕಚೇರಿಗಳಲ್ಲಿ ಇತ್ತಿಚಿಗೆ ಭ್ರಷ್ಟಚಾರ ನಿಗ್ರಹ ದಳ(ಎಸಿಬಿ) ದಾಳಿ ನಡೆಸಿ ಅಲ್ಲಿ ವ್ಯಾಪಕ ಭ್ರಷ್ಟಚಾರ, ವಂಚನೆ, ನಕಲಿ ದಾಖಲೆ ಸೃಷ್ಟಿಸಿ ನವೇಶನ ಲಪಟಾಯಿಸುವಿಕೆ ಆಗಿರುವುದನ್ನು ಪತ್ತೆ ಮಾಡಿದೆ. ಮತ್ತು ಇಲ್ಲಿ ದಾಳಿ ನಡೆದಿರುವುದು ಇದು ಮೊದಲೇನೂ ಅಲ್ಲ.

ಇನ್ನೂ ಸರ್ಕಾರದ ಕಾಮಗಾರಿಗಳಿಗೆ ಗುತ್ತಿಗೆದಾರರ ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ರೂಪಿಸಲಾದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆ ಸೆಕ್ಷನ್ 4(ಜಿ) ಯಂತೂ ಈ ಕರೋನಾ ಅವಧಿಯಲ್ಲಿ ರಾಜ್ಯ ಸರ್ಕಾರದ ಇಲಾಖೆಗಳು ದುರ್ಬಳಕೆ ಮಾಡಿಕೊಂಡಿವೆ. ಆ ಮೂಲಕ ಬಿಜೆಪಿ ಸರ್ಕಾರದ ಸಚಿವರು, ಶಾಸಕರು, ಅಧಿಕಾರಿಗಳು ತಮ್ಮ ಹಿಂಬಾಲಕರು ಹಾಗೂ ಸಂಬಂಧಿಗಳಿಗೆ ಟೆಂಡರ್ ಸಿಗುವಂತೆ ಮಾಡಿ ಸಾವಿರಾರು ಕೋಟಿ ಹಣವನ್ನು ಲೂಟಿ ಹೊಡೆದಿವೆ. ಸಚಿವರು ಮತ್ತು ಶಾಸಕರು ಮತ್ತು ಇಲಾಖಾ ಅಧಿಕಾರಿಗಳೇ ಇದರ ನೇರ ಫಲಾನುಭವಿಗಳಾಗಿರುವುದು ಈಗ ಜಗಜಾಹೀರಾಗಿದೆ. ಕರೋನಾ ಅವಧಿಯಲ್ಲಿ ಪರಿಹಾರಕ್ಕಾಗಿ ರಾಜ್ಯ ಸರ್ಕಾರ ಕರ್ನಾಟಕ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಎಲ್ಲ ನಿಯಮಗಳನ್ನು ಉಲ್ಲಂಘಿಸಿ ಕಳಪೆ ರೇಷನ್, ಟೂಲ್ ಕಿಟ್‌ಗಳನ್ನು ಖರೀದಿಸಿದ್ದು ಅದರಲ್ಲಿ ನೂರಾರು ಕೋಟಿ ಹಣವನ್ನು ಕಾರ್ಮಿಕ ಸಚಿವರು, ಮತ್ತು ಕಲ್ಯಾಣ ಮಂಡಳಿ ಮತ್ತು ಕಾರ್ಮಿಕ ಇಲಾಖಾ ಅಧಿಕಾರಿಗಳು ಭ್ರಷ್ಟಚಾರ ನಡೆಸಿದ್ದು ಮತ್ತು ಖಾಸಗೀ ಆಸ್ಪತ್ರೆಗಳಿಂದ ಲಸಿಕೆ ಖರೀದಿಗೆ ರೂ 700 ಕೋಟಿ ನೀಡಲು ಮುಂದಾಗಿರುವುದರ ವಿರುದ್ದ ಕಟ್ಟಡ ಕಾರ್ಮಿಕ ಸಂಘಗಳು ತೀವ್ರ ಹಾಗೂ ಯಶಸ್ವಿ ಹೋರಾಟ ನಡೆಸಿದ್ದು ಗಮನಾರ್ಹ ಸಂಗತಿಯಾಗಿದೆ. ಹಾಗೆ ಹೈದ್ರಾಬಾದ್ ಕರ್ನಾಟಕದಲ್ಲಿ ಶಾಲಾ ಮಕ್ಕಳಲ್ಲಿ ಅಪೌಷ್ಟಿಕತೆ ನೀಗಿಸಲು ಕರೆಯಲಾದ ಮೊಟ್ಟೆ ಖರೀದಿ ಟೆಂಡರ್‌ನಲ್ಲಿ ಸ್ವತಃ ಹಿಂದಿನ ಮಹಿಳಾ ಸಚಿವರೇ ಕಮಿಷನ್ ಪಡೆದ ಆರೋಪ ಬಂದಿತ್ತು ಎನ್ನುವುದು ಬಿಜೆಪಿ ಭ್ರಷ್ಟ ಮುಖವನ್ನು ರಾಜ್ಯಕ್ಕೆ ಪರಿಚಯಿಸಿದೆ.

ಭ್ರಷ್ಟಚಾರವಿಲ್ಲದ ಇಲಾಖೆಗಳೇ ಇಲ್ಲ

ರಾಜ್ಯ ಸರ್ಕಾರದ ಅಡಿಯಲ್ಲಿ ಪ್ರಮುಖ ಕಾಮಗಾರಿಗಳನ್ನು ಮೊದಲಿನಿಂದಲೂ ನಿರ್ವಹಿಸುವ ಲೋಕೋಪಯೋಗಿ, ಜಲಸಂಪನ್ಮೂಲ, ಸಣ್ಣ ನೀರಾವರಿ, ಪಂಚಾಯತ್ ರಾಜ್ಯ ಹಾಗೂ ಗ್ರಾಮೀಣಾಭೀವೃದ್ದಿ, ನಗರಾಭಿವೃದ್ದಿ, ಆರೋಗ್ಯ ಮತ್ತು ಸಮಾಜ ಕಲ್ಯಾಣ ಇತ್ಯಾದಿ ಇಲಾಖೆಗಳಲ್ಲಿ ಮಂಜೂರಾದ ಅನುದಾನಗಳಲ್ಲಿ ಅರ್ಧದಷ್ಟು ಮೊತ್ತ ಲಂಚದ ರೂಪದಲ್ಲೇ ಲೂಟಿಯಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಆರಂಭದಿಂದ ಹಿಡಿದು ಕೆಲಸ ಮುಗಿದ ಬಳಿಕ ಬಿಲ್ ಮಂಜೂರಾತಿ ವರೆಗೂ ಕರುಡು ಕಾಂಚಾಣದ್ದೇ ಆಟ ಎಂದು ನೇರ ಆರೋಪವನ್ನು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಇದೆ ಮೊದಲ ಬಾರಿಗೆ ಸಾರ್ವಜನಿಕವಾಗಿ ಆರೋಪ ಮಾಡುವಷ್ಟರ ಮಟ್ಟಿಗೆ ರಾಜ್ಯದ ಭ್ರಷ್ಟಚಾರ ಬೆಳೆದು ನಿಂತಿದೆ. ಈ ಭ್ರಷ್ಟಾಚಾರದ ಜಾಲ ಹೇಗೆ ಹಂಚಿಕೆಯಾಗುತ್ತಿದೆ ಎನ್ನುವ ಶೇಕಡವಾರು ವಿವರವನ್ನು ಅದು ರಾಜ್ಯದ ಜನರ ಮುಂದೆ ಬಯಲುಗೊಳಿಸಿದೆ. ಅದರ ಪ್ರಕಾರ

- **ಟೆಂಡರ್ ಅನುಮೋದನೆ ಮೊದಲು ಸಚಿವರಿಗೆ ಶೇ 5 ರಷ್ಟು**
- **ಕಾಮಗಾರಿ ಆರಂಭ ಮುನ್ನ ಕೆಲವು ಸಂಸದರಿಗೆ ಶೇ 5 ರಷ್ಟು**
- **ರಸ್ತೆ ಕಾಮಗಾರಿಗಳಲ್ಲಿ ಸ್ಥಳಿಯ ಜನಪ್ರತಿನಧಿಗಳಿಗೆ ಶೇ 10 ರಷ್ಟು**
- **ಕಟ್ಟಡ ಕಾಮಗಾರಿಗಳಲ್ಲಿ ಸ್ಥಳಿಯ ಜನಪ್ರತಿನಧಿಗಳಿಗೆ ಶೇ.5 ರಷ್ಟು**
- **ಕೆಆರ್‌ಡಿಎಲ್ ಕಾಮಗಾರಿಗಳಲ್ಲಿ ಸ್ಥಳಿಯ ಜನಪ್ರತಿನಿಧಿಗಳಿಗೆ ಶೇ 10 ರಷ್ಟು**
- **ಕಾಮಗಾರಿಗಳು ಪ್ರಗತಿ ಹಂತದಲ್ಲಿ ಶೇ 15–20 ರಷ್ಟು**
- **ಬಿಲ್ ಪಾವತಿಗಾಗಿ ಅಧಿಕಾರಿಗಳಿಗೆ ಶೇ 6 ರಷ್ಟು**

ಇದಲ್ಲದೆ ಕಾಮಗಾರಿಗಳ ಅಥವಾ ಗುತ್ತಿಗೆ ಕೆಲಸಗಳ ಟೆಂಡರ್ ಪಡೆಯುವ ಮುನ್ನ ಶೇ10 ರಷ್ಟು ನಂತರ ಕಾರ್ಯದೇಶ ಪಡೆಯುವುದಾಗಿ ಶೇ 10 ರಷ್ಟು ಅಧಿಕಾರಿಗಳು ಮತ್ತು ಸಚಿವರಿಗೆ, ಲೆಕ್ಕ ಪರಿಶೋಧಕರಿಗೆ ಶೇ 2 ರಷ್ಟು ಸಮಾಲೋಚನಾ ಸಂಸ್ಥೆಗೆ ಶೇ 1 ರಷ್ಟು ಕೆಳಹಂತದ ನೌಕರರು/ ಗುಮಾಸ್ಥರಿಗೆ ಶೇ 1 ರಷ್ಟು ಲಂಚಾವತಾರ ವಿಸ್ತರಣೆಗೊಂಡಿದೆ ಎನ್ನುವ ಅಂಶವನ್ನು ನಾಡಿನ ಹೆಸರಾಂತ ಪ್ರಜಾವಾಣಿ ಪ್ರಕಟಿಸಿದ ಭ್ರಷ್ಟಚಾರ ಕುರಿತಾದ ಸರಣಿ ಲೇಖನ ಮಾಲೆಗಳು ಜನತೆಯ ಮುಂದಿಟ್ಟಿದೆ. ಹಿಂದೆಲ್ಲ ಕಮಿಷನ್ ಪಡೆದು ಟೆಂಡರ್ ಕೊಡಿಸಲು ಮಧ್ಯವರ್ತಿಗಳು ಇರುತ್ತಿದ್ದರು ಮತ್ತು ಸಚಿವರೋ ಶಾಸಕರೋ ಅಥವಾ ಅಧಿಕಾರಿಗಳ ಸಂಬಂಧಿಕರೋ ಈ ವ್ಯವಹಾರ ನಡೆಸುತ್ತಿದ್ದರು ಆದರೆ ಇತ್ತೀಚಿಗೆ ಈ ಕೆಲಸಕ್ಕೆ ನೇರವಾಗಿ ಸಚಿವರು,ಶಾಸಕರು ಮತ್ತು ಹಿರಿಯ ಅಧಿಕಾರಿಗಳೇ ಧುಮುಕಿ ವ್ಯವಹಾರ ಮುಗಿಸುತ್ತಿದ್ದಾರೆ ಹೀಗಾಗಿ ಹಿಂದೆ ಶೇ15–20 ರಷ್ಟಿದ್ದ ಲಂಚದ ಪ್ರಮಾಣ ಈಗ ಶೇ 40 ರಷ್ಟಕ್ಕೆ ಏರಿಕೆಯಾಗಿದೆ. ಕಳಪೆ ಕಾಮಗಾರಿಗಳು ನಡೆದರೆ ಎಲ್ಲರೂ ಗುತ್ತಿಗೆದಾರರತ್ತ ಬೆರಳು ಮಾಡಿ ತೋರಿಸುತ್ತಾರೆ ಆದರೆ ಮಂಜೂರಾದ ಕಾಮಗಾರಿಗಳಲ್ಲಿ ಶೇ 40–50 ರಷ್ಟು ಹಣ ಲಂಚಕ್ಕೆ ಹೋದರೆ ಗುಣಮಟ್ಟದ ಕೆಲಸಗಳು ಹೇಗೆ ನಡೆಸಬೇಕಾಗುತ್ತದೆ ಎಂದು ಗುತ್ತಿಗೆದಾರರು ಸಂಘವೇ ಪ್ರಶ್ನೆ ಮಾಡುತ್ತಿದೆ ಎಂದರೆ ಈ ಭ್ರಷ್ಟಚಾರ ನಾಗಲೋಟದಿಂದ ಆಗಸದೆತ್ತರ ಜಿಗಿದಿದೆ ಸ್ಪಷ್ಟವಾಗುತ್ತಿದೆ.

ಹೀಗಾಗಿ ರಾಜ್ಯದ ಅಭಿವೃದ್ದಿಗೆ ಅಡ್ಡಗಾಲಾಗಿರುವ ಈ ಭ್ರಷ್ಟಾಚಾರವನ್ನು ನಿಯಂತ್ರಿಸುವ ಕೆಲಸ ಶಾಸಕಾಂಗ ಮತ್ತು ಕಾರ್ಯಂಗಗಳಿಂದ ಮೇಲ್ಮಟ್ಟದಿಂದಲೇ ಆರಂಭಗೊಳ್ಳಬೇಕು ಇದರಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸಚಿವರು, ಶಾಸಕರು ಭ್ರಷ್ಟಾಚಾರ ಹೆಚ್ಚಾಗಲು ಕಾರಣವಾದರೆ ಮತ್ತೊಂದು ಕಡೆ ಅಧಿಕಾರ ನಡೆಸಿದ ಕಾಂಗ್ರಸ್ ಹಾಗೂ ಜನತಾದಳ ಪಕ್ಷಗಳು ತಮ್ಮದೆ ಕಾಣಿಕೆ ನೀಡಿವೆ. ಈ ಮೂರು ಪಕ್ಷಗಳು ಭ್ರಷ್ಟಾಚಾರದ ಫಲಾನುಭವಿಗಳೇ ಹೀಗಾಗಿ ಇವುಗಳಿಗೆ ಭ್ರಷ್ಟಾಚಾರವನ್ನು ನಿಯಂತ್ರಿಸುವ ಇಚ್ಚಾಶಕ್ತಿ ಮತ್ತು ನೈತಿಕತೆ ಎರಡೂ ಇಲ್ಲವಾಗಿದೆ.

ಆದರೆ ಕೇರಳದಲ್ಲಿ ಈಗ ಅಧಿಕಾರ ನಡೆಸುತ್ತಿರುವ ಎಡಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್) ಸರ್ಕಾರ ಮತ್ತು ಪಶ್ಚಿಮ ಬಂಗಾಳ ಹಾಗೂ ತ್ರಿಪುರಾಗಳಲ್ಲಿ ಎರಡು ಮೂರು ದಶಕಗಳಿಂದ ಆಡಳಿತ ನಡೆಸಿದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಭ್ರಷ್ಟಾಚಾರರಹಿತ ಆಡಳಿತವನ್ನು ಹೇಗೆ ನೀಡಬಹುದು ಎನ್ನುವುದ್ಕಕೆ ಪರ್ಯಾಯ ರಾಜಕೀಯ ಮಾದರಿಗಳಾಗಿವೆ ಇದುವರೆಗಿನ ಎಡರಂಗದ ಆಳ್ವಿಕೆಯಲ್ಲಿ ಒಬ್ಬರೇ ಒಬ್ಬ ಸಚಿವರು, ಶಾಸಕರು ಹಾಗೂ ಚುನಾಯಿತ ಪ್ರತಿನಿಧಿಗಳು ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಿಕ್ಕಿಹಾಕಿಕೊಂಡ ನಿದರ್ಶನಗಳೇ ಇಲ್ಲ ಎನ್ನುವುದು ಕಮ್ಯೂನಿಸ್ಟ ಪಕ್ಷಗಳಿಗೆ ಸಮಾಜದ ಮತ್ತು ಜನತೆಯ ಹಿತ ಮಾತ್ರವೇ ಮುಖ್ಯ ಎನ್ನುವುದನ್ನು ಇದು ಸಾಬೀತುಪಡಿಸಿದೆ.

ಆದ್ದರಿಂದ ಸಮಾಜದಲ್ಲಿ ಆಳವಾಗಿ ಬೇರು ಬಿಟ್ಟಿರುವ ಈ ಭ್ರಷ್ಟ ವ್ಯವಸ್ಥೆಯನ್ನು ನಾಶ ಮಾಡದೇ ಹೊರತು ಸಮಾಜದ ಅಭಿವೃದ್ದಿ ಮತ್ತು ಜನತೆಯ ಅಭಿವೃದ್ದಿ ಅದರಲ್ಲೂ ದುಡಿಯುವ ಜನತೆಯು ಪರಿಹಾರಗಳನ್ನು ಪಡೆಯಲು ಸಾಧ್ಯವಿಲ್ಲ ಎಂಬುದು ಸಿಪಿಐ(ಎಂ) ಪಕ್ಷದ ಸ್ಪಷ್ಟ ಅಭಿಪ್ರಾಯವಾಗಿದೆ. ಇಂತಹ ಭ್ರಷ್ಟ ವ್ಯವಸ್ಥೆ ಸರಿಯಾಗಬೇಕಾದರೆ ಅದಕ್ಕೆ ಕಾರಣವಾದ ಈ ಬಂಡವಾಳಶಾಹಿ ವ್ಯವಸ್ಥೆ ಮತ್ತು ಅದನ್ನೆ ಅನುಸರಿಸುವ ರಾಜಕೀಯ ವ್ಯವಸ್ಥೆ ಬದಲಾಗಬೆಕು. ಆದರೆ ಅದು ಅಷ್ಟು ಸರಳವಾಗಿಲ್ಲ ಇದಕ್ಕಾಗಿ ರಾಜ್ಯದ ಜನಸಮುದಾಯ ಮತ್ತು ವೀಶೇಷವಾಗಿ ದುಡಿಯುವ ಜನತೆ ಸಿಪಿಐ(ಎಂ) ಮತ್ತು ಇತರೆ ಎಡಪಕ್ಷಗಳೊಂದಿಗೆ ಸೇರಿ ಈ ಭ್ರಷ್ಟಾಚಾರದ ವಿರುದ್ದ ದೃಢವಾದ ಹೋರಾಟ ನಡೆಸಬೇಕಿದೆ. ಮತ್ತು ಈ ವಿಷಯದಲ್ಲಿ ನ್ಯಾಯಾಂಗ ವ್ಯವಸ್ಥೆಯ ಸಕಾಲಿಕ ಮಧ್ಯ ಪ್ರವೇಶವು ಅಗತ್ಯವಾಗಿದೆ.

ಬೆಂಗಳೂರಿನ ಅಭವೃದ್ಧಿ ಕೆಸಲಗಳಲ್ಲಿನ ನಡೆದಿರುವ ಅವ್ಯವಹಾರಗಳ ಬಗ್ಗೆ ನಿವೃತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ರವರ ನೇತ್ರತ್ವದಲ್ಲಿ ರಚಿಸಲಾಗಿದ್ದ ಸಮಿತಿಯು ತನ್ನ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯಾದರು ರಾಜ್ಯ ಸರ್ಕಾರ ಅದನ್ನು ಅನುಮೋದಿಸಲು ಹಾಗು ಬಹಿರಂಗಪಡಿಸಲು ಮುಂದಾಗುತ್ತಿಲ್ಲ. ಈ ತನಿಖಾ ವರದಿ ಹೊರಬಿದ್ದಲ್ಲಿ ರಾಜಧಾನಿಯಲ್ಲಿಯೇ ಅಭಿವೃದ್ಧಿಯ ಹೆಸರಲ್ಲಿ ನಡೆಯುತ್ತಿರುವ ಸಾರ್ವಜನಿಕ ಹಣದ ಲೂಟಿಯ ಪ್ರಮಾಣವು ಹೊರ ಬೀಳುವ ಸಾಧ್ಯತೆಗಳಿವೆ.

ಈ ಹಿನ್ನಲೆಯಲ್ಲಿ ರಾಜ್ಯದ ಅಭಿವೃದ್ದಿಗೆ ಮಾರಕವಾದ, ಜನತೆಯ ತೆರಿಗೆ ಹಣವನ್ನು ಲೂಟಿ ಮಾಡುವ ಭ್ರಷ್ಟಾಚಾರವನ್ನು ನಿಗ್ರಹಿಸಲು ರಾಜ್ಯ ಸರ್ಕಾರ ಅಗತ್ಯ ಕ್ರಮವಹಿಸಬೇಕು ಹಾಗೂ ಸಾರ್ವಜನಿಕ ಹಣವನ್ನು ಭ್ರಷ್ಟತೆ ಮೂಲಕ ಕೊಳ್ಳೆ ಹೊಡೆಯುತ್ತಿರುವ ಲೂಟಿಕೋರ ರಾಜಕಾರಣಿಗಳು ಅವರ ಆಪ್ತರು ಹಾಗೂ ಭಾಗಿಯಾದ ಅಧಿಕಾರಗಳಿಗೆ ತ್ವರಿತಗತಿಯಲ್ಲಿ ಶಿಕ್ಷೆಯಾಗುವಂತೆ ಮತ್ತು ರಾಜ್ಯದ ಎಲ್ಲ ಭ್ರಷ್ಟಾಚಾರ ಪ್ರಕರಣಗಳನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಲು ರಾಜ್ಯ ಸರ್ಕಾರ ಮುಂದಾಗಬೇಕೆಂದು 2022 ಜನವರಿ 2 ರಿಂದ 4 ರವರೆಗೆ ಗಂಗಾವತಿಯಲ್ಲಿ ನಡೆಯುತ್ತಿರುವ ಸಿಪಿಐ(ಎಂ) ಪಕ್ಷದ 23 ನೇ ರಾಜ್ಯ ಸಮ್ಮೇಳನ ಆಗ್ರಹಿಸಿದೆ.


ಐಸಿಡಿಎಸ್ ಯೋಜನೆಯನ್ನು ಬಲಪಡಿಸಬೇಕು

ಪುಟ 11 ರಿಂದ

ಐಸಿಡಿಎಸ್ ಯೋಜನೆಗೆ ಪ್ರತ್ಯೇಕ ನಿರ್ದೇಶನಾಲಯ ಮಾಡದೇ ಇರುವುದರಿಂದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕೆಲಸಗಳನ್ನು ಅಂಗನವಾಡಿ ನೌಕರರ ಮೇಲೆ ಹೇರಿ ಐಸಿಡಿಎಸ್ ಕೆಲಸಗಳು ಕುಂಠಿತಗೊಳ್ಳಲು ಸರ್ಕಾರವೇ ನೇರವಾಗಿ ಹೊಣೆಯಾಗಿದೆ. ರಾಜ್ಯ ಸರ್ಕಾರವು ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ 28–10–2021 ರಂದು "ಸಮಗ್ರ ಶಿಶು ಅಭಿವೃದ್ಧಿ ಸೇವೆಗಳಲ್ಲಿ ಪಂಚಾಯತಿಗಳ ಪಾತ್ರ" ಕುರಿತು ಜಂಟಿ ಸುತ್ತೋಲೆ ಹೊರಡಿಸಿದೆ. 'ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಟಿಕಾಂಶ ಸಮಿತಿಗಳು ಗ್ರಾಮ ಮತ್ತು ಸ್ಥಳೀಯ ಮಟ್ಟದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ (ಐಸಿಡಿಎಸ್) ಕಾರ್ಯಕ್ರಮದ ನಿರ್ವಹಣೆ ಮತ್ತು ಮೇಲ್ವಿಚಾರಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಎಂದೂ, ಅದಕ್ಕಾಗಿ ಮೇಲ್ವಿಚಾರಣೆ ಸಮಿತಿಯನ್ನು ರಚಿಸಿದೆ ಎಂದೂ, ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆಯ ಕ್ರಮಬದ್ಧತೆಯನ್ನು ಪರಿಶೀಲನೆ ಮಾಡುವುದಾಗಿಯೂ ಆದೇಶದಲ್ಲಿ ಹೇಳಲಾಗಿದೆ. ಪಾಳೇಗಾರಿ ಭೂಮಾಲಕ ವರ್ಗಕ್ಕೆ ಸೇರಿದವರು ಅಥವಾ ಅವರ ಹಿಡಿತದಲ್ಲಿರುವವರೇ ಇಂದು ಜನಪ್ರತಿನಧಿಗಳ ಸ್ಥಾನದಲ್ಲಿರುವ, ಗ್ರಾಮ ಪಂಚಾಯ್ತಿಗಳ ಕಣ್ಣೋಟವನ್ನೇ ಬದಲಾಯಿಸುತ್ತಿರುವ ಸಂದರ್ಭ ಕರ್ನಾಟಕದಲ್ಲಿ ಇರುವಾಗ ಈ ಆದೇಶ ಅಂಗನವಾಡಿ ಕೇಂದ್ರಗಳ ಮೇಲೆ ಮತ್ತು ಅಂಗನವಾಡಿ ನೌಕರರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ.

ಕೆಲಸದ ಭದ್ರತೆ ಕುರಿತು ಯಾವುದೇ ನಯಮಗಳಿಲ್ಲದ, ಕೇವಲ ಗೌರವಧನದಲ್ಲಿರುವ, ಯಾವುದೇ ಕಾರ್ಮಿಕ ಕಾನೂನುಗಳಾಗಲೀ, ಸೇವಾ ನಯಮಗಳಾಗಲಿ ಇಲ್ಲದೇ ಹಲವು ತರಹದ ನೋವು ಮತ್ತು ಅಭದ್ರತೆಯಲ್ಲಿ ಕನಿಷ್ಟ ಗೌರವಧನಕ್ಕೆ ದುಡಿಯುವ ಅಂಗನವಾಡಿ ಮಹಿಳೆಯರಿಗೆ ಈ ಸುತ್ತೋಲೆಯಿಂದ ದುಷ್ಪರಿಣಾಮವಾಗುತ್ತದೆ. ಆದ್ದರಿಂದ ಈ ಸುತ್ತೋಲೆಯನ್ನು ಸಂಪೂರ್ಣವಾಗಿ ವಾಪಸ್ ಪಡೆಯಬೇಕು ಮಾತ್ರವಲ್ಲ, ಸರ್ಕಾರಗಳು ಅನುದಾನ ಕಡಿತ ಮಾಡಿ ಗ್ರಾಮ ಪಂಚಾಯತಿಗಳಿಗೆ ಇದರ ಸಂಪೂರ್ಣ ಹೊಣೆ ಹಾಕುವುದನ್ನು ವಿರೋಧಿಸಬೇಕಿದೆ.

ಹೊಸ ಶಿಕ್ಷಣ ನೀತಿ, ಪಂಚಾಯತ್ ಹಿಡಿತಕ್ಕೆ ಅಂಗನವಾಡಿ ಕೇಂದ್ರಗಳನ್ನು ವಹಿಸುವ ಆದೇಶ



ಕಾಂ. ಶಾಂತಾ ಘಂಟೆ

ಗಳ ವಿರುದ್ಧ ಹಾಗೂ ಅಂಗನವಾಡಿ ನೌಕರರ ಸೇವಾ ಜೇಷ್ಠತೆಯನ್ನೂ ಒಳಗೊಂಡು ಮತ್ತಿತರ ಸವಲತ್ತುಗಳಿಗಾಗಿ ಜನವರಿ 10 ರಿಂದ ನಡೆಯುತ್ತಿರುವ ಅಂಗನವಾಡಿ ನೌಕರರ ಹೋರಾಟವನ್ನು ಬೆಂಬಲಿಸಬೇಕೆಂಬ ನಿರ್ಣಯವನ್ನು, ಗಂಗಾವತಿಯಲ್ಲಿ ನಡೆಯುತ್ತಿರುವ ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನ ಅಂಗೀಕರಿಸುತ್ತದೆ.

ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ವಿಸ್ತರಣೆ ಮತ್ತು ನಗರ ಪ್ರದೇಶಗಳಿಗೂ ಈ ಕಾಯ್ದೆಯ ವಿಸ್ತರಣೆಗಾಗಿ ಆಗ್ರಹ



ದೇಶವು ತೀವ್ರ ನಿರುದ್ಯೋಗದಲ್ಲಿ ನರಳುತ್ತಿದೆ. ಕೋವಿಡ್ ನಂತರದಲ್ಲಿ ಇದರ ಪ್ರಮಾಣವು ಅಗಾಧವಾಗಿ ಬೆಳೆದಿದೆ. ಆರ್ಥಿಕ ಹಿಂಜರಿತವು 2009ಕ್ಕಿಂತ ನಾಲ್ಕು ಪಟ್ಟು ಹೆಚ್ಚಾಗಿದೆ. 2020ರ ಸಾಂಕ್ರಾಮಿಕ ಲಾಕ್ಡೌನ್ ನಲ್ಲಿ 11 ಕೋಟಿ 40 ಲಕ್ಷ ಜನರು ತಮ್ಮ ಉದ್ಯೋಗ ಕಳೆದುಕೊಂಡಿದ್ದಾರೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ(ಐಎಲ್‌ಓ) ಪ್ರಕಾರ 840 ಬಿಲಿಯನ್ ಡಾಲರ್ ಮತ್ತು 3.44 ಟ್ರಿಲಿಯನ್ ಡಾಲರ್ ನಡುವಿನ ಕಾರ್ಮಿಕರ ಆದಾಯವು ಕಳೆದು ಹೋಗಿದೆ. ಈ ಆರ್ಥಿಕ ಧಾಳಿಯು ಮಹಿಳೆಯರ ಮೇಲೆ ಪ್ರಭಾವ ಬೀರಿದೆ. ಜಾಗತಿಕವಾಗಿ 3.9 ರಷ್ಟು ಪುರುಷರು ತಮ್ಮ ಕೆಲಸ ಕಳೆದುಕೊಂಡರೆ ಶೇಕಡ 5ರಷ್ಟು ಮಹಿಳೆಯರು ಉದ್ಯೋಗದಿಂದ ವಂಚಿತರಾಗಿದ್ದಾರೆ. ಯುಎಸ್‌ಎ ಒಂದೇ ದೇಶದಲ್ಲಿ ಶೇಕಡ 55% ಮಹಿಳೆಯರಿಗೆ ಉದ್ಯೋಗದ ನಷ್ಟವಾಗಿದೆ.

ಸಂವಿಧಾನದಲ್ಲಿ ಉದ್ಯೋಗವು ಮೂಲಭೂತ ಹಕ್ಕಾಗಿಲ್ಲ ಎನ್ನುವ ಕಾರಣಕ್ಕಾಗಿಯೂ ಆಳುವ ವರ್ಗವು ಜನತೆಗೆ ಉದ್ಯೋಗ ಒದಗಿಸುವಲ್ಲಿ ಯಾವುದೇ ಬದ್ಧತೆ ಹೊಂದಿಲ್ಲ. ಮತ್ತು ಉದ್ಯೋಗ ಒದಗಿಸುವ ಕರ್ತವ್ಯದಿಂದ ಬಹಳ ನಿರಾಯಾಸವಾಗಿ ತಪ್ಪಿಸಿಕೊಳ್ಳುವರು. ಹೀಗಾಗಿ ದೇಶದ ನಗರಗಳಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿಯೂ ಬಹುದೊಡ್ಡ ಸಂಖ್ಯೆಯ ನಿರುದ್ಯೋಗಿಗಳು ತೀವ್ರ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿದ್ದಾರೆ. ನವವಸಾಹತು ನೀತಿಯ ಕಾರಣವಾಗಿ ಉದ್ಯೋಗ ಎಲ್ಲ ಬಾಗಿಲುಗಳು ಮುಚ್ಚಿ ಹೋಗಿವೆ. ಖಾಸಗೀಕರಣ ಉದಾರೀಕರಣ ಜಾಗತೀಕರಣ(ಖಾಉಜಾ)ವು ಉದ್ಯೋಗದ ಎಲ್ಲ ಅವಕಾಶಗಳನ್ನು ಆಪೋಷನ ಗೈದಿದೆ. ಮೀಸಲಾತಿಯು



ಹಿಂಬಾಗಿಲಿನಂದ ಲುಪ್ತಗೊಳಿಸಲಾಗುತ್ತಿದೆ. ಖಾಸಗಿ ವಲಯಗಳಲ್ಲಿಯಂತೂ ಮೀಸಲಾತಿಗೆ ಸ್ಥಾನವೇ ಇಲ್ಲವಾಗಿದೆ. ಸ್ಕಿಲ್ (ನೈಪುಣ್ಯತೆ) ನೆಪದಲ್ಲಿ ತಳವರ್ಗದ ಶ್ರ,ಮಿಕಲೋಕದ ಕೌಶಲ್ಯವನ್ನು ಮೂಲೆಗುಂಪಾಗಿ ಸಲಾಗಿದೆ. ಈ ಕಾರಣವಾಗಿ ಹಸಿವಿನ ಸೂಚ್ಯಾಂಕದಲ್ಲಿ ಭಾರತವು ಅಗ್ರಸ್ಥಾನದಲ್ಲಿದೆ.

ಇದೆಲ್ಲದಕ್ಕೂ ಪರಿಣಾಮಕಾರಿಯಾದ ಪರಿಹಾರವಾಗಿ 2005-06 ರಲ್ಲಿ ದೇಶದ 200 ಜಿಲ್ಲೆಗಳಲ್ಲಿ ಆರಂಭವಾದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು ನೂರು ದಿನಗಳ ಉದ್ಯೋಗದ ಖಾತ್ರಿಯನ್ನು ಒದಗಿಸಿತು. ನಂತರದಲ್ಲಿ ದೇಶದಾದ್ಯಂತ ಈ ಕಾಯ್ದೆಯು ಜಾರಿಯಾಗತೊಡಗಿತು. ಇದರ ಶ್ರೇಯಸ್ಸು ಎಡಪಕ್ಷಗಳಿಗೆ ಅದರಲ್ಲಿಯೂ ಸಿಪಿಐಎಂ ಪಕ್ಷಕ್ಕೆ ಸಲ್ಲುವುದು. ಉದ್ಯೋಗ ಮೂಲಭೂತ ಹಕ್ಕಾಗಿಸಬೇಕೆನ್ನುವ ನಮ್ಮ ಚಳುವಳಿಯ ಆಶಯಕ್ಕೆ ಬಲವಾಗಿ ಬಂದಿದ್ದು ಉದ್ಯೋಗ ಖಾತ್ರಿ ಕಾಯ್ದೆ. ಅನೇಕ ದೌರ್ಬಲ್ಯಗಳ ನಡುವೆ ಬಹಳಷ್ಟು ತಿದ್ದುಪಡಿಯಾಗಲೇ ಬೇಕಾದ ಅಂಶಗಳನ್ನೂ ಒಳಗೊಂಡು ಈ ಕಾಯ್ದೆಯು ದೇಶದ ಗ್ರಾಮೀಣ ಪ್ರದೇಶದಲ್ಲಿ ಜನತೆಯ ಕೈಗೆ ಉದ್ಯೋಗ ಒದಗಿಸಿದೆ. ಹಾಗೆ ನೋಡಿದರೆ ಬೇಡಿಕೆಗನುಸರಿಸಿ ಕೆಲಸ ದೊರೆತಿಲ್ಲ. ಎಪ್ರಿಲ್ 2020ರಲ್ಲಿ ಕೆಲಸ ಮಾಡಿದ ಕುಟುಂಬಗಳ ಸಂಖ್ಯೆಯು ಸುಮಾರು 95 ಲಕ್ಷ. ಹಿಂದಿನ ಹಲವಾರು ವರ್ಷಗಳನ್ನು ನೋಡಿದರೆ ಇದು ತುಂಬ ಕಡಿಮೆ. ಮೇ ತಿಂಗಳಲ್ಲಿ ಇದೇ ಸಂಖ್ಯೆಯು 3.05 ಕೋಟಿಗೆ ಏರಿದೆ. ಜೂನ್ ಮೂರನೆ ವಾರದವರೆಗೆ 2.84 ಕೋಟಿ ಕುಟುಂಬಗಳಿಗೆ ಕೆಲಸ ಸಿಕ್ಕಿದ್ದು ಹಿಂದಿನ ವರ್ಷದ ಇದೇ ತಿಂಗಳಿಗೆ ಹೋಲಿಸಿದರೆ ಇದು ತುಂಬಾ ಹೆಚ್ಚಾದಂತೆ. ಸರಾರಿ 23 ದಿನಗಳ ಕೆಲಸ ಮತ್ತು 200 ರೂಪಾಯಿ ದಿನಗೂಲಿಯೊಂದಿಗೆ ತಿಂಗಳಿಗೆ ಸರಾಸರಿ 1500 ರೂಪಾಯಿ ಗಳಿಸಿದ್ದಾರೆ. ಇದು ಅಲ್ಪವಾದರೂ ಸಹ ಮನರೇಗಾ ಕೆಲಸ ಮತ್ತಷ್ಟು ವಿಸ್ತರಿಸಲ್ಪಟ್ಟಂತಾಗಿದೆ. ಕೋವಿಡ್ ಕಾರಣವಾಗಿ ಸರಕಾರವು ಹೇರಿದ ಅತಾರ್ಕಿಕವಾದ ಮತ್ತು ಪೂರ್ವತಯಾರಿ ಇಲ್ಲದೆ ಹೇರಲ್ಪಟ್ಟ ಲಾಕ್‌ಡೌನ್ ಹಿನ್ನೆಲೆಯಲ್ಲಿ ದುಡಿಯುವ ಜನತೆಯು ಗ್ರಾಮಗಳಿಗೆ ವಲಸೆ ಹೊರಟಿದ್ದರು. ಅಥವ ಕೇಂದ್ರದ ಬಿಜೆಪಿ ಸರಕಾರವೇ ಶ್ರಮಿಕರನ್ನು

ನಿರ್ಣಯ ಮಂಡನೆ: ಕಾಂ. ದೇವಿ
ಅನುಮೋದನೆ: ಕಾಂ. ಅಂಬುಬಾಯಿ

ಅವರ ಕುಟುಂಬಗಳನ್ನು ನಿರ್ದಯವಾಗಿ ಬೀದಿಗೆ ದೂಡಿಬಿಟ್ಟಿತು. ಅಂಥವರಿಗೆ ಗ್ರಾಮಗಳಲ್ಲಿ ನೆರವಿಗೆ ಬಂದಿದ್ದು ಮನರೇಗಾ ಕಾಯ್ದೆಯೇ. ಈ ಹಿನ್ನೆಲೆಯಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಕೆಲಸದ ಬೇಡಿಕೆ ಹೆಚ್ಚಿತು. ಆದರೆ ಕೆಲಸ ಕೇಳಿ ಬಂದ 1.82 ಕೋಟಿ ಜನರಿಗೆ ಕೆಲಸವನ್ನು ನಿರಾಕರಿಸಲ್ಪಟ್ಟಿತು.ಇದು ಅತ್ಯಂತ ಮನಕಲಕುವ ಸಂಗತಿ. 8.07 ಕೋಟಿ ಕಾರ್ಮಿಕರು ಕೆಲಸ ಕೇಳಿದ್ದರು. 6.25 ಕೋಟಿ ಕಾರ್ಮಿಕರು ಮಾತ್ರ ಕೆಲಸ ಪಡೆಯಲು ಸಾಧ್ಯವಾಯಿತು. ಉಳಿದೆಲ್ಲರಿಗೂ ಕೆಲಸ ದೊರೆತಿದ್ದಲ್ಲಿ ನಿರುದ್ಯೋಗದ ಪ್ರಮಾಣವು ತಗ್ಗುವ ಸಾಧ್ಯತೆಗಳಿದ್ದವು. ಕೇರಳ ಸರಕಾರವು ಪ್ರವಾಹದ ಸಮಯದಲ್ಲಿಯೂ ಮತ್ತು ಕೋರೊನಾ ಸೃಷ್ಟಿಸಿದ ನಿರುದ್ಯೋಗದ ಸಮಯದಲ್ಲಿಯೂ ಮನರೇಗಾವನ್ನು ಸಮರ್ಥವಾಗಿ ಬಳಸಿಕೊಂಡು ನಿರುದ್ಯೋಗ ತೊಡೆಯಲು ಸಾಧ್ಯವಾಯಿತು. ಅಲ್ಲಿನ ಎಡರಂಗ ಸರಕಾರಕ್ಕೆ ಯಶಸ್ಸಿನ ಶ್ರೇಯಸ್ಸು ಸಲ್ಲುವುದು. ಆದರೆ ಇತರೆ ರಾಜ್ಯಗಳಲ್ಲಿ ಮೂರನೆ ಒಂದು ಭಾಗದಷ್ಟು ಜನತೆಯನ್ನು ಕೆಲಸದಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ. ಮನರೇಗಾವನ್ನು ದುರ್ಬಲಗೊಳಿಸಲು 'ಗರೀಬ್ ಕಲ್ಯಾಣ ರೋಜಗಾರ ಅಭಿಯಾನವನ್ನು' ಕೇಂದ್ರ ಸರಕಾರವು ಆರಂಭಿಸಿತು. ಕಾಯ್ದೆಬದ್ಧ ನಿಬಂಧನೆಯಿಲ್ಲದ ಈ ಯೋಜನೆಯ ಮೂಲಕ ಮನರೇಗಾವನ್ನು ಜನಮಾನಸದಿಂದ ದೂರ ಮಾಡುವ ಹುನ್ನಾರ ಕೇಂದ್ರ ಸರಕಾರವು ಹೊಂದಿತ್ತು. ಮಾತ್ರವಲ್ಲ ಕಳೆದ ವರ್ಷದ ಬಜೆಟ್ಟಿನಲ್ಲಿ ಮನರೇಗಾ ಅನುಷ್ಠಾನಕ್ಕಾಗಿ ಹೆಚ್ಚಿನ ಹಣವನ್ನು ಒದಗಿಸುವ ಬದಲಿಗೆ ಕಳೆದ ವರ್ಷಕ್ಕಿಂತಳು ಶೇಕಡಾ 40ರಷ್ಟು ಕಡಿಮೆ ಹಣವನ್ನು ಒದಗಿಸಲಾಯಿತು. ಇದು ಮನರೇಗಾದ ಕತ್ತು ಹಿಚುಕುವ ಹುನ್ನಾರವೇ ಹೌದು. ಆದರೆ ಗ್ರಾಮೀಣ ಪ್ರದೇಶದಲ್ಲಿ ಜನತೆಯು ಕೆಲಸಕ್ಕಾಗಿ ಸಂಘಟಿತರಾಗಿ ಸಂಘರ್ಷಕ್ಕೂ ಸಿದ್ಧರಾದ ಅನೇಕ ಉದಾಹರಣೆಗಳು ಸಿಗುತ್ತುವೆ. ಮನರೇಗಾ ಅಂದರೆನೇ ಸಂಘರ್ಷ ಎನ್ನುವಂತಾಗಿದ್ದರಿಂದ ಮನರೇಗಾ ಜಾರಿಗಾಗಿ ಜನತೆಯ ನಡುವೆ ನಿರಂತರ ಕೆಲಸ ಮಾಡಬೇಕಾದ ಬಹುದೊಡ್ಡ ಹೊಣೆಯು ನಮ್ಮ ಪಕ್ಷದ್ದಾಗಿದೆ. 200 ದಿನಗಳ ಕೆಲಸಕ್ಕಾಗಿ ಮತ್ತು ರೂ.600 ಕೂಲಿಗಾಗಿ ಆಗ್ರಹಿಸಬೇಕಿದೆ. ದಲಿತ, ಆದಿವಾಸಿ, ಅಲೆಮಾರಿ, ದೇವದಾಸಿ ಸಮುದಾಯಕ್ಕೆ ನಿರ್ಬಂಧವಿಲ್ಲದೆ ವರ್ಷಪೂರ್ತಿ ಬೇಡಿಕೆಗನುಸರಿಸಿ ಕೆಲಸ ಕೊಡಲು ಸಾಧ್ಯವಾಗಬೇಕು ಎಂದು ಸಿಪಿಐಎಂ ಪಕ್ಷದ 23ನೇ ರಾಜ್ಯ ಸಮ್ಮೇಳನವು ಆಗ್ರಹಿಸುವುದು.

ಕೋವಿಡ್ ಮತ್ತು ಕೋವಿಡ್ ಹೆಸರಿನ ಲಾಕ್ಡೌನ್ ನಂತರದಲ್ಲಿ ನಗರ ಪ್ರದೇಶಗಳಲ್ಲಿಯೂ ವಿಪರೀತವಾಗಿ ನಿರುದ್ಯೋಗ ಬೆಳೆದಿದೆ. ಜನತೆಯ ಕೊಳ್ಳುವ ಶಕ್ತಿಯನ್ನು ಕುಗ್ಗಿಸಿದ್ದು ಕೇಂದ್ರ ಸರಕಾರದ ಆರ್ಥಿಕ ನೀತಿಯೇ ಆಗಿದೆ. ಕಾರ್ಪೋರೇಟ್ ಸಂಪತ್ತು ಹೆಚ್ಚಿಸಲೆಂದೇ ತಾನು ಅಧಿಕಾರದಲ್ಲಿರುವುದು ಎಂಬುದಕ್ಕೆ ಕೇಂದ್ರ ಸರಕಾರದ 'ದೇಶೀಯ ಸಂಪತ್ತು ಮಾರಾಟ' ನೀತಿಯೇ ಬಹುದೊಡ್ಡ ಪುರಾವೆ. ಈ ಎಲ್ಲ ಕಾರಣಗಳಿಂದ ನಗರದ ಸ್ಲಂ ಪ್ರದೇಶ ಮಾತ್ರವಲ್ಲ ಎಲ್ಲ ಕಡೆಯೂ ನಿರುದ್ಯೋಗ ತಾಂಡವವಾಡುತ್ತಿದೆ. ಶ್ರಮ ಮಾರಾಟದ ವೃತ್ತಗಳು ಬೆಳೆಯುತ್ತಿವೆ. ಕೆಲಸ ದೊರೆಯದ ಕಾರಣವಾಗಿ ದೇಹಕ್ಕೆ ಬೇಕಾದಷ್ಟು ಕ್ಯಾಲರಿ ಆಹಾರ ದೊರೆಯುತ್ತಿಲ್ಲ. ಕ್ರಮೇಣ ದೇಹವು ದುರ್ಬಲವಾಗಿ ಅನೇಕ ರೋಗಗಳ ಕೇಂದ್ರವಾಗುತ್ತಿದೆ. ಸಣ್ಣ ಪುಟ್ಟ ರೋಗಗಳಿಗೂ ಸಾವುಗಳು ಹೆಚ್ಚುತ್ತಿರುವುದು ನೋಡಿದರೆ ಇವೆಲ್ಲವೂ ಹಸಿವಿನ ಸಾವುಗಳೇ ಆಗಿರುವ ಎಲ್ಲ ಸಾಧ್ಯತೆಗಳನ್ನು ತಳ್ಳಿ ಹಾಕಲಾಗದು. ಆದ್ದರಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ನಗರಕ್ಕೂ ವಿಸ್ತರಿಸುವ ಅಗತ್ಯವಿದೆ. ನಗರ ಉದ್ಯೋಗ ಖಾತ್ರಿ ಕಾಯ್ದೆಯನ್ನು ರೂಪಿಸಿ ಜಾರಿಗೊಳಿಸಲು ಸಿಪಿಐಎಂ ಪಕ್ಷವು ಆಗ್ರಹಿಸುವುದು.



ಕಾಂ. ಯಾದವ ಶೆಟ್ಟಿ

'ಮತಾಂತರ' ನಿಷೇಧ ಕಾಯ್ದೆ ಯನ್ನು ಹಿಂಪಡೆಯಲು ಆಗ್ರಹ...

ಪುಟ 11 ರಿಂದ

ಸಂಬಂಧವಿಲ್ಲದ ವ್ಯಕ್ತಿಗಳು ಸಹ ಮತ್ತೊಬ್ಬರ ಖಾಸಗಿ ವಿಷಯಗಳಲ್ಲಿ ತಲೆಹಾಕಲು ಮತ್ತು ದೂರುಕೊಡಲು ಈ ಕಾಯ್ದೆಯು ಅವಕಾಶ ಮಾಡಿಕೊಡುತ್ತದೆ. ಮತಾಂತರದ ಆರೋಪ ಹೊರಿಸಿ ಶಿಕ್ಷಣ ಸಂಸ್ಥೆಗಳು ಸೇರಿದಂತೆ, ಯಾವುದೇ ಅಲ್ಪಸಂಖ್ಯಾತ ಸಂಘ-ಸಂಸ್ಥೆಗಳಿಗೆ ಕಿರುಕುಳ ನೀಡಲು ಮತ್ತು ಸರಕಾರದ ಅನುದಾನವನ್ನು ತಡೆಹಿಡಿಯಲು ಬೇಕಾದಂತೆ ಕಾಯ್ದೆಯಲ್ಲಿ ಅವಕಾಶವನ್ನು ಸೃಷ್ಟಿಸಿಕೊಳ್ಳಲಾಗಿದೆ.

ದುರುದ್ದೇಶಪೂರಿತ ಮತಾಂತರ ಮಾಡಲಾಗಿದೆ ಎಂದು ಯಾರ ಮೇಲಾದರೂ ಆರೋಪಿಸಿದರೆ ಅದನ್ನು ಸಾಬೀತು ಮಾಡುವುದು ಆರೋಪ ಮಾಡಿದವರ ಮತ್ತು ಸರಕಾರದ ಹೊಣೆಯಾಗಬೇಕು. ಇದು ಸಹಜ ನ್ಯಾಯ. ಆದರೆ ಈ ಕಾಯ್ದೆಯು ಆರೋಪಕ್ಕೆ ಗುರಿಯಾದವರು ತಾವು ದುರುದ್ದೇಶದ ಮತಾಂತರ ಮಾಡಿಲ್ಲ ಎಂದು ಸಾಬೀತು ಪಡಿಸಬೇಕು ಎಂದು ಈ ಕಾಯ್ದೆ ಹೇಳುತ್ತಿದೆ.

ದೇಶದ ಜನತೆಯನ್ನು ಅತ್ಯಂತ ತೀವ್ರವಾದ ಬಿಕ್ಕಟ್ಟು ಮತ್ತು ಸಂಕ್ಷಕ್ಕೆ ತಳ್ಳಿರುವ ಸಂದರ್ಭದಲ್ಲಿ ಇಂತಹ ಕಾಯ್ದೆಯೊಂದನ್ನು ತರುತ್ತಿರುವ ಹುನ್ನಾರವನ್ನು ಜನತೆ ಅರಿಯಬೇಕಾಗಿದೆ. ತೀವ್ರವಾದ ಎರಡು ಕೊರೋನಾ ಸೋಂಕಿನ ಅಲೆಗಳಿಂದ ದೇಶದ ಮತ್ತು ಕರ್ನಾಟಕ ರಾಜ್ಯದ ಜನ ಸಾಮಾನ್ಯರ ಬದುಕು ಜರ್ಜರಿತಗೊಂಡಿದೆ. ಕೈಗಾರಿಕೆ ಉದ್ಯಮ ಕೃಷಿ ಬಿಕ್ಕಟ್ಟಿನಂದ ತಲ್ಲಣಿಸಿವೆ. ಪೆಟ್ರೋಲ್-ಡೀಸೆಲ್, ಆಹಾರಧಾನ್ಯಗಳು, ತರಕಾರಿ ಮುಂತಾದ ಅಗತ್ಯ ವಸ್ತುಗಳ ಬೆಲೆ ಏರಿಕೆ ಜನರ ಬದುಕನ್ನು ಸುಡುತ್ತಿದೆ. ನಿರುದ್ಯೋಗ, ಅರೆ ಉದ್ಯೋಗ, ವಲಸೆ ತಾಂಡವವಾಡುತ್ತಿದೆ. ಸಮಾಜದಲ್ಲಿ ಖಿನ್ನತೆಯ ಸಮಸ್ಯೆ-ಆತ್ಮಹತ್ಯೆ, ಸಾಮೂಹಿಕ ಆತ್ಮಹತ್ಯೆಯಂತಹ ಪ್ರವೃತ್ತಿಗಳು ಹೆಚ್ಚುತ್ತಿವೆ. ರಾಜ್ಯದಲ್ಲಿ ಇತ್ತೀಚೆಗೆ ಮಳೆ, ಅತೀವೃಷ್ಠಿಯಿಂದಾಗಿ ಸುರಿದು ಬೆಳೆದುನಂತ ಬೆಳೆ ಹಾಳಾಗಿ ರೈತರ ಬದುಕು ಮೂರಾಬಟ್ಟೆಯಾಗಿದ್ದರೂ ಪರಿಹಾರವೇ ಇಲ್ಲವಾಗಿದೆ. ರಾಜ್ಯದಲ್ಲಿ ರಸ್ತೆಗಳು ಸಂಪೂರ್ಣ ಹಾಳಾಗಿದ್ದು ಜನರು ಜೀವ ಅಂಗೈಯಲ್ಲಿ ಹಿಡಿದು ನಡೆಯಬೇಕಿದೆ. ಕಾರ್ಮಿಕರನ್ನು ಬೀದಿಗೆ ನೂಕುವ ಕರಾಳ ಕಾಯ್ದೆಗಳನ್ನು ತರಲಾಗಿದೆ. ಭೂಕಬಳಿಕೆ ಹಗರಣಗಳು ಸೇರಿದಂತೆ ಆಳುವ ಪಕ್ಷದ ಮುಖಂಡರ ಭ್ರಷ್ಟಾಚಾರಗಳು ಬಯಲಾಗಿ ಜನರು ಆಕ್ರೋಶಗೊಂಡಿದ್ದಾರೆ. ಕೊರೋನಾ ಆಳಗೊಳಿಸಿದ ಬಿಕ್ಕಟ್ಟು ನಿರ್ವಹಣೆಯಲ್ಲಿ ಹಾಗೂ ಜನರ ಜೀವ ಮತ್ತು ಬದುಕಿನ ರಕ್ಷಣೆಯಲ್ಲಿ ದಯನೀಯವಾಗಿ ವಿಫಲವಾದ ರಾಜ್ಯ ಮತ್ತು

ಕೇಂದ್ರ ಸರಕಾರಗಳು ಜನರ ಗಮನವನ್ನು ಆಳುವ ಸರಕಾರಗಳ ವೈಫಲ್ಯಗಳ ಕಡೆಯಿಂದ ಬೇರೆಡೆಗೆ ಸೆಳೆದು ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿವೆ. ಇಂತಹ ಪಿತೂರಿಗಳ ಭಾಗವಾಗಿ 'ಮತಾಂತರ', 'ಲವ್ ಜಿಹಾದ್' ಮುಂತಾದ ಹೆಸರಿನಲ್ಲಿ ಜನರ ಒಗ್ಗಟ್ಟನ್ನು ಮುರಿಯುವಂತಹ ಉದ್ದೇಶದಿಂದಲೇ ಬಲವಂತದ ಮತಾಂತರ ನಿಷೇಧದ ಹೆಸರಿನ ಈ ಕಾಯ್ದೆಯನ್ನು ತರಲಾಗಿದೆ ಎಂಬುದು ನಿಚ್ಚಳ ವೆಂದು ರಾಜ್ಯ ಸಮ್ಮೇಳನವು ಅಭಿಪ್ರಾಯಪಡುತ್ತದೆ.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ಗೌತಮ ಬುದ್ಧ ಮತ್ತು ಮಹಾವೀರರು ತಾವಿದ್ದ ಮತಧರ್ಮವನ್ನು ತಿರಸ್ಕರಿಸಿ ಹೊಸ ಮೌಲ್ಯಗಳ ಆಧಾರದ ಹೊಸ ಮತಧರ್ಮಗಳನ್ನು ಬೋಧಿಸಿದರು. ಗುರುನಾನಕರು ಸ್ಥಾಪಿಸಿದ ಸಿಖ್ ಧರ್ಮ ಸಹ ಜನರು ತಾವು ಇದ್ದ ಧರ್ಮವನ್ನು ತೊರೆದು ಹೊಸ ಧರ್ಮವನ್ನು ಸೇರಿದ್ದರಿಂದಲೇ ವ್ಯಾಪಕವಾಗಿ ಬೆಳೆದದ್ದು. ಹನ್ನೆರಡನೇ ಶತಮಾನದ ಶರಣರು ನೇರವಾಗಿ ಮತ್ತು ಸ್ಪಷ್ಟವಾಗಿ ಸಂಘಟಿತವಾಗಿ ಮತ್ತು ಸಾಮೂಹಿಕವಾಗಿ ಅಸಮಾನತೆಯ ವೈದಿಕ ಮತಧರ್ಮವನ್ನು ಖಂಡಿಸಿ ಹೊಸ ಧರ್ಮದ ಪ್ರತಿಪಾದಕರಾದರು.

ಹುಟ್ಟಿನಿಂದ ಬರುವ ಮತಧರ್ಮವು ಯಾವುದೇ ವ್ಯಕ್ತಿಯ ಸ್ವಂತ ಆಯ್ಕೆಯಲ್ಲ. ವ್ಯಕ್ತಿಗಳು ಬೆಳೆದು ವಯಸ್ಕರರಾದಾಗ ತಮಗೆ ಸರಿಕಂಡ ಮತಧರ್ಮವನ್ನು ಆರಿಸಿಕೊಳ್ಳುವ ಹಕ್ಕು ಅಥವಾ ಯಾವುದೇ ಮತಧರ್ಮವನ್ನು ಅನುಸರಿಸದಿರುವ ಹಕ್ಕು ಯಾವುದೇ ವ್ಯಕ್ತಿಗೆ ಇದ್ದೇ ಇದೆ. ಎಲ್ಲ ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳೂ ಮೂಲಭೂತ ಈ ಮಾನವ ಹಕ್ಕನ್ನು ಮಾನ್ಯ ಮಾಡಿವೆ ಮತ್ತು ಮಾನ್ಯ ಮಾಡಬೇಕಾಗುತ್ತದೆ. ಅಲ್ಲದೇ ಯಾವುದೇ ಒಂದು ಧರ್ಮದಿಂದ ಜನರು ಮತ್ತೊಂದು ಧರ್ಮಕ್ಕೆ ಬದಲಾಗುತ್ತಾರೆ ಎಂದಾದರೆ ಆ ಧರ್ಮದ ಧಾರ್ಮಿಕ ಮುಖಂಡರು ಮತ್ತು ಧಾರ್ಮಿಕ ಪ್ರತಿಪಾದಕರು ತಮ್ಮ ಮತ ಧರ್ಮದಲ್ಲಿರುವ ದೋಷ, ಸಮಸ್ಯೆಗಳ ಕಡೆಗೆ ಗಮನ ನೀಡಿ ಅವುಗಳನ್ನು ನಿವಾರಿಸಬೇಕು. ಧಾರ್ಮಿಕ ಸುಧಾರಣೆಗಳನ್ನು ತಂದು ಜನರ ವಿಶ್ವಾಸವನ್ನು ಗಳಿಸಿಕೊಳ್ಳಬೇಕೆ ಹೊರತು ಸರ್ವಾಧಿಕಾರಿ ಕಾನೂನುಗಳ ಮೂಲಕ ಅದನ್ನು ತರುವುದು ನ್ಯಾಯವಲ್ಲ. ಈ ಒಟ್ಟು ಹಿನ್ನೆಲೆಯಲ್ಲಿ ಈ ಬಲವಂತದ ಮತಾಂತರ ನಿಷೇಧದ ಹೆಸರಿನ ಈ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2021' ಕಾಯ್ದೆಯನ್ನು ವಾಪಸ್ ಪಡೆಯಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಯ 23 ನೆಯ ರಾಜ್ಯ ಸಮೇಳನವು ಆಗ್ರಹಿಸುತ್ತದೆ. ರಾಜ್ಯಪಾಲರು ಇದಕ್ಕೆ ಅವಕಾಶವನ್ನು ನೀಡಕೂಡದು ಎಂದು ಮತ್ತೊಮ್ಮೆ ಸಮ್ಮೇಳನವು ಆಗ್ರಹಿಸುತ್ತದೆ.

ಬಿಜೆಪಿ-ಸಂಘಪರಿವಾರದ ಹುನ್ನಾರಗಳನ್ನು ವಿರೋಧಿಸಿ ಇದೇ 2022 ಜನವರಿ 17 ರಂದು ರಾಜ್ಯದಾದ್ಯಂತ ಜಿಲ್ಲಾ ಹಾಗು ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ಕರೆ ನೀಡುತ್ತದೆ.

ಮುಸ್ಲಿಂ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲು ಸಾರ್ವಜನಿಕವಾಗಿ ಪ್ರಚೋದಿಸುವವರಿಗೆ ಕಠಿಣ ಶಿಕ್ಷೆಯಾಗಬೇಕು

ರಾಷ್ಟ್ರಪತಿಗಳಿಗೆ ಮಹಿಳಾ ಸಂಘಟನೆಗಳ ಮನವಿ

ಜುಲೈ 2021 ರಲ್ಲಿ, 'ಸುಲ್ಲಿ ಡೀಲ್ಸ್' ಎಂಬ ಆಪ್ ಅನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಲಾಯಿತು, ಇದು ಪ್ರಮುಖ ಮುಸ್ಲಿಂ ಮಹಿಳೆಯರು, ಪತ್ರಕರ್ತರು, ಬರಹಗಾರರು, ಕಾರ್ಯಕರ್ತರು ಮುಂತಾದವರ 'ಹರಾಜು' ಮಾಡುತ್ತಿರುವುದಾಗಿ ಹೇಳಿತ್ತು. ಇದನ್ನು ಅನ್ಯಾಯ ಮತ್ತು ಭ್ರಷ್ಟಾಚಾರದ ವಿರುದ್ಧ ಬರೆಯುವ ಮತ್ತು ಪ್ರತಿಭಟಿಸುವ ಧೈರ್ಯಶಾಲಿ ಮುಸ್ಲಿಂ ಮಹಿಳೆಯರನ್ನು ಅವಮಾನಿಸುವ ಮತ್ತು ಭಯಭೀತಗೊಳಿಸುವ ಪ್ರಯತ್ನವೆಂದು ವಿಶ್ಲೇಷಿಸಲಾಗಿತ್ತು. 'ಸುಲ್ಲಿ ಡೀಲ್'ಗಳಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಈಗ ವರ್ಷಾಂತ್ಯದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಮತ್ತೆ ಇದೇ ರೀತಿಯ ಆಪ್ 'ಬುಲ್ಲಿ ಬಾಯಿ' ಕಾಣಿಸಿಕೊಂಡಿದೆ. ಇಸ್ಮತ್ ಅರಾ, ಸೈಮಾ ರಂತಹ ಹಲವಾರು ಪ್ರತಿಷ್ಠಿತ ಮುಸ್ಲಿಂ ಮಹಿಳೆಯರನ್ನು ಹೆಸರಿಸಲಾಗಿದೆ, ಮಾತ್ರವಲ್ಲದೆ ಅವರ ಛಾಯಾಚಿತ್ರಗಳನ್ನು ವೆಬ್ ಸೈಟ್‌ನಲ್ಲಿ ಹಾಕಲಾಗಿದೆ, ನಜೀಬ್ ಅವರ ತಾಯಿ ಫಾತಿಮಾ ಅಮ್ಮಿಯವರ ಹೆಸರು ಕೂಡ ಇದೆ. ಅದು ಮಹಿಳೆಯರನ್ನು 'ಹರಾಜು' ಮಾಡುವ ಬಗ್ಗೆಯೂ ಮಾತನಾಡಿದೆ.

"ದುರದೃಷ್ಟವಶಾತ್ ನಾವು ಒಂದು ವರ್ಷದೊಳಗೆ ಎರಡನೇ ಬಾರಿಗೆ ಲಜ್ಜೆಗೆಟ್ಟ ಸ್ತ್ರೀದ್ವೇಷದ ಅತ್ಯಂತ ಅಸಹ್ಯಕರ ಪ್ರದರ್ಶನವನ್ನು ಕಾಣುತ್ತಿದ್ದೇವೆ" ಎಂದಿರುವ ಐದು ರಾಷ್ಟ್ರೀಯ ಮಹಿಳಾ ಸಂಘಟನೆಗಳ ಮುಖಂಡರು ಜಂಟಿಯಾಗಿ ರಾಷ್ಟ್ರಪತಿಗಳಿಗೆ ಸಲ್ಲಿಸಿರುವ ಒಂದು ಜಂಟಿ ಮನವಿಯಲ್ಲಿ "ಸಂವಿಧಾನಿಕ ಅಧಿಕಾರದ ಅತ್ಯುನ್ನತ ಸ್ಥಾನದಲ್ಲಿರುವ ತಾವು ಮಧ್ಯಪ್ರವೇಶಿಸಲು ತಮ್ಮ ಸುಪರ್ದಿಯಲ್ಲಿರುವ ಎಲ್ಲ ಸಾಧನಗಳನ್ನು ಬಳಸಿಕೊಳ್ಳಬೇಕು ಮತ್ತು ಈ ನೀಚ ಮತ್ತು ಕ್ರಿಮಿನಲ್ ವರ್ತನೆಗೆ ಹೊಣೆಗಾರರಾದವರರಿಗೆ ಅದಕ್ಕೆ ತಕ್ಕುದಾದ ತೀವ್ರ ರೀತಿಯ ಶಿಕ್ಷೆಯಾಗುವಂತೆ ಖಚಿತಪಡಿಸಬೇಕು" ಎಂದು ಮನವಿ ಮಾಡಿದ್ದಾರೆ.

ಈ ನೀಚ ನಡೆಯ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಇಸ್ಮತ್ ಆರಾ ದೆಹಲಿಯಲ್ಲಿ ಪೊಲೀಸ್ ದೂರು ದಾಖಲಿಸಿದ್ದಾರೆ. ಜುಲೈನಲ್ಲಿ 'ಸುಲ್ಲಿ ಡೀಲ್ಸ್' ಸಮಯದಲ್ಲಿ, ಉತ್ತರ ಪ್ರದೇಶ ಮತ್ತು ದೆಹಲಿಯಲ್ಲಿ ಎಫ್‌ಐಆರ್‌ಗಳನ್ನು ದಾಖಲಿಸಲಾಗಿತ್ತು. ಆದರೆ, ದುರದೃಷ್ಟವಶಾತ್, ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಈ ನಿಷ್ಕ್ರಿಯತೆಯು ಆಡಳಿತದ ವಿಭಾಗಗಳು ಮತ್ತು ನ್ಯಾಯಾಂಗವು ಕೂಡ ಅಲ್ಪಸಂಖ್ಯಾತರ ವಿರುದ್ಧ ಎಸಗುವ ಅಪರಾಧ ಕೃತ್ಯಗಳಿಗೆ ಪ್ರೇಕ್ಷಕರಾಗಿ ಉಳಿಯುವ ಪ್ರವೃತ್ತಿಯ ಭಾಗವಾಗಿದೆ ಎಂದು ರಾಷ್ಟ್ರಪತಿಗಳಿಗೆ ಸಲ್ಲಿಸಿರುವ ಈ ಮನವಿಯಲ್ಲಿ ಖೇದ ವ್ಯಕ್ತಪಡಿಸಲಾಗಿದೆ.

ದ್ವೇಷ-ಭಾಷಣವಾಗಲಿ, ದೈಹಿಕ ದಾಳಿಯಾಗಲಿ ಅಥವಾ ಪ್ರಾರ್ಥನಾ ಸಭೆಗಳನ್ನು ತಡೆಯುವಲ್ಲಾಗಲೀ, ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರಂತಹ ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರು ಬಲಿಪಶುಗಳಾಗಿದ್ದಲ್ಲಿ, ಪೊಲೀಸರು, ಆಡಳಿತ ಮತ್ತು ನ್ಯಾಯಾಲಯಗಳು ಸಹ ಮೌನವಾಗಿರುತ್ತವೆ. ಸಾಮಾನ್ಯವಾಗಿ ಪೊಲೀಸರು ದೈಹಿಕವಾಗಿ ಉಪಸ್ಥಿತರಿರುತ್ತಾರೆ ಆದರೆ ಮಧ್ಯಪ್ರವೇಶಿಸುವುದಿಲ್ಲ ಅಥವಾ ಹಾಗೆ ಮಾಡಿದಾಗ, ಅದು ಅಪರಾಧಿಗಳಿಗೆ ಸಹಾಯ ಮತ್ತು ಕುಮ್ಮಕ್ಕು ನೀಡುವುದಕ್ಕಾಗಿಯೇ ಆಗಿರುತ್ತದೆ.. ಪರಿಣಾಮವಾಗಿ, ದ್ವೇಷ ಮತ್ತು ಹಿಂಸಾಚಾರವನ್ನು ಬೋಧಿಸುವವರು ಮತ್ತಷ್ಟು ದೌರ್ಜನ್ಯಗಳನ್ನು ಎಸಗುವ ಧೈರ್ಯಮಾಡುತ್ತಾರೆ" ಎಂಬುದನ್ನು ಈ ಮನವಿ ರಾಷ್ಟ್ರಪತಿಗಳ ಗಮನಕ್ಕೆ ತಂದಿದೆ.

ಐಟಿ ಸಚಿವ ಅಶ್ವನಿ ವೈಷ್ಣವ್ ಅವರು ಆಪ್‌ನ ಹಿಂದೆ ಇರುವ ಗಿಟ್‌ಹಬ್ ಬಳಕೆದಾರರನ್ನು 'ಬ್ಲಾಕ್' ಮಾಡಲಾಗಿದೆ ಎಂದು ಘೋಷಿಸಿದ್ದಾರೆ, ಇದು ತುಂಬಾ ದುರ್ಬಲ ಮತ್ತು ಅಸಮರ್ಪಕ ಪ್ರತಿಕ್ರಿಯೆಯಾಗಿದೆ ಎಂದಿರುವ ಮಹಿಳಾ ಸಂಘಟನೆಗಳ ಮುಖಂಡರು, ಪಿತೃಪ್ರಧಾನ ವ್ಯವಸ್ಥೆ ಪ್ರಬಲವಾಗಿರುವ ಮತ್ತು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಅಸಮಾನತೆಯನ್ನು ಅನುಭವಿಸುತ್ತಿರುವ ಮತ್ತು ಕೊನೆಯಿಲ್ಲದ ಹಿಂಸೆಗೆ ಗುರಿಯಾಗುವ ದೇಶದಲ್ಲಿ, ಮುಸ್ಲಿಂ ಮಹಿಳೆಯರನ್ನು ಗುರಿಯಾಗಿಸಿಕೊಂಡ ಸಾರ್ವಜನಿಕ ಪ್ರಚೋದನೆ ಅತ್ಯಂತ ಕೆಟ್ಟ ರೀತಿಯ ಲೈಂಗಿಕ ದೌರ್ಜನ್ಯ, ಇದನ್ನು ಸಹಿಸಿಕೊಳ್ಳಬಾರದು ಎಂದು ಹೇಳಿದ್ದಾರೆ.

"ಕ್ರಿಶ್ಚಿಯನ್ ಮತ್ತು ಮುಸ್ಲಿಂ ಸಮುದಾಯಗಳ ಸದಸ್ಯರು ದೈಹಿಕ ಮತ್ತು ಮೌಖಿಕ ಹಿಂಸಾಚಾರವನ್ನು ಎದುರಿಸುತ್ತಿರುವ, ಹಿಂದೂ ಧಾರ್ಮಿಕ ಮುಖಂಡರು ಸಾರ್ವಜನಿಕ ಸಭೆಗಳಲ್ಲಿ ನಿರ್ಭಿಡೆಯಿಂದ ಅವರ ವಿರುದ್ಧ ನರಮೇಧದ ದಾಳಿಗಳನ್ನು ನಡೆಸಲು ಬಹಿರಂಗವಾಗಿ ಕರೆ ನೀಡುವ ಸನ್ನಿವೇಶದಲ್ಲಿ ಈ ಇತ್ತೀಚಿನ ದೌರ್ಜನ್ಯ ಸಂಭವಿಸಿದೆ ಎಂದು ನಾವು ನಿಮಗೆ ನೆನಪಿಸಲು ಬಯಸುತ್ತೇವೆ" ಎನ್ನುತ್ತ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಬೇಕು ಎಂಬ ತಮ್ಮ ಮನವಿಗೆ ಅವರು ತಕ್ಷಣ ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆ ಎಂಬ ನಿರೀಕ್ಷೆಯನ್ನು ಈ ಮಹಿಳಾ ಸಂಘಟನೆಗಳು ವ್ಯಕ್ತಪಡಿಸಿವೆ..

ಎನ್‌ಎಫ್‌ಐಡಬ್ಲ್ಯು ನ ಅನ್ನಿ ರಾಜಾ, ಎಐಡಿಡಬ್ಲ್ಯುಎ ನ ಮರಿಯಮ್ ಧವಳೆ, ಎಐಪಿಡಬ್ಲ್ಯುಎ ನ ಕವಿತಾ ಕೃಷ್ಣನ್, ಪಿಎಂಎಸ್ ನ ಪೂನಂ ಕೌಶಿಕ್ ಮತ್ತು ಎಐಎಂಎಸ್‌ಎಸ್ ನ ಛಬಿ ಮೊಹಾಂತಿ ಈ ಮನವಿಗೆ ಸಹಿ ಹಾಕಿದ್ದಾರೆ.



'ಬುಲ್ಲಿಬಾಯಿ' ಪ್ರಕರಣದಲ್ಲಿ 18ವರ್ಷದ ಹುಡುಗಿ ಮತ್ತು 21ವರ್ಷದ ಹುಡುಗ್ನ ಬಂಧನ

ವ್ಯಂಗ್ಯಚಿತ್ರ ಕೃಪೆ: ಅಲೋಕ್ ನಿರಂತರ್

"ದ್ವೇಷದ ಭಾಷಣಗಳು ಮತ್ತು ಹಿಂಸಾಚಾರ-ನರಮೇಧಕ್ಕೆ ಕರೆಗಳನ್ನು ಖಂಡಿಸಬೇಕು"

ರಾಷ್ಟ್ರಪತಿ ಮತ್ತು ಪ್ರಧಾನಿಗಳಿಗೆ ಐವರು ನಿವೃತ್ತ ಸೇನಾ ಮುಖ್ಯಸ್ಥರು ಸೇರಿದಂತೆ 100 ಕ್ಕೂ ಹೆಚ್ಚು ಪ್ರತಿಷ್ಠಿತರ ಪತ್ರ

ಸಶಸ್ತ್ರ ಪಡೆಗಳ ಐವರು ಮಾಜಿ ಮುಖ್ಯಸ್ಥರು ಸೇರಿದಂತೆ ವಿವಿಧ ಮಾಜಿ ಸಶಸ್ತ್ರ ಪಡೆ ಅಧಿಕಾರಿಗಳು, ಅಧಿಕಾರಿಗಳು ಮತ್ತು ಪ್ರಮುಖ ನಾಗರಿಕರು ರಾಷ್ಟ್ರಪತಿ, ಪ್ರಧಾನ ಮಂತ್ರಿ, ದೇಶದ ಮುಖ್ಯ ನ್ಯಾಯಾಧೀಶರು, ಗೃಹಮಂತ್ರಿ,ರಕ್ಷಣಾ ಮಂತ್ರಿ, ಲೋಕಸಭಾ ಮತ್ತು ರಾಜ್ಯಸಭಾದ ಅಧ್ಯಕ್ಷರುಗಳು ಅವರಿಗೆ ಬರೆದಿರುವ ಪತ್ರದಲ್ಲಿ. ಹರಿದ್ವಾರದಲ್ಲಿ ಧರ್ಮ ಸಂಸದ್ ಎಂದು ಕರೆಯಲ್ಪಡುವಲ್ಲಿ ಕೆಲವು ಹಿಂದೂ ನಾಯಕರಿಂದ ಮತ್ತು ಅದೇ ವೇಳೆಗೆ ದಿಲ್ಲಿಯಲ್ಲಿ ಸಾರ್ವಜನಿಕ ಪ್ರತಿಜ್ಞಾಸ್ವೀಕಾರ ಎಂಬ ಕಾರ್ಯಕ್ರಮದಲ್ಲಿ ಹಿಂಸಾಚಾರಕ್ಕೆ ಪ್ರಚೋದನೆಯನ್ನು ತಡೆಯಿರಿ ಎಂದು ಕೋರಿದ್ದಾರೆ.

"ಭಾರತೀಯ ಮುಸ್ಲಿಮರ ನರಮೇಧದ ಬಹಿರಂಗ ಕರೆ" ಮತ್ತು ದೇಶದಲ್ಲಿ ಕ್ರಿಶ್ಚಿಯನ್ನರು, ದಲಿತರು ಮತ್ತು ಸಿಖ್ಖರಂತಹ ಇತರ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡಿರುವ ಬಗ್ಗೆ ಆತಂಕ ವ್ಯಕ್ತಪಡಿಸುತ್ತ, "ಯಾವ ವ್ಯಕ್ತಿಗಳು ಅಥವಾ ಪಕ್ಷಗಳು ಅಂತಹ ನರಮೇಧಕ್ಕೆ ಕರೆಗಳನ್ನು ಪ್ರಾರಂಭಿಸಿದರೂ, ಭಾರತ ಸರ್ಕಾರ ಮತ್ತು ಉನ್ನತ ಮಟ್ಟದಲ್ಲಿ ನ್ಯಾಯಾಂಗವು ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ" ಎಂದು ಈ ಪ್ರತಿಷ್ಠಿತರು ಈ ಪತ್ರದಲ್ಲಿ ಹೇಳಿದ್ದಾರೆ.


ನೌಕಾಪಡೆಯ ಮಾಜಿ ಮುಖ್ಯಸ್ಥರುಗಳಾಗಿದ್ದ ಅಡ್ಮಿರಲ್ ಲಕ್ಷ್ಮೀನಾರಾಯಣ ರಾಮದಾಸ್, ಅಡ್ಮಿರಲ್ ವಿಷ್ಣು ಭಾಗವತ್ , ಅಡ್ಮಿರಲ್ ಅರುಣ್ ಪ್ರಕಾಶ್ , ಅಡ್ಮಿರಲ್ ಆರ್.ಕೆ.ಧೋವನ್, ವಾಯುಪಡೆಯ ಮಾಜಿ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎಸ್.ಪಿ.ತ್ಯಾಗಿ, ಸೇನಾಪಡೆಯ ಪಮುಖ್ಯಸ್ಥರಾಗಿದ್ದ ಲೆಫ್ಟಿನೆಂಟ್ ಜನರಲ್ ವಿಜಯ್ ಒಬೆರಾಯ್ ಮತ್ತಿತರ ರಂಗಗಳ ಪ್ರತಿಷ್ಠಿತ ನಾಗರಿಕರು ನಿರ್ದಿಷ್ಟವಾಗಿ, ಸಾಧುಗಳಲ್ಲಿ ಒಬ್ಬರು ಸೇನೆಗೆ ಮಾಡಿದ ಕರೆಯನ್ನು ಉಲ್ಲೇಖಿಸಿದ್ದಾರೆ.

"ಒಬ್ಬ ಭಾಷಣಕಾರರು ಶಸ್ತ್ರಾಸ್ತ್ರಗಳನ್ನು ಎತ್ತಿಕೊಂಡು ಸ್ವಚ್ಛತಾ ಅಭಿಯಾನದಲ್ಲಿ (ಸಫಾಯಿ ಅಭಿಯಾನ) ಭಾಗವಹಿಸುವಂತೆ ಸೇನೆ ಮತ್ತು ಪೊಲೀಸರಿಗೆ ಕರೆ ನೀಡಿದರು. ಇದು ನಮ್ಮದೇ ಪ್ರಜೆಗಳ ನರಮೇಧದಲ್ಲಿ ಭಾಗವಹಿಸುವಂತೆ ಸೇನೆಯನ್ನು ಕೇಳುತ್ತದೆ ಮತ್ತು ಇದು ಖಂಡನೀಯ ಮತ್ತು ಸ್ವೀಕಾರಾರ್ಹವಲ್ಲ. ನಮ್ಮ ಗಡಿಯಲ್ಲಿನ ಪ್ರಸ್ತುತ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ರಾಷ್ಟ್ರದೊಳಗಿನ ಯಾವುದೇ ಶಾಂತಿ ಮತ್ತು ಸೌಹಾರ್ದತೆಯ ಉಲ್ಲಂಘನೆಯು ಶತ್ರುತ್ವದ ಬಾಹ್ಯ ಶಕ್ತಿಗಳನ್ನು ಉತ್ತೇಜಿಸುತ್ತದೆ, "ಎಂದು ಪತ್ರವು ರಾಷ್ಟ್ರೀಯ ಭದ್ರತೆಯ ಬಗ್ಗೆ ಗಂಭೀರ ಕಳವಳವನ್ನು ವ್ಯಕ್ತಪಡಿಸಿದೆ.

"ರಾಷ್ಟ್ರಪತಿಗಳೇ ಮತ್ತು ಪ್ರಧಾನ ಮಂತ್ರಿಗಳೇ, ಅಂತಹ ಪ್ರಯತ್ನಗಳನ್ನು ತಡೆಯಲು ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳುವಂತೆ ನಾವು ನಿಮ್ಮನ್ನುಆಗ್ರಹಿಸುತ್ತೇವೆ ಮತ್ತು ಹಿಂಸಾಚಾರಕ್ಕೆ ಇಂತಹ ಪ್ರಚೋದನೆಯನ್ನು ನಿಸ್ಸಂಗ್ದಿದ್ಧ ಮಾತುಗಳಲ್ಲಿ ಖಂಡಿಸಬೇಕು ಎಂದು ನಿಮ್ಮನ್ನು ಆಗ್ರಹಿಸುತ್ತೇವೆ" ಎಂದು ಅವರು ಹೇಳಿದ್ದಾರೆ.

"ದ್ವೇಷದ ಸಾರ್ವಜನಿಕ ಅಭಿವ್ಯಕ್ತಿಗಳೊಂದಿಗೆ ಹಿಂಸೆಗೆ ಇಂತಹ ಪ್ರಚೋದನೆಗೆ ಅವಕಾಶ ನೀಡಲು ಸಾಧ್ಯವಿಲ್ಲ. ಇದು ಆಂತರಿಕ ಭದ್ರತೆಯ ಗಂಭೀರ ಉಲ್ಲಂಘನೆಗಳು ಮಾತ್ರವೇ ಅಲ್ಲ, ಇದು ನಮ್ಮ ರಾಷ್ಟ್ರದ ಸಾಮಾಜಿಕ ಹಂದರವನ್ನು ಛಿಂದಿ ಮಾಡಬಹುದು."ಎಂದಿರುವ ಪತ್ರವು ಮುಂದುವರಿದು, "ಆದ್ದರಿಂದ ನಮ್ಮ ದೇಶದ ಸಮಗ್ರತೆ ಮತ್ತು ಭದ್ರತೆಯನ್ನು ರಕ್ಷಿಸಲು ನಾವು ಸರ್ಕಾರ, ಸಂಸತ್ತು ಮತ್ತು ಸುಪ್ರೀಂ ಕೋರ್ಟ್‌ಗೆ ತುರ್ತಾಗಿ ಕೆಲಸ ಮಾಡಬೇಕೆಂದು ಕೇಳುತ್ತೇವೆ. ಸಂವಿಧಾನವು ಯಾವುದೇ ನಂಬಿಕೆಯವರು ಧರ್ಮದ ಮುಕ್ತ ಆಚರಣೆಗೆ ಅವಕಾಶವನ್ನು ಒದಗಿಸುತ್ತದೆ. ಧರ್ಮದ ಹೆಸರಿನಲ್ಲಿ ಇಂತಹ ಧ್ರುವೀಕರಣವನ್ನು ನಾವು ಬಲವಾಗಿ ಖಂಡಿಸುತ್ತೇವೆ" ಎಂದು ಈ ನಿವೃತ್ತ ಸೇನಾಧಿಕಾರಿಗಳೂ ಸೇರಿದಂತೆ ಈ ಪ್ರತಿಷ್ಠಿತ ನಾಗರಿಕರು ಹೇಳಿದ್ದಾರೆ.

ಅಲ್ಲದೆ ಎಲ್ಲ ರಾಜಕೀಯ ಪಕ್ಷಗಳ ಮುಖಂಡರೂ ಈ ಕರೆಗಳನ್ನು ಖಂಡಿಸಬೇಕು, ತಮ್ಮ ಕಾರ್ಯಕರ್ತರು ಸಂಯಮದಿಂದ ವರ್ತಿಸುವಂತೆ ನೋಡಿಕೊಳ್ಳುತ್ತ ಜಾತ್ಯತೀತತೆ, ಸೋದರತ್ವ ಮತ್ತು ಎಲ್ಲರಿಗೂ ನ್ಯಾಯದ ಮಾದರಿಯನ್ನು ಹಾಕಿ ಕೊಡಬೇಕು ಎಂದಿರುವ ಅವರು ದೇಶದ ಹಿತದೃಷ್ಟಿಯಿಂದಲ್ಲ ಪಕ್ಷಗಳೂ ರಾಜಕೀಯದಲ್ಲಿ ಧರ್ಮವನ್ನು ಬಳಸದಂತೆ ಎಚ್ಚರ ವಹಿಸಬೇಕು ಮತ್ತು ನಮ್ಮ ಸಂವಿಧಾನ ಮತ್ತು ಜನರ ಕಲ್ಯಾಣವನ್ನು ಎತ್ತಿ ಹಿಡಿಯಬೇಕು, ಈ ಮೂಲಕ ಎಲ್ಲರಿಗೂ ರಾಷ್ಟ್ರೀಯ ಮತ್ತು ಮಾನವ ಭದ್ರತೆಯನ್ನು ಖಚಿತಪಡಿಸಬೇಕು ಎಂದು ಅವರು ಹೇಳಿದ್ದಾರೆ.



ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್

ರೈತಾಪಿ ಕೃಷಿಯ ಸಂರಕ್ಷಣೆ ಮತ್ತು ಕೃಷಿಯ ಕಾರ್ಪೋರೇಟೀಕರಣದ ವಿರುದ್ಧ

ಪುಟ 2 ರಿಂದ

2021 ರ ಕಾರ್ಮಿಕ ಮುಷ್ಕರ ಹಾಗು ರೈತರ ಹೋರಾಟಗಳು ಸಮ್ಮಿಳನಗೊಂಡು ಪಾರ್ಲಿಮೆಂಟ್ ಎದುರು ಪ್ರತಿಭಟನೆಗೆ ರೈತರು ಮುಂದಾದರು; "ದೆಹಲಿಗೆ ಪ್ರವೇಶವಿಲ್ಲ" ಎನ್ನುವ "ಸರ್ಕಾರ"ದ ಹಠಮಾರಿ ಧೋರಣೆಯ ಫಲವಾಗಿ ದೆಹಲಿ ನಾಲ್ಕು ಐದು ಗಡಿಗಳಲ್ಲಿ ನವೆಂಬರ್ 26, 2020 ರಂದು ಲಕ್ಷಾಂತರ ರೈತರ ಹೋರಾಟ ಶುರುವಾಗಿ, ಅನೇಕ ಆರೋಪಗಳು, ಕಷ್ಟ ಕರ್ಪಣ್ಯಗಳು, ಸುಮಾರು 700 ಜನ ರೈತರ ಹುತಾತ್ಮರಾದ ಒಂದು ವರ್ಷದ ಬಳಿಕ ಕೇಂದ್ರ ಸರ್ಕಾರ ಕರಾಳ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಿದೆ. ಅಲ್ಲದೆ ಡಾ॥ ಸ್ವಾಮಿನಾಥ್‌ನ್ ವರದಿಯನ್ವಯ ಉತ್ಪಾನಾದ ವೆಚ್ಚದ ಮೇಲೆ ಶೇ. 50 ರಷ್ಟು ಲಾಭವನ್ನು ಸೇರಿಸಿ ಎಲ್ಲಾ ಕೃಷಿ ಉತ್ಪನ್ನನ್ನಗಳಿಗೆ "ಕನಿಷ್ಠ ಬೆಂಬಲ ಬೆಲೆ" ಕಾತರಿ ಮಾಡುವ ಕಾನೂನು ರೂಪಿಸುವ ಕುರಿತು ಸಮಿತಿಯ ರಚನೆ, ರೈತರ ನೀರಾವರಿ ಪಂಪ್‌ಸೆಟ್‌ಗಳು, ಬಡವರ ಭಾಗ್ಯಜ್ಯೋತಿ, ಕುಟೀರ ಜ್ಯೋತಿ, ವಿದ್ಯುತ್ ಸಂಪರ್ಕಗಳಿಗೆ ನೀಡಲಾಗುತ್ತಿರುವ ಉಚಿತ ವಿದ್ಯುತ್ ರದ್ದತಿ, ಇತರರಿಗೆ ಸಬ್ಸಿಡಿ ರದ್ದತಿ, ವಿದ್ಯುತ್ ಕ್ಷೇತ್ರದ ಮಾರಾಟದಂತಹ ಅಂಶಗಳನ್ನು ಒಳಗೊಂಡಿರುವ ವಿದ್ಯುತ್ ಮಸೂದೆ–2020, ರೈತರು ಮೇಲೆ ಹಾಕಿರುವ ಸಾವಿರಾರು ಕೇಸ್‌ಗಳ ವಾಪಸಾತಿ ಇತ್ಯಾದಿ ಬೇಡಿಕೆಗಳನ್ನು ಒಪ್ಪಿರುವುದು ಈಗ ಚರಿತ್ರೆ ಸೃಷ್ಟಿಸಲು ಸಾಧ್ಯವೆಂಬುದನ್ನು ಈ ಹೋರಾಟ ಮತ್ತೋಮ್ಮೆ ಸಾಬೀತುಪಡಿಸಿದೆ. ಇಂತಹ ಚಾರಿತ್ರಿಕ ಹೋರಾಟ ನಡೆಸಿದ ರೈತಾಪಿ ಜನತೆ, ಈ ಹೋರಾಟಕ್ಕೆ ಬೆಂಬಲವಾಗಿ ನಿಂತ ದೇಶದ ಕಾರ್ಮಿಕ ವರ್ಗವನ್ನು ಸಿಪಿಐ(ಎಂ) ಸಮ್ಮೇಳನ ಅಭಿನಂದಿಸುತ್ತದೆ.



ಈ ಕಾಲಾವಧಿಯಲ್ಲಿ ರಾಜ್ಯದಲ್ಲಿಯು ರಾಷ್ಟ್ರ ಮಟ್ಟದ ಈ ರೈತ ಹೋರಾಟಕ್ಕೆ ಪೂರಕವಾಗಿ ಅತ್ಯಂತ ಪ್ರಬಲ ಹೋರಾಟಗಳನ್ನು ಸಂಘಟಿಸಲಾಗಿದೆ.

ಆದರೆ, ಕೇಂದ್ರ ಸರ್ಕಾರ, ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಿದ್ದ ನಂತರವೂ, ರಾಜ್ಯದಲ್ಲಿ ಜಾರಿಯಲ್ಲಿರುವ ಮೂರು ಕೃಷಿ ಕಾಯ್ದೆಗಳ ತಿದ್ದುಪಡಿಗಳನ್ನು ರದ್ದು ಮಾಡಲು ರಾಜ್ಯ ಸರ್ಕಾರ ಹಿಂದೆ ಮುಂದೆ ನೋಡುತ್ತಿರುವ ಸ್ಥಿತಿಯಿಂದ ರಾಜ್ಯದ "ಕೃಷಿ ಕ್ಷೇತ್ರ"ಕ್ಕೆ ಗಂಭೀರವಾದ ಗಂಡಾಂತರ ಮುಂದುವರಿದಿದೆ.

"ಕೃಷಿಕ" ರಲ್ಲದವರು "ಕೃಷಿ ಭೂಮಿ"ಯನ್ನು ಮಾಡಬಹುದು "ಕೃಷಿಕರು" ಮಾತ್ರ "ಕೃಷಿ ಭೂಮಿ"ಯನ್ನು ಖರೀದಿ ಮಾಡಬಹುದೆಂದಿದ್ದ ಅಂಶವನ್ನು "ಕೃಷಿಕ"ರಲ್ಲದವರು ಯಾವುದೇ ಪರತ್ತುಯಿಲ್ಲದೆ "ಕೃಷಿ ಭೂಮಿ" ಖರೀದಿ ಮಾಡಬಹುದು ಹಾಗೂ 5 ಜನರ ಕುಟುಂಬ ಗರಿಷ್ಠ 54 ಎಕರೆ, 10 ಜನರ ಕುಟುಂಬ 108 ಎಕರೆ ಕೃಷಿ ಭೂಮಿಯ ಒಡೆತನ ಮಾತ್ರ ಹೊಂದಬಹುದು ಎಂದಿದ್ದ ಭೂ ಮಿತಿಯನ್ನು ತೆಗೆದು ಕ್ರಮವಾಗಿ 104, 2016 ಎಕರೆಯವರಿಗೂ "ಭೂಮಿ ಒಡೆತನ" ಹೊಂದಬಹುದೆಂಬ ತಿದ್ದುಪಡಿಗಳನ್ನು "ಕರ್ನಾಟಕ ಭೂ ಸುಧಾರಣಾ ಕಾಯ್ದೆ–1961"ಕ್ಕೆ ತರುವುದರ ಮೂಲಕ "ಉಳುವವನ್ನೇ ಹೊಲದೊಡೆಯ" ಎನ್ನುವ ತತ್ವಕ್ಕೆ ತಿಲಾಂಜಲಿಯನ್ನು ನೀಡಲಾಗಿದೆ ಮಾತ್ರವಲ್ಲ "ಕೃಷಿ ಭೂಮಿ"ಯ ಒಡೆತನವನ್ನು ಶ್ರೀಮಂತರಿಗೆ, ಕಾರ್ಪೋರೇಟ್ ಕಂಪೆನಗಳಿಗೆ ವರ್ಗಾಹಿಸಲಾಗುತ್ತಿದೆ. ಇದರ ಫಲವಾಗಿ ಮುಂದಿನ ದಿನಗಳಲ್ಲಿ, ಕೃಷಿ ಬಿಕ್ಕಟ್ಟಿನ ಫಲವಾಗಿ "ಕೃಷಿ ನಷ್ಟದಾಯಕ ಕ್ಷೇತ್ರ"ವಾಗಿ ಮಾರ್ಪಟಿರುವ ಸ್ಥಿತಿಯಲ್ಲಿ ರೈತರು ಅದರಲ್ಲೂ ವಿಶೇಷವಾಗಿ ರಾಜ್ಯದಲ್ಲಿರುವ ಶೇ. 85 ಕ್ಕಿಂತ ಹೆಚ್ಚಿನ ಸಣ್ಣ, ಅತಿ ಸಣ್ಣ ರೈತರು ತಮ್ಮ ಭೂಮಿಗಳನ್ನು ಮಾರಾಟ ಮಾಡಲಿದ್ದಾರೆ. ಈ ಪ್ರಕ್ರಿಯೆಯೂ ಈಗಾಗಲೇ ರಾಜ್ಯದಲ್ಲಿ ರಾಜ್ಯದಲ್ಲಿ ಆರಂಭವಾಗಿದ್ದು ಕಳೆದ ಒಂದು ವರ್ಷದಲ್ಲಿಯೇ ಶೇ. 70 ಕ್ಕಿಂತ ಹೆಚ್ಚಿನ "ಭೂಮಿ"ಗಳ ನೊಂದಾವಣೆ ದರ ಏರಿಕೆಯಾಗಿದೆ. ಈ ಎಲ್ಲಾ ಬೆಳವಣಿಗೆಗಳ ಫಲವಾಗಿ ಬಂಡವಾಳಶಾಹಿ ಭೂ ಮಾಲೀಕ ವರ್ಗ ಮತ್ತು ಕಾರ್ಪೋರೇಟ್ ಕೃಷಿ ದೊಡ್ಡ ಪ್ರಮಾಣದಲ್ಲಿ ಸೃಷ್ಠಿಯಾಗಲಿದ್ದು, ಕೃಷಿಕರನ್ನು ಕೃಷಿಯಿಂದ ಹೊರಕ್ಕೆ ದಬ್ಬಲಾಗುತ್ತದೆ.

ಕೃಷಿ ಉತ್ಪನ್ನಗಳ ಮಾರಾಟ ಮತ್ತು ಖರೀದಿಸಲು ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿ (ಎಪಿಎಂಸಿ) ಯ ಪ್ರಾಂಗಣದಲ್ಲಿ ಮಾತ್ರ ನಡೆಯಬೇಕೆಂದು ಇದ್ದ ಅಂಶವನ್ನು ತೆಗೆದುಹಾಕಿ ಮಾರುಕಟ್ಟೆಗಳ ಹೊರಗೂ ಕೃಷಿ ಉತ್ಪನ್ನಗಳ ಖರೀದಿ, ಮಾರಾಟ ನಡೆಸಬಹುದೆಂಬ ತಿದ್ದುಪಡಿಯನ್ನು "ಕರ್ನಾಟಕ ಕೃಷಿ ಉತ್ಪನ್ನಗಳ ಮಾರುಕಟ್ಟೆ ಕಾಯ್ದೆ–1966"ಕ್ಕೆ ತರಲಾಗಿದ್ದು ಈ ಮೂಲಕ "ರೈತರ ಮನೆಯ ಬಾಗಿಲುಗೆ ಮಾರುಕಟ್ಟೆ" ಎನ್ನುವ ಆಕರ್ಷಕ್ಕೆ ಘೋಷಣೆಗಳ ಮೂಲಕ ಕೃಷಿ ಮಾರುಕಟ್ಟೆಯನ್ನು ಸಹ ಕಾರ್ಪೋರೇಟ್ ಕಂಪನ ವಹಿಸಲಾಗುತ್ತಿದೆ. ಮಾತ್ರವಲ್ಲ ಕೆಲವು ಗಂಭೀರ ದೋಷಗಳ ನಡುವೆಯು ರೈತರ ಪರವಾಗಿ ಕೆಲಸ ಮಾಡುತ್ತಿದ್ದ ಎಪಿಎಂಸಿ ಮಾರುಕಟ್ಟೆಗಳನ್ನು ಮುಗಿಸಲಾಗುತ್ತಿದೆ. ಕೆಲವು ವರದಿಗಳ ಪ್ರಕಾರ ಈಗಾಗಲೇ ಸುಮಾರು 80 ಮಾರುಕಟ್ಟೆ ಸಮಿತಿಗಳು ವಿದ್ಯುತ್ ಬಿಲ್‌ನ್ನು ಕಟ್ಟಲು ಸಾಧ್ಯವಿಲ್ಲದ ಸ್ಥಿತಿ ನಿರ್ಮಾಣವಾಗಿದೆ. ಹೀಗೆ ನಿಧಾನವಾಗಿ ಕೃಷಿ ಮಾರುಕಟ್ಟೆಗಳು ಮುಚ್ಚಿ, ಇಡೀ "ಕೃಷಿ ಮಾರುಕಟ್ಟೆ" ಕಾರ್ಪೋರೇಟ್ ಕಂಪನಗಳ ಪಾಲಾಗಲಿದೆ.

ರಾಜ್ಯದ "ಜಾನುವಾರು ಹತ್ಯೆ ನಿಷೇದ ಕಾಯ್ದೆ–1964"ಕ್ಕೆ ಹಸು ಸೇರಿದಂತೆ ಎಮ್ಮೆ, ಕೋಣ, ದನಗಳ ಹತ್ಯೆಯನ್ನು ನಿಷೇಧಿಸುವ, ಖರೀದಿ, ಸಾಗಾಣಿಕೆ ಇತ್ಯದಿಗಳಿಗೆ ಸಂಬಂಧಿಸಿ ಇತ್ತೀಚಿನ ತಿದ್ದುಪಡಿಗಳಿಂದ, ಆಹಾರದ ಹಕ್ಕಿನ ಮೇಲೆ ದಾಳಿ, ಈ ವ್ಯಾಪಾರದಲ್ಲಿ ತೊಡಗಿದ್ದ ಹತ್ತಾರ್ ಸಾವಿರಾರು ಕುಟುಂಬಗಳ ಬದುಕಿನ ಮೇಲೆ ದಾಳಿ ನಡೆಸಿರುವುದು ಮಾತ್ರವಲ್ಲ ಬಾರಿ ದೊಡ್ಡ ಪ್ರಮಾಣದಲ್ಲಿ ಹೈನುಗಾರಿಕೆ, ಪಶು ಸಂಗೋಪನೆಯ ಮೇಲೆ ದಾಳಿ ನಡೆದಿದೆ. ಸಂಕಷ್ಟದಲ್ಲಿ ಇರುವ ಹೈನುಗಾರಿಕೆಯನ್ನು ಮತ್ತು ಪಶು ಸಂಗೋಪನೆಯನ್ನು ರೈತರು, ಕೃಷಿ ಕೂಲಿಕಾರರು ಕೈ ಬಿಡುವ ಸ್ಥಿತಿಯನ್ನು ನಿರ್ಮಾಣ ಮಾಡಿದೆ. ಸರ್ಕಾರಗಳ ಉದ್ದೇಶವೂ ಇದೆ. ಆಗಿದ್ದು, ಈ ಇಡೀ "ಕ್ಷೇತ್ರ"ವನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸುವ ಪಿತೂರಿಯು ಅಡಗಿದೆ. ಹೀಗಾಗಿ ಈ ಕಾಯ್ದೆಯ ತಿದ್ದುಪಡಿಗಳಲ್ಲಿ ಇರುವ "ಕೋಮುವಾದಿ ಅಜೆಂಡಾ"ಗಳನ್ನು ವಿರೋಧಿಸುವ ಸಂದರ್ಭದಲ್ಲಿಯೇ ದುಡಿಯುವ ಜನರ ಆರ್ಥಿಕ ಅಂಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪ್ರಧಾನವಾಗಿ ಎತ್ತಬೇಕಿದೆ.

ಹೀಗೆ "ಕೃಷಿ ಭೂಮಿ" ಕೃಷಿ ಉತ್ಪಾದನೆ "ಕೃಷಿ ಮಾರುಕಟ್ಟೆ" ಯನ್ನು "ಕೃಷಿಕರು" "ಸಾಮಾಜಿಕ ಒಡೆತನ"ದಿಂದ ಹೊರಗೆ ತಂದು ಕಾರ್ಪೋರೇಟ್ ಕಂಪನಿಗಳ ಒಡೆತನಕ್ಕೆ, ಆ ಮೂಲಕ "ಕಾರ್ಪೋರೇಟ್ ಕೃಷಿಗೆ" ಒಡ್ಡುವುದೇ ಈ ಮೂರು ಕಾಯ್ದೆಗಳ ತಿದ್ದುಪಡಿಗಳ ಹಿಂದಿರುವ ಅಜೆಂಡಾಗಳು ಎಂಬುದನ್ನು



ಅರಿತುಕೊಳ್ಳಬೇಕಿದೆ. ಈ ಕಾಯ್ದೆ ತಿದ್ದುಪಡಿಗಳ ಮುಂದುವರಿದ ಭಾಗವಾಗಿ ಅಗತ್ಯ ವಸ್ತು ಕಾಯ್ದೆ ತಿದ್ದುಪಡಿಗಳನ್ನು ತಂದು ಚಿಲ್ಲರೆ ವ್ಯಾಪಾರವನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸುವುದು, ಕನಿಷ್ಠ ಬೆಂಬಲ ಬೆಲೆ"ಯಲ್ಲಿ ಖರೀದಿ ನಿಲ್ಲಿಸುವುದು ರೇಷನ್ ವ್ಯವಸ್ಥೆಯನ್ನು ನಾಶ ಪಡಿಸುವುದು, ಇತ್ಯಾದಿ ಮಹತ್ವದ ಅಂಶಗಳನ್ನು ಒಟ್ಟಿಗೆ ಸೇರಿಸಿ ಸಮಗ್ರವಾಗಿ ನೋಡಲು ಸಾಧ್ಯವಾಗಬೇಕಿದೆ.

ಈ ಹಿನ್ನೆಲೆಯಲ್ಲಿ ಕೃಷಿಯಿಂದ "ಉಳುವವನೇ ಹೊಲದೊಡೆಯ" ಎನ್ನುವ ಘೋಷಣೆಯ ಜಾರಿಗಾಗಿ ಅತ್ಯಂತ ಸಂಘರ್ಷಮಯ ಹೋರಾಟವನ್ನು ನಡೆಸಿದ ಚರಿತ್ರೆಯಿರುವ ನಮ್ಮ ಪಕ್ಷ ಮತ್ತು ಸಾಮೂಹಿಕ ಸಂಘಟಣೆಗಳಿಗೆ "ಕೃಷಿಕರ" ಕೈಯಲ್ಲಿ ಭೂಮಿ ಉಳಿಸುವ, ಭೂಮಿ ಸಿಗುವಂತೆ ಮಾಡುವ ಚಳುವಳಿಯು ಆದ್ಯತೆಯಾಗಬೇಕಿದೆ. ಅಲ್ಲದೆ ರೇಷನ್ ಪದ್ಧತಿಯನ್ನು ಬಲಪಡಿಸುವ, ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸುವ, ಬೆಂಬಲ ಬೆಲೆಯಲ್ಲಿ ಕೃಷಿ ಉತ್ಪನ್ನಗಳ ಖರೀದಿ ಮಾಡುವ ವ್ಯವಸ್ಥೆಗಳನ್ನು ಮತ್ತಷ್ಟು ಬಲಪಡಿಸುವುದು ಮೂಲಕ "ರೈತಾಪಿ ಕೃಷಿ"ಯನ್ನು ಸಂರಕ್ಷಿಸಲು, ಕೃಷಿಯ ಕಾರ್ಪೋರೇಟ್ ಕರಣದ ವಿರುದ್ಧ ಹೋರಾಟವನ್ನು ಅತ್ಯಧಿಕ ವ್ಯಾಪಕವಾಗಿ, ಸಮರಶೀಲವಾಗಿ ಸಂಘಟಿಸಬೇಕಿದೆ. ಇದೊಂದು ರಾಜಕೀಯ ಹೋರಾಟವಾಗಿದ್ದು, ರೈತ, ಕಾರ್ಮಿಕ ಸಖ್ಯತೆ, ವಿಶಾಲವಾದ ದೇಶ ಪ್ರೇಮಿಗಳನ್ನು ಒಗ್ಗೂಡಿಸುವುದರ ಮೂಲಕ ಈ ಸಂಘರ್ಷವನ್ನು ಗೆಲ್ಲಬೇಕಿದೆ. ಈ ನಿಟ್ಟಿನಲ್ಲಿ ದೆಹಲಿಯ ರೈತ ಹೋರಾಟ ನಮ್ಮ ಮಾದರಿಯಾಗಬೇಕಿದೆ.

ಕಾರ್ಮಿಕ ಸಂಹಿತೆಗಳ ಜಾರಿಗೆ ರಾಜ್ಯ ಸರಕಾರದ ಸುಗ್ರೀವಾಜ್ಞೆಗೆ ವಿರೋಧ

ಪುಟ 2 ರಿಂದ

ಸರ್ಕಾರವು ಕಾನೂನು ತರಲು ಮುಂದಾಗಿ ಹಿನ್ನಡೆ ಅನುಭವಿಸಿದೆ. ಈ ನಡುವೆ, ಅನೇಕ ಸಂಸ್ಥೆಗಳು ಇದರ ದುರ್ಲಾಭ ಪಡೆದು ತಮ್ಮ ಕಾರ್ಖಾನೆಗಳಲ್ಲಿ ಲೇ–ಆಫ್ ರಿಟ್ರೆಂಚ್‌ಮೆಂಟ್ ಮತ್ತು ಕಾರ್ಖಾನೆ ಮುಚ್ಚಲು ಸರ್ಕಾರದ ಅನುಮತಿಯಿಲ್ಲದೇ ಸಾವಿರಾರೂ ಕಾರ್ಮಿಕರನ್ನು ಬೀದಿ ಹಾಕಿತ್ತು.



ರಾಜ್ಯದಲ್ಲಿರುವ ವಿದ್ಯುತ್ ಚಾಲಿತ 20 ಕಾರ್ಮಿಕರಿಗಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಶೇ.41.36 ಹಾಗೂ ವಿದ್ಯುತ್ ರಹಿತ 40ಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಶೇ.64.24 ರಷ್ಟು ಕೈಗಾರಿಕೆಗಳ ಕಾರ್ಮಿಕರ ಆರೋಗ್ಯ, ಸುರಕ್ಷತೆ ಮತ್ತು ಕೆಲಸದ ಪರಿಸ್ಥಿತಿಗಳ ಮೇಲೆ ರಾಜ್ಯ ಸರ್ಕಾರದ ನಿಯಂತ್ರಣ ಇಲ್ಲದಾಗಲಿದೆ. ಕಾರ್ಖಾನೆ ಮತ್ತು ಬಾಯ್ಲರ್‌ಗಳ ನಿರ್ದೇಶನಾಲಯದ ಮತ್ತು ಕಾರ್ಮಿಕ ಇಲಾಖೆ ಅಧಿಕಾರಿಗಳು ಮತ್ತು ನಿರೀಕ್ಷಕರ ಶಾಸನಬದ್ಧ ನಿರೀಕ್ಷಣೆಯ ಅಧಿಕಾರವು ಇಲ್ಲದಾಗುವುದರಿಂದ ಕಾರ್ಮಿಕರ ಶೋಷಣೆಗೆ ಮುಕ್ತ ಅವಕಾಶ ಕಲ್ಪಿಸಲಿದೆ.

ರಾಜ್ಯಗಳಲ್ಲಿನ ಕನಷ್ಟ ವೇತನ ಕಡೆಗಣಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ನೆಲಮಟ್ಟದ ಕನಿಷ್ಟ ವೇತನ ನಿಗದಿಗೆ ಅವಕಾಶ ಕಲ್ಪಿಸಿ, ನ್ಯಾಯಸಮ್ಮತ ವೇತನ ಜೀವಿತ ವೇತನ ಕಲ್ಪಿಸುವ ಸಂವಿಧಾನ ಆಶಯಗಳಿಗೆ ತಿಲಾಂಜಲಿ ನೀಡಲಿದೆ. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಮತ್ತು ಸೇವಾಷರತ್ತುಗಳು ಇರುವ ಸೌಲಭ್ಯಗಳು ಅಸಂಘಟಿತ ಕಾರ್ಮಿಕರಿಗೆ ಇಲ್ಲದಂತಾಗಲಿದೆ. ನೌಕರರ ಭವಿಷ್ಯ ನಿಧಿ (ಇಪಿಎಫ್) ಮತ್ತು ರಾಜ್ಯ ವಿಮಾ (ಇಎಸ್‌ಐ)ಗೆ ಮಾಲೀಕರ ವಂತಿಗೆ ಪಾಲನ್ನು ಕಡಿಮೆಗೊಳಿಸಲು ಅವಕಾಶ ನೀಡಿ, ಇದರ ನಿಧಿಯನ್ನು ಶೇರುಮಾರುಕಟ್ಟೆಯಲ್ಲಿ ಹೂಡಿ ಜೂಜುಕೋರ ಬಂಡವಾಳಕ್ಕೆ ಲಾಭ ಮಾಡಿಕೊಡಲಿದೆ.

ಹಾಗಾಗಿ ಕಾರ್ಮಿಕ ವಿರೋಧಿಯಾದ ಈ ಸಂಹಿತೆಗಳನ್ನು ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನವು ವಿರೋಧಿಸುತ್ತದೆ. ಈ ಸಂಹಿತೆಗಳಿಗೆ ರೂಪಿಸುವ ನಿಯಮಗಳಲ್ಲಿ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಕೈಬಿಟ್ಟು ಕಾರ್ಮಿಕ ಪರವಾದ ಮತ್ತು ರಾಜ್ಯವ್ಯಾಪಿ



ಸಮಾನ ಕನಿಷ್ಟ ವೇತನ, ಕಾರ್ಮಿಕ ಸಂಘ ಮಾನ್ಯತೆಗೆ, ಗುತ್ತಿಗೆ ಮತ್ತಿತರೆ ಖಾಯಂಯೇತರ ಕಾರ್ಮಿಕರ ಖಾಯಂಗೆ ಕಾನೂನುಗಳನ್ನು ರೂಪಿಸಬೇಕೆಂದು ಈ ಸಮ್ಮೇಳನವು ಒತ್ತಾಯಿಸುತ್ತದೆ.

JANASHAKTHI KANNADA VARA PATRIKE JANUARY 10-16, 2022 Price: Rs. 10/- Date of Publication: 7 JANUARY 2022 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate**



23 ನೇ ರಾಜ್ಯ ಸಮ್ಮೇಳನದ ಕೊನೆಯಲ್ಲಿ ಹಲವು ವರ್ಷಗಳ ಕಾಲ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾಗಿ ಕೆಲಸ ಮಾಡಿರುವ ಹಿರಿಯ ಸಂಗಾತಿಗಳಾದ ಕಾಂ. ವಿ.ಜೆ.ಕೆ.ನಾಯರ್, ಕಾಂ. ಕೆ.ಶಂಕರ್, ಕಾಂ. ಜಿ.ಎನ್.ನಾಗರಾಜ್, ಕಾಂ. ನಿತ್ಯಾನಂದ ಸ್ವಾಮಿಯವರನ್ನು ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಎಂ.ಎ.ಬೇಬಿಯವರು ಸನ್ಮಾನಿಸಿ ಗೌರವಿಸಿದರು.

23 ನೇ ರಾಜ್ಯ ಸಮ್ಮೇಳನದ ಸುಂದರವಾದ ವೇದಿಕೆ ನಿರ್ಮಾಣ ಮತ್ತು ಅಲಂಕಾರಕ್ಕೆ ದುಡಿದ ಸಂಗಾತಿಗಳಾದ ಎಚ್.ಆರ್. ನವೀನ್ ಕುಮಾರ್, ದೇವೇಂದ್ರಗೌಡ, ಮಹೇಶ್ ಪತ್ತಾರ್, ಶಮ್ಮಿ, ವೈಶಾಕ್ ಮತ್ತು ಚಂದ್ರು ಇವರುಗಳಿಗೆ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾದ ಕಾಮ್ರೇಡ್ ಎಂ.ಎ.ಬೇಬಿಯವರು ನೆನಪಿನ ಕಾಣಿಕೆ ನೀಡಿ ಗೌರವಿಸಿದರು.





ಸಮ್ಮೇಳನದ ಎರಡನೇ ದಿನದಂದು ಇತ್ತೀಚಿಗೆ ಶಾಲೆಗಳಲ್ಲಿ ಮೊಟ್ಟೆ ನೀಡುವ ಪ್ರಸ್ತಾಪವನ್ನು ವಿರೋಧಿಸಿದ ಮಠಾಧೀಶರ ವಿರುದ್ಧ 'ಮಠಕ್ಕೆ ಬಂದು ಮೊಟ್ಟೆ ತಿನ್ನುತ್ತೇವೆ ಏನು ಮಾಡುತ್ತೀರಿ?' ಎಂದು ಬಹಿರಂಗ ಸವಾಲು ಹಾಕಿದ ಕೊಪ್ಪಳ ಜಿಲ್ಲೆಯ ಗಂಗಾವತಿಯ ಎಸ್‌ಎಫ್‌ಐ ಸದಸ್ಯೆ ಸರ್ಕಾರಿ ಪ್ರೌಢಶಾಲೆಯ 8ನೇ ತರಗತಿಯ ಅಂಜಲಿಯನ್ನು ಸನ್ಮಾನಿಸಲಾಯಿತು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಕಾಂ. ಪ್ರಕಾಶ್ ಕಾರಟ್ ಕಿರುಕಾಣಿಕೆ ನೀಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಕಾಂ.ಬಿ.ವಿ.ರಾಘವಲು ಮತ್ತು ಕಾಂ. ಎಂ.ಎ. ಬೇಬಿ ಉಪಸ್ಥಿತರಿದ್ದರು.



ಅಕ್ಷರದವ್ವ ಸಾವಿತ್ರಿ ಬಾಯಿ ಫುಲೆ ಹಾಗೂ ಫಾತೀಮಾ ಶೇಕ್ ಜನ್ಮದಿನಾಚರಣೆ:ರಾಜ್ಯ ಸಮ್ಮೇಳನದಲ್ಲಿ ಅಕ್ಷರದವ್ವ ಸಾವಿತ್ರಿ ಬಾಯಿ ಫುಲೆ, ಮತ್ತು ಫಾತಿಮಾ ಶೇಕ್ ಜನ್ಮದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರಾದ ಕಾಮ್ರೇಡ್ ಪ್ರಕಾಶ್ ಕಾರಟ್, ಕಾಮ್ರೇಡ್ ಎಂ.ಎ.ಬೇಬಿ, ಕಾಮ್ರೇಡ್ ಬಿ.ವಿ.ರಾಘವಲು ಇವರು ಭಾವಚಿತ್ರಗಳಿಗೆ ನಮನ ಸಲ್ಲಿಸಿದರು.



ಕ್ರಿಯಾ ಮಾಧ್ಯಮ ಪ್ರಕಟಿಸಿದ ನಾಲ್ಕು ಪುಸ್ತಕಗಳನ್ನು ಮತ್ತು 2022ರ ಕ್ಯಾಲೆಂಡರನ್ನು 23 ನೇ ರಾಜ್ಯ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಾಯಿತು.

ಡಾ. ಕೆ ಪ್ರಕಾಶ್ ಬರೆದಿರುವ **ಸಮಬಾಳಿನ ಸಂಘರ್ಷ : ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಚಳವಳಿಯ ಒಂದು ನೋಟ**;

ಹನ್ನನ್ ಮೊಲ್ಲರವರ ಕೃತಿಯ ಅನುವಾದ **ಅಖಿಲ ಭಾರತ ಕಿಸಾನ್ ಸಭಾ : ಒಂದು ಸಂಕ್ಷಿಪ್ತ ಚರಿತ್ರೆ** ಕನ್ನಡಕ್ಕೆ : ವಾಸುದೇವ ಉಚ್ಚಿಲ;

ಪ್ರೊ. ಪ್ರಭಾತ್ ಪಟ್ನಾಯಕ್‌ರವರ ಲೇಖನಗಳ ಸಂಗ್ರಹ **ಸಾಮ್ರಾಜ್ಯಶಾಹಿಯ ಮೇಲೆ ರೈತರ ವಿಜಯ**, ಅನುವಾದ: ಕೆ.ಎಂ.ನಾಗರಾಜ್; ಮತ್ತು

ಡಾ. ಕೆ.ಹೇಮಲತಾ ಮತ್ತು ನೇತೃತ್ವದ ಅಧ್ಯಯನ ತಂಡಗಳು ಅಧ್ಯಯನಗಳ ಸಂಗ್ರಹ **ನವ–ಉದಾರವಾದಿ ನೀತಿಗಳು ಮತ್ತು ದುಡಿಯುವ ವರ್ಗಗಳು : ಎರಡು ಅಧ್ಯಯನಗಳು** ಅನುವಾದ: ಸಿ.ಆರ್.ಶಾನಭಾಗ, ಟಿ.ಯಶವಂತ–ಇವೇ ಆ ನಾಲ್ಕು ಪುಸ್ತಕಗಳು.

ಕೆ. ನೀಲಾ ಅವರ "ಮುರಿಯಬೇಕಿದೆ ಮೌನ" ಎಂಬ ಕವನ ಸಂಕಲನವನ್ನು ಬಿಡುಗಡೆ ಮಾಡಲಾಯಿತು.



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**